Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–20 | ಮೇ 12–18, 2025 | ಪುಟ 16 | ರೂ.10/–
Volume-19 | Issue-20 | May 12-18, 2025 | Pages 16 | Price. 10/-



ವೈಜ್ಞಾನಿಕ ಕನಿಷ್ಠ ವೇತನದ ಜಾರಿ: ಸರ್ಕಾರದ ಆದ್ಯತೆಯ ಕರ್ತವ್ಯ

ಫ್ಯಾಶಿಸಂನಿಂದ ಮಾನವಕುಲ ಉಳಿಸಿದ ಮಹಾನ್ ವಿಜಯಕ್ಕೆ 80 ವರ್ಷಗಳು

ಅಮೇರಿಕದ ಸರಕುಗಳಿಗೆ ಸುಂಕ ಕಡಿತ ರೈತರ ಹಿತಾಸಕ್ತಿಗೆ ಮಾರಕ





ಮಂಗಳೂರು: ಹತ್ಯೆಗಳು ಮತ್ತು ಪೊಲೀಸ್ ಇಲಾಖೆಯ ವೈಫಲ್ಯಗಳು



ಮಾದರಿ ವ್ಯಕ್ತಿತ್ವದ ಕಾಮ್ರೇಡ್ ಕೆ.ಎಲ್. ಭಟ್ ಇನ್ನಿಲ್ಲ



ಬ್ರಿಟನ್‌ನ ಪ್ರಜಾಪ್ರಭುತ್ವ ಸಂಘರ್ಷದಲ್ಲಿ ಮತ ಧರ್ಮದ ರಣಕಹಳೆ

ಯುರೋಪಿನಲ್ಲೆಲ್ಲ ಕ್ಯಾಥೋಲಿಕ್ ಚರ್ಚ್‌ನ ಪ್ರಭುತ್ವ ಬಹಳ ಗಡುಚಾಗಿತ್ತು. ಕಟ್ಟಳೆಗಳು ನಿಬಂಧನೆಗಳು ವಿಪರೀತ. ಯುರೋಪಿನ ಪ್ರತಿಯೊಬ್ಬರೂ ಒಂದು ಚರ್ಚ್‌ನ ವ್ಯಾಪ್ತಿಯಲ್ಲೇ ಇರಬೇಕಿತ್ತು. ಅದಕ್ಕೆ ಪ್ಯಾರಿಷ್ ಎನ್ನುತ್ತಾರೆ. ಎಲ್ಲರೂ ತಂತಮ್ಮ ಪ್ಯಾರಿಷ್‌ನ ಚರ್ಚ್‌ಗೆ ಹಲವು ಶುಲ್ಕಗಳನ್ನು, ಕಾಣಿಕೆಗಳನ್ನು ನೀಡಬೇಕಾಗಿತ್ತು. ಬಿಟ್ಟಿ ದುಡಿಮೆಗಳೂ ಇವುಗಳ ಜೊತೆಗೆ ಸೇರಿಕೊಂಡಿದ್ದವು.

ಈ ಪ್ಯಾರಿಷ್ ಚರ್ಚ್‌ಗಳು ನ್ಯಾಯಾಲಯದ ಪಾತ್ರ, ಜನರ ದಾನ ಧರ್ಮಗಳು, ಸರ್ಕಾರದ ಬಡವರ ಕಾನೂನುಗಳ ಜಾರಿ ಇತ್ಯಾದಿ ಹಲವು ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಚರ್ಚ್‌ನ ಪಾದ್ರಿಯಿಂದ ಆರಂಭಗೊಂಡು ಆರ್ಚ್ ಬಿಷಪ್‌ನವರೆಗೆ ಹಲವು ಹಂತಗಳ ಅಧಿಕಾರಶಾಹಿ ಯಂತ್ರವನ್ನು ಒಳಗೊಂಡಿತ್ತು.

ಇಂಗ್ಲೆಂಡ್ ಲಗೆ ಕ್ರಿಶ್ಚಿಯನ್ ಧರ್ಮ ಹರಡುದಾಗಿನಿಂದ ರೋಮಿನ ಪೋಪ್ ಅಧೀನದ ಕ್ಯಾಥೋಲಿಕ್ ಚರ್ಚ್‌ನ ಅಂಗವಾಗಿಯೇ ಇಂಗ್ಲೆಂಡ್‌ನ ಚರ್ಚ್ ವ್ಯವಸ್ಥೆ ಬೆಳೆದಿತ್ತು. ಇಂಗ್ಲೆಂಡ್ ರಾಜನಿಗೆ ಇಷ್ಟವಿಲ್ಲದ ನಿರ್ಣಯಗಳನ್ನು ಪೋಪ್ ತೆಗೆದುಕೊಂಡಾಗ ರಾಜ, ಇಂಗ್ಲೆಂಡ್ ಚರ್ಚ್‌ಗಳನ್ನು ಪೋಪ್‌ನ ಅಧಿಕಾರದಿಂದ ಬಿಡಿಸಿದ. ಅಂದಿನಿಂದ ಇಂಗ್ಲೆಂಡ್‌ನ ರಾಜ/ರಾಣಿಯೇ ಚರ್ಚ್‌ನ ಮುಖ್ಯಸ್ಥರಾಗಿದ್ದರು. ಇದಕ್ಕೆ ಆಂಗ್ಲಿಕನ್ ಚರ್ಚ್ ಎಂದು ಹೆಸರು ಬಂತು.

ಆದರೆ ಹಲ ಹಲವು ಧಾರ್ಮಿಕ ಆಚರಣೆಗಳು, ಅದಕ್ಕೆ ಜನ ತೆರಬೇಕಾದ ಸುಂಕಗಳು, ಆಧಿಕಾರ ವ್ಯವಸ್ಥೆ ಕ್ಯಾಥೊಲಿಕ್ ಚರ್ಚ್ ವ್ಯವಸ್ಥೆಯ ಅದೇ ಅಚ್ಚಿನಲ್ಲಿ ಮುಂದುವರೆದಿತ್ತು.

"ಬಿಷಪ್ ಇಲ್ಲದೆ ರಾಜನಿಲ್ಲ"

ಹೀಗೆ ರಾಜ, ರಾಣಿಯರು ರಾಜಕೀಯ ಅಧಿಕಾರದ ಉನ್ನತಾಧಿಕಾರಿಯಾಗಿದ್ದುದು ಮಾತ್ರವಲ್ಲದೆ ಉಚ್ಚ ಧರ್ಮಾಧಿಕಾರಿಯಾಗಿಯೂ ಆಗಿಬಿಟ್ಟು ಎಲ್ಲ ಆದಿಕಾರ ಅವರ ಬಳಿ ಕೇಂದ್ರೀಕೃತವಾಯಿತು. ದೇಶದ ಆಡಳಿತದ ಹಲವು ಅಧಿಕಾರಗಳನ್ನು ಚರ್ಚ್‌ಗಳೇ ನಿರ್ವಹಿಸುತ್ತಿದ್ದವು.

ಒಂದು ಘಟ್ಟದಲ್ಲಿ ಬ್ರಿಟನ್‌ನಲ್ಲಿ ಚರ್ಚ್‌ನ ಪಾದ್ರಿ, ಬಿಷಪ್‌ಗಳ ಸುಲಿಗೆ, ಅಧಿಕಾರ ದುರುಪಯೋಗದ ಬಗ್ಗೆ ಕೂಗೆದ್ದಾಗ ರಾಜ "ಬಿಷಪ್ ಇಲ್ಲದೆ ರಾಜನಿಲ್ಲ" ಎಂಬ ಘೋಷಣೆ ಮಾಡಿದ. ರಾಜ ಪ್ರಭುತ್ವ ಮತ್ತು ಧಾರ್ಮಿಕ ವ್ಯವಸ್ಥೆ ಹೇಗೆ ಹೆಣೆದುಕೊಂಡಿತ್ತು ಎಂಬುದಕ್ಕೆ ಇದು ಪುರಾವೆಯಾಯಿತು.

ಚರ್ಚ್ ಬಹಳಷ್ಟು ಭೂಮಿಯ ಒಡೆಯನಾಗಿ ಕೂಡಾ ಇತ್ತು. ಅವುಗಳನ್ನು ಬೇಸಾಯ ಮಾಡುವವರಿಂದ ಭೂಮಾಲಿಕರಂತೆಯೇ ಗೇಣಿಯನ್ನು ದಯಾ ದಾಕ್ಷಿಣ್ಯವಿಲ್ಲದೆ ಕಿತ್ತುಕೊಳ್ಳುತ್ತಿದ್ದರು. ಉಣ್ಣೆಗೆ ಬೆಲೆ ಹೆಚ್ಚಾದಾಗ ಚರ್ಚ್ ಭೂಮಿಗಳಿಂದಲೂ ರೈತರನ್ನು ಒಕ್ಕಲೆಬ್ಬಿಸಿ ಓಡಿಸಿದ ಬಗ್ಗೆ ಹಿಂದಿನ ಲೇಖನವೊಂದರಲ್ಲಿ ಓದಿದ್ದೀರಿ.

ಧಾರ್ಮಿಕ ಪ್ರಭುತ್ವದ ವಿರುದ್ಧ ಪ್ರಜಾಪ್ರಭುತ್ವೀಯ ಧಾರ್ಮಿಕ ದಂಗೆ

ಇಂತಹ ಧಾರ್ಮಿಕ ಸುಲಿಗೆ ಮತ್ತು ದಬ್ಬಾಳಿಕೆ ವಿರುದ್ಧ ಜರ್ಮನಿಯಲ್ಲಿ ನಾವು ಪೋಪರು ಮತ್ತವರ ಧರ್ಮಾಧಿಕಾರಿಗಳನ್ನು ಮನ್ನಿಸುವುದಿಲ್ಲ. ಬೈಬಲ್ ಗ್ರಂಥದಲ್ಲಿ ಕಾಣುವ ಮೂಲ ರೂಪವೇ ನಮಗೆ ಮಾನ್ಯ ಎಂಬ ಪ್ರಾಟೆಸ್ಟೆಂಟ್ ಪಂಥ ರೂಪುಗೊಂಡಿತು. ಆ ಧಾರ್ಮಿಕ ಎಚ್ಚರದ ಭಾಗವಾಗಿ ಮುಂಝುರ್ ಎಂಬ ಗೇಣಿದಾರ ರೈತ ಧಾರ್ಮಿಕ ಬಿಡುಗಡೆಯನ್ನು ಮತ್ತಷ್ಟು ತೀವ್ರವಾಗಿ ಮುಂದುವರೆಸಿ ಬಡ ರೈತರ ದಂಗೆಯಾಗಿ ಪರಿವರ್ತಿಸಲು ಮಾಡಿದ ಪ್ರಯತ್ನ, ಅದಕ್ಕೆ ಸಿಕ್ಕ ವ್ಯಾಪಕ ಜನಬೆಂಬಲ ದೊರಕಿದ್ದು, ಇದೇ ಪ್ರಾಟೆಸ್ಟೆಂಟ್ ಧರ್ಮದ ಸುಧಾರಕರು ಪ್ಲೇಟ್ ಬದಲಾಯಿಸಿ ರಾಜರು, ಜಹಗೀರುದಾರರ ಜೊತೆ ಸೇರಿ ಮುಂಝುರನ ರೈತ ದಂಗೆಯನ್ನು ಕ್ರೌರ್ಯದಿಂದ ಅಡಗಿಸಿದುದನ್ನು ನೆನಪಿಸಿಕೊಳ್ಳೋಣ.

ಕ್ಯಾಥೊಲಿಕ್ ಧಾರ್ಮಿಕ ದಬ್ಬಾಳಿಕೆ ಯುರೋಪಿನಾದ್ಯಂತ ಹಬ್ಬಿದ್ದರಿಂದ ಪ್ರಾಟೆಸ್ಟೆಂಟ್ ವಿಚಾರಧಾರೆಯೂ ಯುರೋಪಿನಾದ್ಯಂತ ಹಬ್ಬಿತು. ಆದರೆ ವಿವಿಧ ದೇಶಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ. ಜರ್ಮನಿಯ ನಂತರ ಹಾಲಂಡ್‌ನ ಕಾಲ್ವಿನ್ ಎಂಬುವರ ವಿಚಾರಧಾರೆಯ ಆಧಾರದ ಮೇಲೆ ಕಾಲ್ವಿನಿಸ್ಟ್ ಪಂಥ ರೂಪುಗೊಂಡಿತು. ಈ ಪಂಥ ಇಂಗ್ಲೆಂಡ್‌ನ ಬಡ ರೈತರ ನಡುವೆ, ಕೆಳ ಹಂತದ ಭೂಮಾಲಕರ ನಡುವೆ ಹರಡಲಾರಂಭಿಸಿತು.

ಅಲ್ಲಿಯ ವಿವಿಧ ವರ್ಗದ ಜನರ ನಡುವೆ ವಿವಿಧ ಪಂಥಗಳಾಗಿ ರೂಪು ತಳೆದವು. ನಾವು ಆಗಾಗ್ಗೆ ಕೇಳುವ ಬ್ಯಾಪ್ಟಿಸ್ಟ್, ಅನಾ ಬ್ಯಾಪ್ಟಿಸ್ಟ್, ಪ್ಯುರಿಟನ್, ಕ್ವೇಕರ್, ಪ್ರೆಸ್ಬಿಟೇರಿಯನ್, ಯುನಿಟೇರಿಯನ್, ಮೆಥಾಡಿಸ್ಟ್ ಹೀಗೆ ಹಲವು ಪಂಥಗಳು ಕ್ಯಾಥೊಲಿಕ್ ಚರ್ಚ್‌ನ ದಬ್ಬಾಳಿಕೆಯ ವಿರುದ್ಧದ ಪ್ರತಿಭಟನೆಯ ಫಲ.

ಇವೆಲ್ಲ ಧಾರ್ಮಿಕ ಮುಖವಾಡ ಹೊತ್ತ ಸಾಮಾಜಿಕ ಚಳುವಳಿಗಳ ರೂಪಗಳು. ವಿವಿಧ ವರ್ಗಗಳು ತಮ್ಮ ತಮ್ಮ ಅಸ್ತಿತ್ವದ ಪರಿಸ್ಥಿತಿ ಮತ್ತು ಚಿಂತನೆಗಳಿಗೆ ಅನುಗುಣವಾಯ ಬೇರೆ ಬೇರೆಯಾಗಿ ರೂಪುಗೊಂಡ ಪಂಥಗಳು.

ಪ್ಯೂರಿಟನ್ ಪಂಥ

ಅದರಲ್ಲಿ ಪ್ಯೂರಿಟನ್ ಪಂಥ ಎಂಬುದು ಬ್ರಿಟನ್‌ನ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ, ಅಲ್ಲಿಯ ಸಮಾಜದ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸಿತು. ಪ್ಯೂರಿಟನ್ ಎಂದರೆ ಕೆಡಿಸಲ್ಪಟ್ಟಿರುವ ಧರ್ಮವನ್ನು ಶುದ್ಧೀಕರಿಸುವುದು ಎಂದು. ಈ ಪಂಥದವರು ಬೈಬಲ್ ಮಾತ್ರ ನಮಗೆ ಆಧಾರ. ಯಾವ ಪಾದ್ರಿ, ಬಿಷಪ್ ಬೇಕಿಲ್ಲ. ನಾವೇ ಓದಿಕೊಳ್ಳುತ್ತೇವೆ. ನಾವೇ ಒಂದೆಡೆ ಕೂಡಿ ಆರಾಧಿಸುತ್ತೇವೆ. ನಮ್ಮ ಈ ಸಮ್ಮಿಲನವನ್ನು ನಾವೇ ನಡೆಸಿಕೊಳ್ಳುತ್ತೇವೆ. ಅದನ್ನು ನಡೆಸಲು ಬೇಕಾದವರನ್ನು ನಾವೇ ಆಯ್ಕೆ ಮಾಡಿಕೊಳ್ಳುತ್ತೇವೆ ಎಂಬುದು ಅವರ ಒಂದು ತತ್ವ. ಇದು ತಳಮಟ್ಟದ ಧಾರ್ಮಿಕ ಸ್ವಾಯತ್ತತೆಯ ತತ್ವ. ಈ ಕಾರಣಕ್ಕಾಗಿ ಅವರನ್ನು ಕಾಂಗ್ರೇಗೆಷನಿಸ್ಟ್ ಎಂದು ಕರೆಯಲ್ಪಟ್ಟರು (ಆ ವೇಳೆಗೆ ಲ್ಯಾಟಿನ್‌ನಲ್ಲಿ ಮಾತ್ರ ಲಭ್ಯವಿದ್ದ ಬೈಬಲ್ ಅನ್ನು ಇಂಗ್ಲಿಷಿಗೆ ಭಾಷಾಂತರ ಆಗಿತ್ತು. ಬಹಳಷ್ಟು ಜನ ರೈತರಿಗೆ ಓದು ಬರುತ್ತಿತ್ತು ಎಂಬುದು ಇದರ ಅಡಿಪಾಯ.) ಕ್ಯಾಥೊಲಿಕ್ ಚರ್ಚ್ ಅನ್ನು ಧಿಕ್ಕರಿಸಿದ್ದರಿಂದ ಪುಟ 4 ಕ್ಕೆ

ಶ್ರಮಿಕ ಶಕ್ತಿಯ ಬೆಂಬಲದೊಂದಿಗೆ ಗೆದ್ದ ಬ್ರಿಟನ್‌ನ ಪ್ರಜಾಪ್ರಭುತ್ವ ಕ್ರಾಂತಿ

ಭಾಗ 25

ಜಿ.ಎನ್. ನಾಗರಾಜ್

ಬ್ರಿಟಿಷ್ ಜನರ ಮೇಲೆ ಬ್ರಿಟನ್ ಸರ್ಕಾರದ ಪರಿ ಪರಿಯ ಕ್ರೌರ್ಯ, ದೌರ್ಜನ್ಯಗಳು ರಾಜ ಪ್ರಭುತ್ವದ ಕಾಲದಲ್ಲಿ ಹದಿನಾರನೆಯ ಶತಮಾನದಲ್ಲಿಯೇ ಆರಂಭವಾಯಿತು. 17 ನೆ ಶತಮಾನದ ಮಧ್ಯ ಸಮಯದಲ್ಲಿ ಪ್ರಜಾಪ್ರಭುತ್ವ ಕ್ರಾಂತಿಯಾಗಿ ಪಾರ್ಲಿಮೆಂಟ್‌ನ ಪರಮಾಧಿಕಾರ ಸ್ಥಾಪನೆಯಾದ ಮೇಲೂ ನಿರಂತರವಾಗಿ ಮುಂದುವರಿಯಿತು. ಹಲವೊಮ್ಮೆ ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ. ಹಿಂದಿನ ಹಲವು ಲೇಖನಗಳಲ್ಲಿ ಈ ಕ್ರೌರ್ಯದ ಹಲವು ಆಯಾಮಗಳ ಬಗ್ಗೆ ಓದಿದ್ದೀರಿ.

ಇದರಿಂದ ಪ್ರಜಾಪ್ರಭುತ್ವದ ಬಗೆಗೆಯೇ ಹಲವು ಪ್ರಶ್ನೆಗಳು ಉದ್ಭವವಾಗುತ್ತವೆ. ಜನರ ಮೇಲೆಸಗುವ ಕ್ರೌರ್ಯಗಳ ವಿಷಯದಲ್ಲಿ ಪ್ರಭುತ್ವದಲ್ಲಿ ಆದ ಕ್ರಾಂತಿಕಾರಕ ಬದಲಾವಣೆಯಿಂದ ವ್ಯತ್ಯಾಸವಾಗಲಿಲ್ಲವೇಕೆ? ಪ್ರಜೆಗಳ ಪ್ರಭುತ್ವದಲ್ಲಿಯೂ ಪ್ರಜೆಗಳ ಮೇಲೆ ಇಂತಹ ಕ್ರೌರ್ಯವೇ? ಪ್ರಜಾಪ್ರಭುತ್ವ ಕ್ರಾಂತಿಯ ಮೊದಲು ಮತ್ತು ನಂತರ ವ್ಯಕ್ತವಾದ ಮಾನವೀಯತೆ, ಸಮಾನತೆ, ಸ್ವಾತಂತ್ರ್ಯ ಮೊದಲಾದ ತತ್ವ, ವಿಚಾರಗಳಿಗೇನೂ ಬೆಲೆಯಿಲ್ಲವೇ?

ಪ್ರಜಾಪ್ರಭುತ್ವ ಕ್ರಾಂತಿ ಸಂಭವಿಸಿದ ಕಾಲದ ವಿವಿಧ ಪ್ರಕ್ರಿಯೆಗಳ ವಿವರಗಳ ಒಳಹೊಕ್ಕರೆ ಮಾತ್ರ ಒಂದಷ್ಟು ಸ್ಪಷ್ಟತೆ ದೊರಕಬಹುದು.

ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುವ ಮೊದಲೇ ಬ್ರಿಟನ್‌ನಲ್ಲಿ ಪಾರ್ಲಿಮೆಂಟ್ ಒಂದು ಅಸ್ತಿತ್ವದಲ್ಲಿತ್ತು. ರಾಜ ತನಗೆ ದೊರೆಯುತ್ತಿದ್ದ ಆದಾಯ ಸಾಲದಾದಾಗ ಹೆಚ್ಚು ತೆರಿಗೆ ವಸೂಲಿ ಮಾಡಲು ರಾಜ್ಯದ ವಿವಿಧ ಭಾಗಗಳ ಆಡಳಿತಗಾರರನ್ನು ಸೇರಿಸುವ ಪದ್ಧತಿ ಜಾರಿಗೆ ತಂದರು. ಅದೊಂದು ರೀತಿಯ ರಾಜ ಸಭೆ. ಅದನ್ನು ಪಾರ್ಲಿಮೆಂಟ್ ಎಂದು ಕರೆಯಲಾಗುತ್ತಿತ್ತು. ಇದರಲ್ಲಿ ದೇಶದ ವಿವಿಧ ಭಾಗಗಳನ್ನು ಜಾಗೀರು ನೀಡಲಾದ ರಾಜ ವಂಶದವರು ಮತ್ತು ಆತ್ಮೀಯರಾದ ಸರದಾರರು ಮತ್ತು ಚರ್ಚ್‌ನ ಉಚ್ಚ ಧರ್ಮಾಧಿಕಾರಿಗಳು ಹೌಸ್ ಆಫ್ ಲಾರ್ಡ್ಸ್ ಎಂದು ಪ್ರತ್ಯೇಕವಾಗಿ ಸೇರುತ್ತಿದ್ದರು. ನಗರಗಳ ವಿವಿಧ ವಿಭಾಗಗಳಿಂದ ಒಂದು ವಿಭಾಗಕ್ಕೆ ಇಬ್ಬರು, ಕೌಂಟಿ ಎಂಬ ಗ್ರಾಮೀಣ ಭಾಗಗಳಿಂದ ಒಂದು ಕೌಂಟಿಗೆ ಇಬ್ಬರು ರಾಜನಿಂದ ಸರ್ ಎಂಬ ಮಾನ್ಯತೆ ಪಡೆದವರು ಹೌಸ್ ಆಫ್ ಕಾಮನ್ಸ್ ಎಂಬ ಸಭೆಯಾಗಿ ಸೇರುತ್ತಿದ್ದರು.

ದೂರ ವ್ಯಾಪಾರ, ಸಾಗರಯಾನಗಳ ಲಾಭಗಳಿಕೆ ಹೆಚ್ಚಾದಂತೆ ಪಾರ್ಲಿಮೆಂಟ್‌ನ ನಗರ ಪ್ರತಿನಿಧಿಗಳ ಬಲ ಹೆಚ್ಚಾಯಿತು. ತೆರಿಗೆ ಏರಿಕೆ ಮತ್ತು ಸೈನ್ಯದ ನಿಯಂತ್ರಣದ ವಿಷಯದಲ್ಲಿ ರಾಜನಿಗೂ ಕಾಮನ್ಸ್ ಸಭೆಗೂ ಸಂಘರ್ಷ ಆರಂಭವಾದ ಬಗ್ಗೆ ಹಿಂದಿನ ಲೇಖನವೊಂದರಲ್ಲಿ ವಿವರಿಸಲಾಗಿದೆ.

ಈ ಸಂಘರ್ಷದಲ್ಲಿ ಲಾರ್ಡ್ಸ್‌ಗಳು, ಕಾಮನ್ಸ್ ಸಭೆಯಲ್ಲಿಯೂ ಹಲವರು ರಾಜನಿಷ್ಠ ಬಣವಾಗಿದ್ದರು. ಕಾಮನ್ಸ್‌ನ ಬಹುಮತ ರಾಜನ ಮನಸೇಚ್ಛೆಯ ಆಡಳಿತಕ್ಕೆ ವಿರೋಧವಾಗಿತ್ತು.

ರಾಜ ಸೈನ್ಯದ ಬಲವನ್ನು ತನಗೆ ವಿರೋಧಿಗಳಾದ ಕಾಮನ್ಸ್ ಸಭೆಯ ಸದಸ್ಯರ ಮೇಲೆ ಬಳಸಲು ಯತ್ನಿಸಿದಾಗ ಅವರನ್ನು ರಕ್ಷಿಸಿದವರು ಲಂಡನ್ ನಗರದ ಸಾಮಾನ್ಯ ಜನರು. ಹೀಗೆ ಸಂಘರ್ಷ ಮಿಲಿಟರಿ ಸ್ವರೂಪ ಪಡೆಯಿತು. ಸೈನ್ಯ ಯಾವಾಗಲೂ ರಾಜನ ನಿಯಂತ್ರಣದಲ್ಲಿ, ಜಾಗೀರು ಪಡೆದ ಸರದಾರರ ಹತೋಟಿಯಲ್ಲಿ, ರಾಜ ನೇಮಿಸಿದ ಸೇನಾಧಿಕಾರಿಗಳ ನೇತೃತ್ವದಲ್ಲಿರುತ್ತಿತ್ತು. ಹೀಗಾಗಿ ಉತ್ತಮ ತರಬೇತಿ ಪಡೆದ ಸೈನ್ಯ, ಅದರ ಸೇನಾಧಿಕಾರಿಗಳು ರಾಜನ ಕಡೆ. ಪಾರ್ಲಿಮೆಂಟ್ ಪರವಾಗಿ ಕೆಲವು ಮಾನ್ಯರು ಮತ್ತು ಅವರ ನಿಯಂತ್ರಣದ ಒಂದಿಷ್ಟು ಸೈನ್ಯ ಮಾತ್ರ. ಉಳಿದವರು ಯುದ್ಧವನ್ನರಿಯದ ನವಶ್ರೀಮಂತರಾದ ವ್ಯಾಪಾರಿಗಳು, ರಾಜನಿಂದ ತೊಂದರೆಗೊಳಗಾಗಿದ್ದ ಭೂಮಾಲೀಕರು. ಆಗಿನ ಪಾರ್ಲಿಮೆಂಟ್ ತುಂಬಿದ್ದುದೇ ಇಂತಹ ಜನರಿಂದ.

ರಾಜನ ಸೇನಾಧಿಕಾರಿಗಳಿಗೆ, ಸರದಾರರಿಗೆ ರಾಜ ನೀಡಿದ ಜಾಗೀರುಗಳನ್ನು, ಮನ್ನಣೆ, ಅಧಿಕಾರಗಳನ್ನು ಪಡೆದವರಿಗೆ ಪುಟ 4 ಕ್ಕೆ

ಸಂಪಾದಕೀಯ

ಅಕ್ರಮ ಗಣಿಗಾರಿಕೆ: ಭಾಗಿಯಾದ ಎಲ್ಲರ ಮೇಲೂ ಕ್ರಮ-ನಷ್ಟ ವಸೂಲಿ ಅಗತ್ಯ

ಅಕ್ರಮ ಗಣಿಗಾರಿಕೆಯ ಮೊಕದ್ದಮೆಯಲ್ಲಿ ಆರೋಪಿಯಾಗಿದ್ದ ಮಾಜಿ ಸಚಿವ, ಶಾಸಕ ಗಾಲಿ ಜನಾರ್ದನರೆಡ್ಡಿ ಮತ್ತು ಇತರೆ ಮೂವರನ್ನು ತಪ್ಪಿಸ್ಥರು ಎಂದು ಸಿ.ಬಿ.ಐ.ನ ವಿಶೇಷ ನ್ಯಾಯಾಲಯ ತೀರ್ಪು ನೀಡಿ ಶಿಕ್ಷೆ ಕೊಟ್ಟಿರುವುದು ಸ್ವಾಗತಾರ್ಹ. ನ್ಯಾಯಾಲಯವು ಗಾಲಿ ಜನಾರ್ದನರೆಡ್ಡಿಗೆ ಏಳು ವರ್ಷಗಳ ಕಾರಾಗೃಹದ ಶಿಕ್ಷೆ ಮತ್ತು 10 ಸಾವಿರ ರೂ.ಗಳ ದಂಡ ವಿಧಿಸಿದೆ ಮತ್ತು ಕಠಿಣ ಶಬ್ದಗಳಲ್ಲಿ ಕೃತ್ಯವನ್ನು ಟೀಕಿಸಿದೆ. ನ್ಯಾಯಾಲಯದ ತೀರ್ಪನ್ನು ಅನುಸರಿಸಿ ಭಾರತದ ಸಂವಿಧಾನದ 191 (1) (ಇ) ಯನ್ವಯ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಶಾಸನ ಸಭೆಯ ಸದಸ್ಯತ್ವವನ್ನು ರದ್ದುಗೊಳಿಸಿ ಆದೇಶವನ್ನು ಹೊರಡಿಸಿದ್ದಾರೆ. 13 ವರ್ಷಗಳಷ್ಟು ದೀರ್ಘಾವಧಿಯನ್ನು ತೆಗೆದುಕೊಂಡ ಬಳಿಕವಾದರೂ ಇಂತಹ ತೀರ್ಪು ನೀಡಿ ಶಿಕ್ಷೆ ವಿಧಿಸಿದ್ದು, 884 ಕೋಟಿ ರೂ.ಗಳನ್ನು ಸರ್ಕಾರಕ್ಕೆ ವಂಚಿಸಲಾಗಿರುವುದನ್ನು ಸಾಬೀತು ಮಾಡಿರುವುದು ಮಹತ್ವದ್ದಾಗಿದೆ. ಇದು ಗಣಿ ಉದ್ಯಮಗಳು, ಅಧಿಕಾರಶಾಹಿ ಮತ್ತು ರಾಜಕಾರಣಿಗಳಿಗೆ ಇರಬೇಕಾದ ಉತ್ತರದಾಯಿತ್ವವನ್ನು ಎತ್ತಿ ಹಿಡಿದು ವಂಚನೆಗಳಿಗೆ ಪೆಟ್ಟು ಕೊಟ್ಟಿದೆ. ಈ ತೀರ್ಪು ನ್ಯಾಯಾಂಗದ ಮೇಲಿನ ವಿಶ್ವಾಸವನ್ನು ಒಂದಿಷ್ಟು ಹೆಚ್ಚಿಸಿದೆ. ಹೀಗಿರುವಾಗಲೂ ಈ ತೀರ್ಪಿನ ಸುತ್ತ ಹಲವು ಪ್ರಶ್ನೆಗಳಿವೆ.

ಗಣಿ ಹಗರಣ ಎನ್ನುವುದು ಕೇವಲ ಗಾಲಿ ಜನಾರ್ದನರೆಡ್ಡಿಯಿಂದ ಮಾತ್ರವೇ ನಡೆದಿತ್ತು ಎನ್ನುವುದು ಸೀಮಿತ ದೃಷ್ಟಿ ಮತ್ತು ಸತ್ಯಕ್ಕೆ ಮಾಡುವ ಅಪಚಾರ. ಈಗಲೂ ಸಿಬಿಐ ನ್ಯಾಯಾಲಯ ಎರಡನೆಯ ಅಪರಾಧಿ ಜನಾರ್ದನರೆಡ್ಡಿ ಜೊತೆಗೆ ಅವರ ಓಬಳಾಪುರಂ ಮೈನಿಂಗ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಆಂಧ್ರದ ಇಬ್ಬರು ಅಧಿಕಾರಿಗಳಿಗೆ ಶಿಕ್ಷೆ ವಿಧಿಸಿದೆ. ಕಂಪನಿಗೆ ಒಂದು ಲಕ್ಷ ದಂಡ ಹಾಕಿದೆ. ಆದರೆ ಗಣಿ ಹಗರಣ ಇಷ್ಟಕ್ಕೆ ಸೀಮಿತ ಅಲ್ಲ ಎನ್ನುವುದನ್ನು ಬೇಲಿಕೇರಿ ಬಂದರಿನಲ್ಲಿ ಅದಿರು 'ಮಾಯ'ವಾದ ಹಗರಣ ಒಳಗೊಂಡ ಘಟನೆಗಳು, ಅಂದಿನ ಕಾನೂನುಗಳ ನಗ್ನ ಉಲ್ಲಂಘನೆಯ ಪ್ರಕರಣಗಳು, ಪ್ರಶ್ನಿಸುವವರ, ವಿರೋಧಿಗಳ ಮೇಲಿನ ಹಲ್ಲೆ, ದೌರ್ಜನ್ಯ, ದಬಾವಣೆ ಮುಂತಾದ ವಿದ್ಯಾಮಾನಗಳು ನಿಚ್ಚಳ ಸತ್ಯವನ್ನು ಸಾರುತ್ತಿವೆ. ವಿಶೇಷವಾಗಿ ಗಣಿ ಹಗರಣ ತನಿಖೆ ನಡೆಸಿದ ಅಂದಿನ ಲೋಕಾಯುಕ್ತ ನ್ಯಾ.ಎನ್.ಸಂತೋಷ ಹೆಗಡೆ ಅವರ 466 ಪುಟಗಳ ಗಣಿ ಅಕ್ರಮಗಳ ಕುರಿತ ವರದಿ (2011) ಕಟು ವಾಸ್ತವವನ್ನು ಜಗಜ್ಜಾಹೀರುಗೊಳಿಸಿದೆ.



ಲೋಕಾಯುಕ್ತರ ವರದಿ ಬಹಿರಂಗವಾದ ಹಿನ್ನೆಲೆಯಲ್ಲೇ ಅಂದಿನ ಬಿಜೆಪಿ ಪಕ್ಷದ ಮುಖ್ಯಮಂತ್ರಿ ಬಿ.ಎಸ್.ಯಡ್ಯೂರಪ್ಪ, ಸಚಿವರಾಗಿದ್ದ ಗಾಲಿ ಜನಾರ್ಧನರೆಡ್ಡಿಯವರು ರಾಜಿನಾಮೆ ಸಲ್ಲಿಸಬೇಕಾಗಿ ಬಂದಿತ್ತು. ಅನುಕೂಲ ಪಡೆದ ಮೈನಿಂಗ್ ಕಂಪನಿಯೊಂದರಿಂದ ಹತ್ತು ಕೋಟಿ ಹಣವನ್ನು ಕುಟುಂಬದ ಟ್ರಸ್ಟ್ ಗೆ ಲಂಚವಾಗಿ ಪಡೆದ ಬಗ್ಗೆ ಮೊಕದ್ದಮೆಯಲ್ಲಿ ಯಡ್ಯೂರಪ್ಪ ಜೈಲು ಪಾಲು ಆಗಬೇಕಾಗಿ ಬಂತು. ಈ ಎಲ್ಲ ಅಕ್ರಮಗಳಿಗೂ ಹುರಿದುಂಬಿಸಿ ಫಲಾನುಭವಿಗಳಾಗಿದ್ದ ಬಿಜೆಪಿ ನಾಯಕರೇ ಮುಖ ಉಳಿಸಿಕೊಳ್ಳಲು ಇವರ ರಾಜೀನಾಮೆಗೆ ಒತ್ತಡ ತಂದಿದ್ದರು. ಲೋಕಾಯುಕ್ತರ ವರದಿಯಲ್ಲಿ ಇದೇ ಸಂಪುಟದ ಇನ್ನಿಬ್ಬರು ಸಚಿವರ ಮೇಲೂ ಆರೋಪಗಳಿದ್ದವು. ಲೋಕಾಯುಕ್ತರ ವರದಿಯು ಅಲ್ಲಿ ನಡೆದ ಬ್ರಹ್ಮಾಂಡ ಭ್ರಷ್ಟಾಚಾರ, ಲಕ್ಷಾಂತರ ಕೋಟಿ ಮೌಲ್ಯದ ಸಂಪತ್ತಿನ ಲೂಟಿ, ಪರಿಸರದ ಮೇಲಾದ ಅಘಾತಕರ ಆಕ್ರಮಣ-ಹಾನಿ, ಜನರ ಆರೋಗ್ಯದ ಮೇಲಾದ ದುಷ್ಪರಿಣಾಮಗಳು, ಹರಿದಾಡಿದ ಅಕ್ರಮ ಹಣದಿಂದಾಗಿ ಸಮಾಜ ಕಲುಷಿತವಾದುದು ಮುಖ್ಯವಾಗಿ ಯುವಜನರ ಮೇಲೆ ಉಂಟು ಮಾಡಿದ ಅಧಃಪತನದ ಸಂಸ್ಕೃತಿ-ಅದರ ಅಪಾಯಕಾರಿ ಮೌಲ್ಯಗಳು, ಅಪರಾಧೀಕರಣದ ಪ್ರಕ್ರಿಯೆಗಳು ಮುಂತಾಗಿ ವಿಶದವಾಗಿ ದಾಖಲಿಸಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಕಬ್ಬಿಣದ ಅದಿರಿಗೆ ಭಾರಿ ಬೇಡಿಕೆ ಮತ್ತು ಬೆಲೆ ಇರುವಾಗ ಸರ್ಕಾರಿ ಸ್ವಾಮ್ಯದ ಮೈಸೂರ್ ಮಿನರಲ್ಸ್ ಲಿಮಿಟೆಡ್ (ಎಂ.ಎಂ.ಎಲ್) ಕಂಪನಿ ನಷ್ಟ ಅನುಭವಿಸಿದ್ದು ಹೇಗೆ ಎನ್ನುವ ಪ್ರಶ್ನೆಗೆ ಖಾಸಗಿ ಉದ್ದಿಮೆದಾರರು, ಗಣಿಗಳ್ಳರು, ಅಧಿಕಾರಸ್ಥ ರಾಜಕಾರಣಿಗಳು, ಅಧಿಕಾರಶಾಹಿಗಳ ಕೂಟದ ಲೂಟಿಯನ್ನು ಲೋಕಾಯುಕ್ತರು ಆ ವರದಿಯಲ್ಲಿ ಬಯಲಿಗಿಟ್ಟಿದ್ದಾರೆ.

ಬಿಜೆಪಿ ಪಕ್ಷದ ಮುಖಂಡರೂ ಹಾಗೂ ಶಾಸಕ-ಸಚಿವರೂ ಆಗಿದ್ದ ಜನಾರ್ಧನ ರೆಡ್ಡಿ ಮತ್ತು ಸಹೋದರರು ತಮ್ಮ ಅಧಿಕಾರ ಬಳಸಿ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ನಡೆಸಿದ ಅಕ್ರಮಗಳು ಲೋಕಾಯುಕ್ತ ವರದಿಯಲ್ಲಿವೆ. ಇಂತಹ ವ್ಯವಸ್ಥಿತ ಲೂಟಿ ಆಂಧ್ರದ ಓಬಳಾಪುರಂ ಪ್ರದೇಶದಲ್ಲೂ ನಡೆದಿದೆ. ರೆಡ್ಡಿ ಸಹೋದರರು ಮತ್ತು ಶ್ರೀರಾಮುಲು ರವರನ್ನು ಒಳಗೊಂಡಿದ್ದ 'ಗಾಲಿ ಗ್ಯಾಂಗ್' ಕರ್ನಾಟಕ-ಆಂಧ್ರದ ಗಡಿಯ ಮೂಲ ಮೇರೆ ಕಲ್ಲುಗಳನ್ನೇ ಕಿತ್ತೆಸೆದು ಅಲ್ಲಿದ್ದ ಸುಂಕ್ಲಮ್ಮನ ದೇವಸ್ಥಾನ ಕಿತ್ತೆಸೆದು ಗಡಿ ಗುರುತು ಅಳಿಸಿ ಹಾಕಿದ್ದರು. ಹೀಗೆ ಮಾಡುವ ಮೂಲಕ ತಮ್ಮ ಲೂಟಿಗಾಗಿ ಕರ್ನಾಟಕದ ನೆಲವನ್ನು ಆಂಧ್ರದ ಭಾಗವನ್ನಾಗಿ ಮಾಡಿ ರಾಜ್ಯಕ್ಕೆ ಘೋರ ಅನ್ಯಾಯವನ್ನು ಎಸಗಿದ್ದರು. ಆಗ ಸಚಿವ ಜನಾರ್ಧನ ರೆಡ್ಡಿ ಅವರ ಸಹೋದರ ಕರುಣಾಕರ ರೆಡ್ಡಿ ಕಂದಾಯ ಸಚಿವರಾಗಿ ಇದ್ದರು ಎನ್ನುವುದು ಗಮನಿಸಬೇಕಾದ ಅಂಶ. ಈ 'ಗಾಲಿ ಗ್ಯಾಂಗ್' ಕರ್ನಾಟಕದಲ್ಲಿ ಬಿಜೆಪಿಯಾಗಿ ಆಂಧ್ರದಲ್ಲಿ ಅಂದಿನ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಅವರೊಂದಿಗೆ ಕಾಂಗ್ರೆಸ್ಸಾಗಿ ವೇಷ ಬದಲಿಸಿ ಆಟ ಆಡುತ್ತಿತ್ತು. ಈ ಪ್ರದೇಶಗಳಲ್ಲಿ 29 ಲಕ್ಷ ಮೆಟ್ರಿಕ್ ಟನ್ ಅದಿರು ವಿದೇಶಕ್ಕೆ ಸಾಗಾಣಿಕೆ ಮಾಡಲಾಗಿದೆ ಎಂದೂ, ರಾಜ್ಯ ಬೊಕ್ಕಸಕ್ಕೆ ಆದ ನಷ್ಟ 884 ಕೋಟಿ ರೂ.ಗಳು ಎಂದು ಸಿಬಿಐ ನ್ಯಾಯಾಲಯ ಹೇಳಿದೆ. ಲೋಕಾಯುಕ್ತರ ವರದಿ ರೂ.12,228 ಕೋಟಿ (ಇನ್ನೊಂದು ಅಂದಾಜಿನಂತೆ ರೂ.16,085 ಕೋಟಿ) ಎಂದು ಅಂದಾಜಿದೆ.

ಈ ಒಟ್ಟಾರೆ ಗಣಿ ಹಗರಣದಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ಮೀರಿದ ಲೂಟಿ ನಡೆದಿದೆ ಎನ್ನುವುದನ್ನು ಲೋಕಾಯುಕ್ತರ ವರದಿ ಮತ್ತು ಇತರೆ ಸಂಸ್ಥೆಗಳ ವರದಿಗಳು ಸ್ಪಷ್ಟವಾಗಿ ಹೇಳುತ್ತವೆ. (ಲೋಕಾಯುಕ್ತ ನ್ಯಾ. ಸಂತೋಷ ಹೆಗಡೆ ನೇತೃತ್ವದ ಸಮಿತಿ ವರದಿ ಪ್ರಕಾರ 2006-07 ಮತ್ತು 2010-11 ರ ನಡುವೆ 77.74 ಲಕ್ಷ ಟನ್ ಅದಿರನ್ನು ಅಕ್ರಮವಾಗಿ ರಫ್ತು ನಡೆದಿದೆ) ಇದರಲ್ಲಿ ಗಾಲಿ ಜನಾರ್ಧನ ರೆಡ್ಡಿ, ಶ್ರೀರಾಮುಲು, ಅಂದಿನ ಕಂದಾಯ ಖಾತೆಯನ್ನೇ ಹಿಡಿದು ಕೂತಿದ್ದ ಕರುಣಾಕರ ರೆಡ್ಡಿ ಗ್ಯಾಂಗಿಗೆ ಪಾಲು ಇರುವಂತೆ ಬಹುದೊಡ್ಡ ಪಾಲು ಇವರಿಗೆ ಎಲ್ಲ ರೀತಿಯಿಂದಲೂ ಆಶ್ರಯ ನೀಡಿದ್ದ ಬಿಜೆಪಿಯ ನಾಯಕರಿಗೂ ಸಂದಿದೆ ಎನ್ನುವುದು ಗಮನಿಸಬೇಕು. ಬಹಳ ಮುಖ್ಯವಾಗಿ, ಅಂದಿನ ಕೇಂದ್ರ ಸಚಿವೆ ಸುಷ್ಮಾ ಸ್ವರಾಜ್ ಅವರ ಅಭಯಹಸ್ತ ಬಹು ದೊಡ್ಡದಿತ್ತು. ಕಾಂಗ್ರೆಸ್ಸಿನ ಭ್ರಷ್ಟಾಚಾರದ ವಿರುದ್ಧ ಸಮರ ಘೋಷಿಸಿದ್ದೇವೆ ಎಂದು ಸಾರುತ್ತಿದ್ದ ಬಿಜೆಪಿ ರಾಷ್ಟ್ರಿಯ ನಾಯಕ ಲಾಲ್ ಕೃಷ್ಣ ಅಡ್ವಾಣಿಯವರಿಗೆ ಗಣಿ ಹಗರಣಗಳ ಬಗೆಗೆ ತಿಳಿದಿರಲಿಲ್ಲವೆಂದು ಯಾರಾದರೂ ಭಾವಿಸಿದರೆ ಅದು ಹಾಸ್ಯಾಸ್ಪದ ವಿಚಾರವಾಗುತ್ತದೆ. ಹೀಗೆ ಬಂದ ಟೀಕೆಗಳಿಗೆ ಮುಖ ಕೊಡಲು ಆ ನಾಯಕರಿಗೆ ಆಗಿರಲಿಲ್ಲ! ಈ ಎಲ್ಲರ ಆಶ್ರಯದಲ್ಲೇ ರೆಡ್ಡಿ ಗ್ಯಾಂಗ್ ಬಲಿತು ಬೆಳೆದು, ಉಕ್ಕು ಉದ್ಯಮಿಗಳಾಗಲು

ರಾಷ್ಟ್ರ ರಾಜಕಾರಣಕ್ಕೂ, ಏಣಿ ಹಾಕಲು ಯತ್ನಿಸಿದ್ದರು. ಗಣಿ ಲೂಟಿಯಿಂದ ಗಳಿಸಿದ ಅಕ್ರಮ ಹಣದಿಂದಲೇ, ಚುನಾವಣೆಯಲ್ಲಿ ದುಡ್ಡು ಚೆಲ್ಲಿ, ಕರ್ನಾಟಕ ರಾಜಕೀಯದಲ್ಲಿ ಬೇರೆ ಪಕ್ಷಗಳ ಶಾಸಕರುಗಳನ್ನು ಖರೀದಿ ಮಾಡಿ, ಬಿಜೆಪಿ ಅಧಿಕಾರಕ್ಕೆ ಬರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ 'ಅಪರೇಷನ್ ಕಮಲ' ಎನ್ನುವ ಅನೈತಿಕ ಅಕ್ರಮ ರಾಜಕಾರಣವನ್ನು ಆರಂಭಿಸಿದ್ದೆ ಜನಾರ್ಧನ ರೆಡ್ಡಿ ಕೂಟ ಎನ್ನುವುದನ್ನು ದೇಶ ಮರೆಯುವಂತಿಲ್ಲ. ಜನಾರ್ದನ ರೆಡ್ಡಿ ಮತ್ತು ಅವರ ಗ್ಯಾಂಗನ್ನು ನಿರ್ಲಕ್ಷಿಸಿ ಅಧಿಕಾರ ನಡೆಸುವುದು ಅಸಾಧ್ಯ ಎನ್ನುವ ಹಂತವನ್ನು ಅಧಿಕಾರದಾಹಿ ಬಿಜೆಪಿ ತಲುಪಿತ್ತು ಮತ್ತು ಬಹುದೊಡ್ಡ ರೀತಿಯಲ್ಲಿ ರೆಡ್ಡಿ ಸಹೋದರರ ಮೇಲೆ ಬಿಜೆಪಿ-ಸಂಘ ಪರಿವಾರ ಅವಲಂಬಿತವಾಗಿತ್ತು. ಬಿಜೆಪಿ ಸರಕಾರವನ್ನು ಜನಾರ್ಧನ ರೆಡ್ಡಿ-ಶ್ರೀರಾಮುಲು ಗ್ಯಾಂಗ್ ಕೀಲು ಬೊಂಬೆಯಂತೆ ಕುಣಿಸಲು ನೋಡುತ್ತಿತ್ತು. ಈ ಅಕ್ರಮ ಗಣಿಗಾರಿಕೆ ಲೂಟಿಯ ಪ್ರಕರಣದಲ್ಲಿ ಬಿಜೆಪಿ ಸಂಘಪರಿವಾರದ ಎಲ್ಲರೂ ಕೂಡ ಅಷ್ಟೇ ಸಮಾನ ಭಾಗಿಗಳು ಮತ್ತು ಫಲಾನುಭವಿಗಳು ಎಂಬುದನ್ನು ಮರೆಯಲಾಗದು.

ಲೋಕಾಯುಕ್ತ ವರದಿ ಸಲ್ಲಿಕೆಯಾಗಿ, ಜನಾರ್ಧನ ರೆಡ್ಡಿ ಜೈಲುಪಾಲಾಗುವುದು ಖಚಿತ ಎಂದು ಲೋಕವೆಲ್ಲಾ ಮಾತನಾಡುತ್ತಿರುವ ಕೊನೆ-ಕೊನೆಗಾಲದಲ್ಲೂ ಬಿಜೆಪಿ ರಾಷ್ಟ್ರೀಯ ನಾಯಕ ವೆಂಕಯ್ಯ ನಾಯ್ಡು ಕರ್ನಾಟಕ್ಕೆ ಬಂದು ಬಹಿರಂಗ ಸಭೆಯಲ್ಲಿ ಜನಾರ್ಧನ ರೆಡ್ಡಿಯನ್ನು ಕೊಂಡಾಡಿ ಅವರು ನೀಡಿದ ಚಿನ್ನದ ಖಡ್ಗವನ್ನು ತೆಗೆದುಕೊಂಡು ಹೋಗಿದ್ದರು. ಹಾಗಾಗಿ ಈ ಅಕ್ರಮದಲ್ಲಿ ಭಾಗಿಯಾದ ರಾಜಕೀಯ ಮುಖಂಡರ ಮೇಲೆ ಏನೊಂದು ಕ್ರಮ ಜರುಗಿಸದೇ ಕೇವಲ ಗಾಲಿ ಜನಾರ್ಧನ ರೆಡ್ಡಿ ಅವರನ್ನು ಮಾತ್ರವೇ ಅಪರಾಧಿಯನ್ನಾಗಿಸುವುದು ಒಂದು ಭಾಗಶಃವಾದ ಕ್ರಮವಾಗುತ್ತದೆ. ಆದ್ದರಿಂದ ರಾಜ್ಯದಿಂದ ಕೇಂದ್ರದವರೆಗೂ ಭಾಗಿಯಾದ ಎಲ್ಲ ನಾಯಕರುಗಳ ಮೇಲೆ ಸೂಕ್ತವಾದ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ.

ಗಾಲಿ ಜನಾರ್ಧನರೆಡ್ಡಿಯನ್ನು ಕೇವಲ ಜೈಲಿಗೆ ಕಳಿಸಿದರೆ ಅಷ್ಟೇ ಸಾಕಾಗುವುದಿಲ್ಲ. ಜೈಲಿನಲ್ಲಿ ಆತ ಅಕ್ರಮ ಸುಖ-ಸೌಲಭ್ಯಗಳನ್ನು ಪಡೆಯದಂತೆ, ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಸಂಚು ಹೂಡಿ, ಹೊರಗೆ ಯಾವುದೇ ಪ್ರಭಾವ ಬೀರದಂತೆ ಕಟ್ಟೆಚ್ಚರ ವಹಿಸುವುದೂ ಮುಖ್ಯ. ಹಿಂದೆ ನ್ಯಾಯಾಧೀಶರಿಗೆ ಲಂಚ ಕೊಟ್ಟು ಜಾಮೀನು ಪಡೆದುಕೊಳ್ಳುವ ಹಗರಣದಲ್ಲಿ ಸಿಕ್ಕಿಬಿದ್ದ ಲಜ್ಜೆಗೇಡಿಗಳು ಇವರು. ಜನಾರ್ದನ ರೆಡ್ಡಿ ಗಣಿಗಳ್ಳರ ಗ್ಯಾಂಗ್ ಅಕ್ರಮ-ದೌರ್ಜನ್ಯಗಳ ಮೂಲಕವಾಗಿ ಗಳಿಸಿರುವ ಅಪಾರ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಸಹ ಅತ್ಯಗತ್ಯ. ಏಕೆಂದರೆ ಇದು ಸಮಾಜದ ಸಾರ್ವಜನಿಕ ಸಂಪತ್ತಾಗಿದೆ. ಈ ದಿಕ್ಕಿನಲ್ಲಿ ದಿಟ್ಟವಾದ ನಿಲುವನ್ನು ಸರ್ಕಾರಗಳು ತೋರಬೇಕು. ನ್ಯಾಯಾಲಯಗಳು ಕೂಡ ಕ್ರಮಕ್ಕೆ ಮುಂದಾಗಬೇಕು.

ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಇಂತಹುದೇ ಅದಿರು ಲೂಟಿ ಅಕ್ರಮಗಳನ್ನು ನಡೆಸಿದ ಹಲವು ಉದ್ಯಮಿ ರಾಜಕಾರಣಿಗಳು ಇದ್ದಾರೆ. ಬೇಲಿಕೇರಿ ಅದಿರು ಅಕ್ರಮ ಸಾಗಾಣಿಕೆಯ ಕ್ರಿಮಿನಲ್ ಕೇಸ್ ನಲ್ಲಿ ಮಾಜಿ ಸಚಿವ ಆನಂದ್ ಸಿಂಗ್ ರವರ ಪಾತ್ರವು ದೊಡ್ಡದಿದೆ. ಜೊತೆಯಲ್ಲಿ ಅದಿರು ಸಾಗಾಣಿಕೆ ಮಾಡುವ ಹಲವು ಕಂಪನಿಗಳು ಇಂದಿಗೂ ತಮ್ಮ ದಂಧೆಯನ್ನು ನಡೆಸುತ್ತಿವೆ. ಇನ್ನೊಂದು ಬದಿಯಲ್ಲಿ ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿಯನ್ನು ಮೀರಿಸಿ ಇಂದು ಜಿಂದಾಲ್ ಸ್ಟೀಲ್ಸ್ ಲಿಮಿಟೆಡ್ ಕಂಪನಿಯು ಅಧಿಕೃತತೆಯ ಹೆಸರಿನಲ್ಲಿ ಸಂಡೂರು-ಹೊಸಪೇಟೆ ಭಾಗದ ಸುಮಾರು 36 ಗಣಿಗಳಲ್ಲಿ ಗಣಿಗಾರಿಕೆಯನ್ನು ಮಾಡಲು ಪರವಾನಿಗೆಯನ್ನು ಪಡೆದಿದೆ, ಗಣಿಗಾರಿಕೆ ನಡೆಸುತ್ತಿದೆ. ಬಲ್ದೋಟ ಕಂಪನಿಯು ಈ ಗಣಿಗಾರಿಕೆಯ ವ್ಯವಹಾರದಲ್ಲಿ ಮತ್ತೊಂದು ದೊಡ್ಡ ಪಾತ್ರ ವಹಿಸುತ್ತಿದೆ. ಖಾಸಗಿ ಕಂಪನಿಗಳಿಗೆ ಗಣಿಗಾರಿಕೆ ನಡೆಸಲು ಮುಕ್ತ ಅವಕಾಶ ನೀಡಿದ್ದೇ ಎಲ್ಲ ಹಗರಣಗಳಿಗೆ ಮೂಲ ಎಂಬುದನ್ನು ಅರ್ಥ ಮಾಡಿಕೊಳ್ಳ ಬೇಕು. ಒಟ್ಟಾರೆಯಾಗಿ, ರಾಷ್ಟ್ರೀಯ ಸಂಪತ್ತಾಗಿರುವ ಖನಿಜ ನಿಕ್ಷೇಪದ ಗಣಿಗಾರಿಕೆಯ ಮೇಲೆ ಸರ್ಕಾರದ ಸಂಪೂರ್ಣ ನಿಯಂತ್ರಣ ಅತ್ಯಂತ ಅವಶ್ಯಕವಾಗಿದೆ. ಜನಾರ್ದನ ರೆಡ್ಡಿ ಮತ್ತು ಅವರ ಗ್ಯಾಂಗ್ ನಡೆಸಿರುವ ಎಲ್ಲಾ ಅಕ್ರಮಗಳ ಬಗ್ಗೆ ಇನ್ನಷ್ಟು ನಿಷ್ಠುರವಾಗಿ ತನಿಖೆ ಆಗಬೇಕು. ನ್ಯಾಯ ಸಿಗಬೇಕು. ಪರಿಸರ ಮತ್ತು ನಮ್ಮದೇ ಸಂಪನ್ಮೂಲ ಉಳಿಸುವುದರತ್ತ ಕಾಳಜಿ, ಕ್ರಮ ಬೇಕಾಗಿದೆ.

ಇವೆಲ್ಲದರ ಜೊತೆಗೆ ಜಾಗತೀಕರಣ-ಖಾಸಗೀಕರಣ ನೀತಿಗಳ ಹಿಂದೆ ಹೇಗೆ ದೇಶದ ಸಂಪನ್ಮೂಲವನ್ನು ಕೊಳ್ಳೆ ಹೊಡೆಯುವ ಹುನ್ನಾರಗಳಿವೆ, ಈ ನೀತಿಗಳ ಅಡಿಯಲ್ಲಿ ಬಿಜೆಪಿ ಹೇಗೆ ಕಾಂಗ್ರೆಸ್ ಅನ್ನು ಮೀರಿಸಿ ದರೋಡೆಯ ಅಪ್ರತಿಮ ಚಾಣಾಕ್ಷತೆ-ಭಂಡತನಗಳನ್ನು ಮೈಗೂಡಿಸಿಕೊಂಡಿದೆ ಎಂಬುದನ್ನು ರಾಜ್ಯದ ಮತ್ತು ದೇಶದ ಜನರು ಅರಿಯುವುದು ತಡೆಯಲು ಮುನ್ನೆಜ್ಜೆಗಳೂ ಬಹಳ ಮುಖ್ಯ. ●

ಪ್ರಧಾನಿ ಭಾಗವಹಿಸುವಿಕೆಯೊಂದಿಗೆ ಸರ್ವಪಕ್ಷ ಸಭೆ ಮತ್ತು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕು

-ಸರ್ವ ಪಕ್ಷ ಸಭೆಯಲ್ಲಿ ಸಿಪಿಐ(ಎಂ) ಮುಖಂಡ ಜಾನ್ ಬ್ರಿಟ್ಟಾಸ್

ಭಾರತ ಸರ್ಕಾರವು ಮೇ 8, 2025ರಂದು 'ಆಪರೇಷನ್ ಸಿಂಧೂರ್' ಸಂದರ್ಭದಲ್ಲಿ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಸಿಪಿಐ(ಎಂ) ಪರವಾಗಿ, ರಾಜ್ಯಸಭೆಯಲ್ಲಿ ಪಕ್ಷದ ನಾಯಕ ಜಾನ್ ಬ್ರಿಟ್ಟಾಸ್ ಭಾಗವಹಿಸಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸತತ ಎರಡನೇ ಬಾರಿಗೆ ಇಂತಹ ಮಹತ್ವದ ಸರ್ವಪಕ್ಷ ಸಭೆಯಲ್ಲಿ ಭಾಗವಹಿಸದಿದ್ದಕ್ಕೆ ಜಾನ್ ಬ್ರಿಟ್ಟಾಸ್ ವಿಷಾದ ವ್ಯಕ್ತಪಡಿಸಿದರು. ಪ್ರಧಾನಿ ಭಾಗವಹಿಸುವಿಕೆಯೊಂದಿಗೆ ಸರ್ವಪಕ್ಷ ಸಭೆ ಮತ್ತು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯುವಂತೆ ಅವರು ಸರ್ಕಾರವನ್ನು ಒತ್ತಾಯಿಸಿದರು.

'ಕಾರ್ಯಾಚರಣೆಯ ಉದ್ದೇಶಿತ ಗುರಿಗಳನ್ನು ಸಾಧಿಸಲಾಗಿದೆ' ಎಂದು ಸರ್ಕಾರ ವರದಿ ಮಾಡಿರುತ್ತದೆ. ಹಿಂದಿನ ಅನುಭವವನ್ನು ಗಮನಿಸಿದರೆ, ಇಂತಹ ಮಿಲಿಟರಿ ಕಾರ್ಯಾಚರಣೆಯಿಂದ ಭಯೋತ್ಪಾದಕ ಗುಂಪುಗಳನ್ನು ಗುರಿಯಾಗಿಸಿ ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆಯೇ ಎಂದು ಅನುಮಾನ ವ್ಯಕ್ತಪಡಿಸಿದ ಬ್ರಿಟ್ಟಾಸ್, ಸರ್ಕಾರವು ರಾಜತಾಂತ್ರಿಕ ಕ್ರಮಗಳನ್ನು ಮುಂದುವರಿಸಬೇಕು ಮತ್ತು ಭಯೋತ್ಪಾದಕರನ್ನು ಶಿಕ್ಷೆಗೆ ಒಳಪಡಿಸಲು ಅಂತರರಾಷ್ಟ್ರೀಯ ಒತ್ತಡವನ್ನು ನಿರ್ಮಿಸಬೇಕು ಎಂದು ಒತ್ತಿ ಹೇಳಿದರು. ಪರಿಸ್ಥಿತಿ



ಉಲ್ಬಣಗೊಳ್ಳದಂತೆ ನೋಡಿಕೊಳ್ಳಬೇಕು ಎಂದು ಮುಂದುವರೆದು ಅವರು ಹೇಳಿದರು.

ಗಡಿ ಪ್ರದೇಶಗಳ ಜನರ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಪರಿಸ್ಥಿತಿಯಿಂದ ತೊಂದರೆಗೊಳಗಾದವರಿಗೆ ಅಗತ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಬೇಕು ಎಂದು ಬ್ರಿಟ್ಟಾಸ್ ಆಗ್ರಹಪಡಿಸಿದರು. ಎಲ್ಲಾ ವಾಸ್ತವ ಸಂಗತಿಗಳನ್ನು ಜನರ ಮುಂದಿಡಬೇಕು ಮತ್ತು ಎಲ್ಲಾ ರೀತಿಗಳ ತಪ್ಪು ಮಾಹಿತಿ ಹರಡುವುದನ್ನು ತಡೆಗಟ್ಟಬೇಕು ಎಂದು ಅವರು ಸರ್ಕಾರವನ್ನು ಕೇಳಿದರು.

ದ್ವೇಷ ಹರಡುವುದನ್ನು ತಡೆಯುವುದು ಸರ್ಕಾರದ ಕರ್ತವ್ಯ ಎಂದು ಕೂಡ ಹೇಳಿದ ಬ್ರಿಟ್ಟಾಸ್ ಭಯೋತ್ಪಾದನೆಗೆ ಯಾವುದೇ ಧರ್ಮವಿಲ್ಲ ಎಂದು ಒತ್ತಿ ಹೇಳಿದರು. ದ್ವೇಷ ಹರಡುವುದರ ವಿರುದ್ಧ ಹೋರಾಡದೆ ಭಯೋತ್ಪಾದನೆಯ ವಿರುದ್ಧ ಯುದ್ಧ ನಡೆಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಪಹಲ್ಗಾಮ್ ಮತ್ತು ಕಾಶ್ಮೀರದ ಜನತೆ ಭಯೋತ್ಪಾದನೆಯಿಂದ, ಅದರ ಎಲ್ಲಾ ದುಷ್ಪರಿಣಾಮಗಳಿಂದ ಬಳಲುತ್ತಿದ್ದರೂ ಸಹ, ಅದನ್ನು ಒಟ್ಟಾಗಿ ಸಂವೇದನಾಶೀಲರಾಗಿ ಖಂಡಿಸುವ ಮೂಲಕ ಇಡೀ ದೇಶಕ್ಕೆ ದಾರಿ ತೋರಿಸಿದ್ದಾರೆ ಎಂದು ಅವರನ್ನು ಶ್ಲಾಘಿಸಿದರು. ತೊಂದರೆಗೊಳಗಾಗಿರುವ ಕಾಶ್ಮೀರದ ಜನರ ಬೆಂಬಲಕ್ಕೆ ನಿಲ್ಲಲು ಸರ್ಕಾರವು ಒಂದು ಸೂಕ್ತ ಸಮಯದಲ್ಲಿ ಕಾಶ್ಮೀರಕ್ಕೆ ಸರ್ವಪಕ್ಷ ನಿಯೋಗಕ್ಕೆ ನೇತೃತ್ವ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಬ್ರಿಟನ್‌ನ ಪ್ರಜಾಪ್ರಭುತ್ವ ಸಂಘರ್ಷ.... ಪುಟ 2 ರಿಂದ

ಇವರು ಸೆಪರೇಟಿಸ್ಟ್, ಇಂಡಿಪೆಂಡೆಂಟ್ ಚರ್ಚ್ ಎಂದೂ ಕರೆಯಲ್ಪಟ್ಟರು.

ಈ ಪಂಥದಲ್ಲಿ ಸರಳ ಜೀವನ, ಪ್ರಾಮಾಣಿಕತೆ, ಸ್ವಂತ ಪ್ರಯತ್ನದ ಜೀವನವನ್ನು ಪ್ರತಿಪಾದಿಸಲಾಗುತ್ತಿತ್ತು. ಯಾವುದೇ ಆಡಂಬರ, ದುಬಾರಿ ಆಚರಣೆಗಳು, ಚರ್ಚ್‌ನ ಸುಲಿಗೆ ಇವೆಲ್ಲವನ್ನೂ ದೂರ ಇಟ್ಟರು. ಈ ಪಂಥದ ತತ್ವಗಳನ್ನು ಈ ತತ್ವಗಳಿಗೆ ಆಕರ್ಷಿತರಾದ ಹಲವರು ಬರೆದ ಹಲವಾರು ಕರಪತ್ರ, ಕಿರು ಪುಸ್ತಿಕೆಗಳ ಮುದ್ರಣ, ಹಂಚುವ ಮೂಲಕ ಹರಡಲಾಗುತ್ತಿತ್ತು.

ಪ್ಯೂರಿಟನ್ ಪಂಥ ಸಾಮಾನ್ಯ ಗೇಣಿದಾರ ರೈತರು, ಜೀತಗಾರರು, ಕೂಲಿಕಾರರು ಇವರುಗಳನ್ನು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸಿದ್ದು ಸಹಜವೇ. ಆದರೆ ಯುರೋಪಿನಾದ್ಯಂತ ಹರಡುತ್ತಿದ್ದ ಪ್ರಾಟೆಸ್ಟೆಂಟ್, ಕಾಲ್ವಿನ್ ವಿಚಾರಧಾರೆಗಳ ಚರ್ಚ್ ಸುಧಾರಣೆ ಹಲವು ಜಹಗೀರುದಾರರು, ನೋಬಲ್‌ಗಳನ್ನೂ ಆಕರ್ಷಿಸಿತ್ತು. ಆಗ ಸ್ಥಾಪನೆಯಾಗಿದ್ದ ಆಕ್ಸ್‌ಫರ್ಡ್, ಕೇಂಬ್ರಿಡ್ಜ್‌ಗಳ ಪ್ರಾಧ್ಯಾಪಕರುಗಳು, ಹಲವು ಕಾಲೇಜುಗಳೂ ಈ ಪಂಥದ ತತ್ವಗಳಿಗೆ ಒಲಿದಿದ್ದರು.

ರಾಜಪ್ರಭುತ್ವದ ಧಾರ್ಮಿಕ ದಬ್ಬಾಳಿಕೆ ಮತ್ತು ಕ್ರಾಂತಿ

ರಾಜರ ಶೋಷಣೆ, ದಬ್ಬಾಳಿಕೆಯ ಒಂದು ಮುಖ್ಯ ಆಧಾರ ಸ್ತಂಭವಾಗಿದ್ದ, ತಮ್ಮ ನೇರ ಹಿಡಿತದಲ್ಲಿದ್ದ ಚರ್ಚ್ ವ್ಯವಸ್ಥೆಯನ್ನು ಅವರು ಕೈ ಬಿಡಲು ಸಾಧ್ಯವೇ? ಆಂಗ್ಲಿಕನ್ ಚರ್ಚ್ ವ್ಯವಸ್ಥೆಯನ್ನು ಧಿಕ್ಕರಿಸಿದ ಸ್ವತಂತ್ರ ಪಂಥಗಳ ಮೇಲೆ, ಅದರಲ್ಲೂ ವ್ಯಾಪಕವಾಗಿ ಬೆಳೆಯುತ್ತಿದ್ದ ಪ್ಯೂರಿಟನ್ ಪಂಥದ ಜನರಿಗೆ ರಾಜ ಪ್ರಭುತ್ವ, ಚರ್ಚ್ ಆಡಳಿತ, ಅದನ್ನು ಅನುಸರಿಸುತ್ತಿದ್ದ ಜಹಗೀರುದಾರರು, ನೋಬಲ್‌ಗಳು ಕಿರುಕುಳ ನೀಡುತ್ತಿದ್ದರು. ಹಲವಾರು ಜನರನ್ನು ಬಂಧಿನಕ್ಕೊಳಪಡಿಸಿದರು, ವಧಿಸಿದರು.

ಆಂಗ್ಲಿಕನ್ ಚರ್ಚ್‌ನ ಮುಖ್ಯಸ್ಥರು ಈ ಭಿನ್ನಾಭಿಪ್ರಾಯದ ಪಂಥಗಳನ್ನು ಅಳಿಸಿ ಹಾಕಲು ಒಂದೇ ರೀತಿಯ ಚರ್ಚ್, ಒಂದೇ ರೀತಿಯ ಆಚರಣೆ, ಧಾರ್ಮಿಕ ವಿಚಾರ ಎಂಬ ಹೆಸರಿನಲ್ಲಿ ಕಿರುಕುಳ ನೀಡಿದರೆ, ರಾಜರುಗಳು ಅದಕ್ಕಾಗಿ ಕಠಿಣ ಕಾಯಿದೆಗಳನ್ನೇ ತಂದರು.

ಇಂತಹ ಹಿನ್ನೆಲೆಯಲ್ಲಿಯೇ ಧಾರ್ಮಿಕ ಸ್ವಾತಂತ್ರ್ಯ, ನಂಬಿಕೆಯ ಸ್ವಾತಂತ್ರ್ಯ ಎಂಬ ಪರಿಕಲ್ಪನೆಗಳು ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳೆಂಬ ಪ್ರಮುಖ ಸ್ಥಾನವನ್ನು ಪಡೆದವು. ಪ್ರತಿಯೊಬ್ಬರೂ ತಮ್ಮದೇ ಆದ ಧಾರ್ಮಿಕ ವಿಚಾರಗಳನ್ನು ಹೊಂದುವ ಸ್ವಾತಂತ್ರ್ಯ ಅಂದಿನ ವ್ಯಕ್ತಿ ಪ್ರಧಾನ ಚಿಂತನೆಯ ಒಂದು ಅಂಗವಾಯಿತು.

ಆಗ ಆರಂಭವಾಗಿದ್ದ ವಸಾಹತುಗಳಿಗೆ ವಲಸೆ ಹೀಗೆ ಕಿರುಕುಳಗಳಿಗೆ, ದೌರ್ಜನ್ಯಗಳಿಗೆ ಒಳಗಾಗಿದ್ದ ಹಲವಾರು ಸಮುದಾಯಗಳಂತೆ ಪ್ಯೂರಿಟನ್ನರು ಅಮೇರಿಕದ ವರ್ಜೀನಿಯಾ, ನ್ಯೂ ಇಂಗ್ಲೆಂಡ್, ಮಸಾಚುಸೆಟ್ಸ್, ಕೇಂಬ್ರಿಜ್ (ಅಮೆರಿಕದ್ದು) ಮೊದಲಾದ ಪ್ರದೇಶಗಳಲ್ಲಿ ನೆಲೆಸಿದರು. ತಮ್ಮ ಧಾರ್ಮಿಕ ಆದರ್ಶಗಳಿಗೆ ಅನುಗುಣವಾದ ಸ್ವಾಯತ್ತ ಸಮ್ಮಿಲನ ಆಧಾರಿತ ಚರ್ಚ್‌ಗಳನ್ನು ಸ್ಥಾಪಿಸಿದರು.

ಇಲ್ಲಿಯೇ ಉಳಿದ ಪ್ಯೂರಿಟನ್ನರು ಬ್ರಿಟನ್‌ನ ರಾಜಪ್ರಭುತ್ವವನ್ನು ಕಿತ್ತೆಸೆಯುವ ಮಿಲಿಟರಿ ಸಂಘರ್ಷದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದರು. ರಾಜರ ಬಣದ ಸೈನ್ಯವನ್ನು ಸೋಲಿಸುವುದರಲ್ಲಿ, ರಾಜನನ್ನು ಬಂಧಿಸುವುದರಲ್ಲಿ, ವಧಿಸುವುದರಲ್ಲಿ ಪ್ರಧಾನ ಪಾತ್ರ ವಹಿಸಿದರು. ನಂತರ ಪ್ಯೂರಿಟನ್ ನಾಯಕನಾದ ಆಲಿವರ್ ಕ್ರೋಮ್‌ವೆಲ್ ಸರ್ವಾಧಿಕಾರಿಯಾಗಿ ಇಂಗ್ಲೆಂಡ್ ಅನ್ನು ಆಳಿದ.

ಇದೇ ಪ್ಯೂರಿಟನ್ನರ ಗೇಣಿದಾರ ರೈತರು, ಕೂಲಿಕಾರರ ನಡುವೆ ಪ್ರತ್ಯೇಕ ಪಂಥಗಳು, ರಾಜಕೀಯ ಶಕ್ತಿಗಳು ರೂಪುಗೊಂಡವು. ಪ್ರಜಾಪ್ರಭುತ್ವದ ನೈಜ ಪ್ರತಿಪಾದಕರಾದರು. ತಮ್ಮ ಸಾಮಾಜಿಕ ಸ್ಥಿತಿಗೆ ಅನುಗುಣವಾದ ಒತ್ತಾಯಗಳನ್ನು ಮಂಡಿಸಿದರು.

ಹೀಗೆ ಬ್ರಿಟನ್‌ನ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಸಾಮಾಜಿಕ, ರಾಜಕೀಯ ವಿಚಾರಗಳು ಧಾರ್ಮಿಕ ಮುಖವಾಡವನ್ನು ಹೊತ್ತು ಮಂಡಿತವಾದವು.

ಫ್ರೆಂಚ್ ಪ್ರಜಾಪ್ರಭುತ್ವ ಕ್ರಾಂತಿ ಮಾತ್ರ ಧಾರ್ಮಿಕ ಮುಖವಾಡದ ಅಗತ್ಯವಿಲ್ಲದೆ ನೇರವಾಗಿ ರಾಜಕೀಯ, ಸಾಮಾಜಿಕ ಹಕ್ಕುಗಳನ್ನು ಪ್ರತಿಪಾದಿಸಿದ ಜಗತ್ತಿನ ಮೊದಲ ಕ್ರಾಂತಿ ಎಂಬ ಕೀರ್ತಿಗೆ ಪಾತ್ರವಾಯಿತು.

ಶ್ರಮಿಕ ಶಕ್ತಿಯ ಬೆಂಬಲದೊಂದಿಗೆ ಗೆದ್ದ.... ಪುಟ 2 ರಿಂದ

ರಾಜನ ಬಣ ಸೋತರೆ ಎಲ್ಲವನ್ನೂ ಕಳೆದುಕೊಳ್ಳುವ ಅಪಾಯ ಕಣ್ಣೆದುರು ಕುಣಿಯುತ್ತಿತ್ತು. ಆದ್ದರಿಂದ ತಮ್ಮ ಯುದ್ಧದ ಅನುಭವ, ತರಬೇತಿಗಳ ಜೊತೆಗೆ ಅಳಿವು ಉಳಿವಿನ ಹೋರಾಟ ಮಾಡುತ್ತಿದ್ದರು.

ಪಾರ್ಲಿಮೆಂಟ್‌ನ ಬಣದಲ್ಲಿ ಅವರ ವ್ಯವಹಾರಗಳೇ ಮುಖ್ಯವಾಗಿದ್ದ ಸುಖಜೀವಿಗಳಿಂದ ರಾಜನ ಪರಿಣತ ಸೈನ್ಯವನ್ನು ಸೋಲಿಸಲು ಸಾಧ್ಯವಾಗುವುದಿಲ್ಲವೆಂದು ಒಬ್ಬ ಸಣ್ಣ ಭೂಮಾಲಿಕನಾದ ಸಂಸದ್ ಸದಸ್ಯ, ಸೈನ್ಯದ ಒಬ್ಬ ಕಮಾಂಡರ್ ಆದ ಆಲಿವರ್ ಕ್ರೋಮ್‌ವೆಲ್‌ಗೆ ಅರಿವಾಯಿತು. ಕೂಲಿಗಾಗಿ ದುಡಿಯುವ ಸಿಪಾಯಿಗಳಿಗಿಂತ ರಾಜರ ದುರ್ನೀತಿಗಳಿಂದ ಭೂಮಿ, ಬದುಕು ಕಳೆದುಕೊಂಡ ರೈತರು, ಕುಶಲಕರ್ಮಿಗಳು, ಸಣ್ಣ ವ್ಯಾಪಾರಿಗಳು ರಾಜನ ಸೈನ್ಯವನ್ನು ಸೋಲಿಸಲೇಬೇಕೆಂಬ ಬದ್ಧತೆಯಿಂದ, ತೀವ್ರತೆಯಿಂದ ಹೋರಾಡುತ್ತಾರೆ ಎಂದು ಚಿಂತಿಸಿದರು. ಅಂತಹವ ಬಡ ಜನರನ್ನು ಬಹುವಾಗಿ ನೇಮಿಸಿಕೊಂಡರು. ಅವರ ಜೊತೆಗಾರ ಶ್ರೀಮಂತರಿಗೆ ಈ ಭಿಕಾರಿಗಳೇನು ಹೋರಾಟ ಮಾಡಬಲ್ಲರು ಎಂಬ ತಾತ್ಸಾರ.

ಆದರೆ ಕ್ರೋಮ್‌ವೆಲ್ ಅದನ್ನು ಲೆಕ್ಕಿಸದೆ ದೊಡ್ಡ ಸಂಖ್ಯೆಯಲ್ಲಿ ದುಡಿಯುವ ವರ್ಗಗಳನ್ನು ಸೈನ್ಯಕ್ಕೆ ಸೇರಿಸಿಕೊಂಡರು. ಈ ವರ್ಗಗಳಲ್ಲಿ ಬಹಳ ಜನ ಪ್ಯೂರಿಟನ್ ಧಾರ್ಮಿಕ ಪಂಥವನ್ನು ಒಪ್ಪಿದವರು. ಕ್ರೋಮ್‌ವೆಲ್ ಕೂಡಾ ಪ್ಯೂರಿಟನ್ ಪಂಥಕ್ಕೆ ಸೇರಿದವನು. (ವಿವರಗಳಿಗೆ ಧಾರ್ಮಿಕ ಸಂಘರ್ಷದ ಬಗೆಗಿನ ಲೇಖನ ನೋಡಿ). ರಾಜರು ಮತ್ತು ಅವರ ಆಂಗ್ಲಿಕನ್ ಚರ್ಚ್ ಪ್ಯೂರಿಟನ್‌ಗಳಿಗೆ ನೀಡುತ್ತಿದ್ದ ಕಿರುಕುಳ, ಸ್ವತಂತ್ರ ರೈತರು, ಗೇಣಿದಾರ ರೈತರು, ಕೂಲಿಕಾರರ ಮೇಲಿನ ದೌರ್ಜನ್ಯಗಳ ಕಾರಣವಾಗಿ ಈ ವರ್ಗಗಳು ಯುದ್ಧದಲ್ಲಿ ಭಾಗಿಯಾಗಲು ಒಪ್ಪಿದರು. ಆದರೆ ಅವರೆಲ್ಲ ಕೇವಲ ಸಂಬಳಕ್ಕಾಗಿ ಸೈನ್ಯ ಸೇರಿರುವವರಲ್ಲ, ರಾಜಪ್ರಭುತ್ವವನ್ನು ನಿಯಂತ್ರಿಸಲು ಮತ್ತು ಅದರ ದೌರ್ಜನ್ಯವನ್ನು ಹಿಮ್ಮೆಟ್ಟಿಸಲು, ರಾಜರಿಂದ ಉಂಟಾಗುತ್ತಿದ್ದ ಬದುಕಿನ ಸಂಕಟಗಳನ್ನು ನಿವಾರಿಸಿಕೊಳ್ಳಲು ಎಂದು ಭಾವಿಸಿ ದಿಟ್ಟತನದಿಂದ, ಪ್ರಾಣದ ಹಂಗು ತೊರೆದು ಹೋರಾಡಿದರು.

ಆರಂಭದಲ್ಲಿ ಕ್ರೋಮ್‌ವೆಲ್‌ಗಿಂತ (ಕ್ರೋಮ್‌ವೆಲ್ ಒಬ್ಬ ಸಣ್ಣ ಜಮೀನುದಾರನಾಗಿದ್ದ) ದೊಡ್ಡ ಸ್ಥಾನಗಳಲ್ಲಿದ್ದ ಪ್ರತಿಷ್ಠೆಯ ದಂಡನಾಯಕರಿಗೆ ಹೆಚ್ಚಿನ ಮಾನ್ಯತೆ ಇತ್ತು. ಆದರೆ ಕ್ರೋಮ್‌ವೆಲ್‌ನ ಸೈನ್ಯದ ದಿಟ್ಟ ಹೋರಾಟ, ಯಶಸ್ಸು ಅವನ ಸ್ಥಾನವನ್ನು ಎತ್ತರಕ್ಕೇರಿಸಿತು. ಸ್ವತಃ ಕ್ರೋಮ್‌ವೆಲ್‌ನ ಉತ್ತಮ ಮಿಲಿಟರಿ ತಂತ್ರಗಳೂ ಅವನಿಗೆ ಎಂದು ಹೆಸರು ತಂದುಕೊಟ್ಟವು. ಇವುಗಳ ಫಲವಾಗಿ ಕ್ರೋಮ್‌ವೆಲ್ ಪಾರ್ಲಿಮೆಂಟ್ ಬಣದ ಸರ್ವ ಸೇನಾಧಿಪತಿಯಾದ.

ರಾಜ ಬಣದ ಸೈನ್ಯವನ್ನು ಸೋಲಿಸಿ ರಾಜನನ್ನು ಬಂಧಿಸಿದ ಕೀರ್ತಿಗೆ ಪಾತ್ರನಾದ. ಅಲ್ಲಿಯವರೆಗೆ ಕ್ರೋಮ್‌ವೆಲ್ ಮತ್ತು ಅವನ ಸೈನ್ಯ ಒಂದೇ ಗುರಿಯತ್ತ ಅತ್ಯಂತ ಐಕ್ಯತೆಯಿಂದ ಮುನ್ನಡೆಯುತ್ತಿತ್ತು. ಕ್ರೋಮ್‌ವೆಲ್ ಎಂಬ ಸಣ್ಣ ಭೂಮಾಲಕನ ಹಿತಗಳು ಮತ್ತು ರೈತರು ಮತ್ತು ಕೂಲಿಕಾರರ ಹಿತಗಳು ಏಕೀಭವಿಸಿದ್ದವು. ಆದರೆ ರಾಜನ ಬಂಧನದ ನಂತರ ಕ್ರೋಮ್‌ವೆಲ್ ಮತ್ತವನ ಮಿತ್ರರ ಗುರಿ ಮತ್ತು ಸೈನಿಕರ ಗುರಿ ಬೇರೆಯಾದವು.

ಕೆಲವು ಶರತ್ತುಗಳ ಆಧಾರದ ಮೇಲೆ ರಾಜನನ್ನು ಉಳಿಸಿಕೊಂಡು ಪಾರ್ಲಿಮೆಂಟ್ ಮೇಲುಗೈ ಸಾಧಿಸಬೇಕೆಂದು ಪಾರ್ಲಿಮೆಂಟಿನ ಬಹು ಸಂಖ್ಯೆಯ ಸದಸ್ಯರ ಅಭಿಪ್ರಾಯವಾಗಿತ್ತು. ಕ್ರೋಮ್‌ವೆಲ್ ಮತ್ತು ಅವನ ಭೂಮಾಲಕ ಸಹಚರರೂ ಕೂಡಾ ಇಂತಹ ಕ್ರಮಕ್ಕೆ ಸಮ್ಮತಿಸಿ ರಾಜನೊಡನೆ ಸಂಧಾನದಲ್ಲಿ ತೊಡಗಿದರು. ರೈತರ ಕೂಲಿಕಾರ ಸೈನಿಕರು, ಸೇನಾನಾಯಕರು ರಾಜಪ್ರಭುತ್ವವನ್ನು, ಪಾಳೆಯಗಾರಿ ವ್ಯವಸ್ಥೆಯನ್ನು ತೊಡೆದು ಹಾಕಬೇಕೆಂಬ ಬಗ್ಗೆ ದೃಢವಾಗಿದ್ದರು.

ಮುಂದೆ ದೇಶದ್ರೋಹಕ್ಕಾಗಿ ರಾಜನ ವಿಚಾರಣೆ, ಅವನಿಗೆ ಮರಣದಂಡನೆ ವಿಧಿಸಿದುದರಲ್ಲಿ ರೈತ, ಕೂಲಿಕಾರರ ಸೈನಿಕ ದಳದ ಪಾತ್ರ, ಅವರದೇ ಆದ ಹಕ್ಕುಗಳ ಒತ್ತಾಯಗಳು ಅದಕ್ಕಾಗಿ ಸಂಘರ್ಷದ ಬಗ್ಗೆ ಮುಂದಿನ ಸಂಚಿಕೆಯಲ್ಲಿ.

ಮಂಗಳೂರು–ಹತ್ಯೆಗಳು ಮತ್ತು ಪೊಲೀಸ್ ಇಲಾಖೆಯ ವೈಫಲ್ಯಗಳು

ಗೃಹ ಸಚಿವರ ಹೇಳಿಕೆಯಲ್ಲಿ ವಿಶ್ವಾಸಾರ್ಹತೆಯ ಕೊರತೆ

ಎರಡು ಗಂಪು ಹತ್ಯೆಗಳೊಂದಿಗೆ ಮಂಗಳೂರು ಮತ್ತೆ ಸುದ್ದಿಯಾಗಿದೆ. ಒಂದು ಹತ್ಯೆಗೆ ಸಂಬಂಧಿಸಿ ಹೋರಾಟಗಳು, ಟೀಕೆಗಳು, ಖಂಡನೆ, ಆಕ್ರೋಶಗಳು ಜೋರಾಗಿದ್ದವು. ಮತ್ತೊಂದು ಕೊಲೆ ಆದಾಗ ಇಡೀ ಮಂಗಳೂರು ಮೌನ ತಾಳಿತ್ತು. ಬಿಜೆಪಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಗ್ಯಾಂಗ್ ವಾರ್ ಗೆ ಬಲಿಯಾದಾಗ ಬಿಜೆಪಿ ಶಾಸಕರುಗಳು, ವಿರೋಧ ಪಕ್ಷದ ನಾಯಕರು, ಗೃಹ ಸಚಿವರು, ಹಿರಿಯ ಅಧಿಕಾರಿಗಳು ಮಂಗಳೂರಿಗೆ ಧಾವಿಸಿ ಬರುತ್ತಾರೆ. ಊರು ಬಲವಂತದ ಬಂದ್ ಗೆ ಒಳಗಾಗುತ್ತದೆ. ಮಾಬ್ ಲಿಂಚಿಂಗ್ ನಲ್ಲಿ ಅಶ್ರಫ್ ನನ್ನು ಕೊಂದುಹಾಕಿದಾಗ ಇಡೀ ಮಂಗಳೂರು ಮೌನ ತಾಳಿತ್ತು.

ಸಿದ್ದಯ್ಯ ಸಿ.





ಮೇ ಒಂದರ ರಾತ್ರಿ ಬಜಪೆಯ ಜನಸಂದಣಿಯ ಪ್ರದೇಶದಲ್ಲಿ ಬಿಜೆಪಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆಯಾಗುತ್ತದೆ. ಇದರಿಂದ ಉಂಟಾದ ಅಶಾಂತಿ ಜಿಲ್ಲೆಯ ಇತರ ಭಾಗಗಳಿಗೂ ಹರಡಿತು. ರಾತ್ರಿ ಕಳೆದು ಬೆಳಕು ಹರಿಯುವ ಮುನ್ನವೇ ಕೆಲಸಕ್ಕೆ ದಾವಿಸುತ್ತಿದ್ದ ಅಮಾಯಕ ಕಾರ್ಮಿಕರ ಮೇಲೆ ಅಲ್ಲಲ್ಲಿ ಚೂರಿ ಇರಿದು ಹತ್ಯೆ ನಡೆಸಲು ಯತ್ನಿಸಿದ ಘಟನೆಗಳು ನಡೆದವು. ಹತ್ಯೆಯ ನಂತರ ಪೊಲೀಸ್ ಇಲಾಖೆ ಪರಿಸ್ಥಿತಿ ಹತೋಟಿಗೆ ಕೈಗೆತ್ತಿಕ್ಕೊಳ್ಳುವಲ್ಲಿ ವಿಫಲರಾದ ಹಿನ್ನಲೆಯಲ್ಲಿ ಹಾಡುಹಗಲಿನಲ್ಲೇ ಪಂಜಿಮೊಗರು ಮತ್ತು ಶಾಂತಿನಗರ ಪರಿಸರದಲ್ಲಿ ಅಮಾಯಕರ ಮೇಲೆ ತಲವಾರು ಜಳಪಿಸಿ ಹತ್ಯೆ ನಡೆಸಲು ಯತ್ನಿಸಿದ ಘಟನೆಯು ಜಿಲ್ಲೆಯಲ್ಲಿ ಜನರ ಆತಂಕಕ್ಕೆ ಎಡೆಮಾಡಿಕೊಟ್ಟಿತು. ಬಡಿಗೆ ಹಿಡಿದು ಬಲವಂತದ ಬಂದ್ ಆಚರಿಸಲು ಮುಂದಾದರು. ಕಲ್ಲು ತೂರಾಟದ ಪ್ರಕರಣಗಳು ನಡೆದವು. ಕೋಮುವಾದಿಗಳು ರಸ್ತೆಯಲ್ಲಿ ವಿಜೃಂಭಿಸಿದರು. ಮುಸ್ಲಿಮರನ್ನು ಹುಡುಕಿ ಹುಡುಕಿ ಹೊಡೆಯಲಾಗುತ್ತದೆ. ದಕ್ಷಿಣ ಕನ್ನಡದ ದಳ್ಳುರಿ ಪಕ್ಕದ ಉಡುಪಿಗೂ ಹಬ್ಬುತ್ತದೆ. ಸುಹಾಸ್ ಶೆಟ್ಟಿ ಕೊಲೆಗೆ "ಪ್ರತೀಕಾರ" ಎಂದು ಉಡುಪಿಯಲ್ಲಿ 50 ರ ಹರೆಯದ ಆಟೋ ಚಾಲಕ ಅಬೂಬಕ್ಕರ್ ಮೇಲೆ ತಲವಾರು ಬೀಸಲಾಗಿದೆ. ಒಂದೇ ದಿನದಲ್ಲಿ ಕನಿಷ್ಟ ನಾಲ್ಕು ಜನ ಮುಸ್ಲಿಮರ ಮೇಲೆ ಇರಿತ, ತಲವಾರು ದಾಳಿ ನಡೆಯಿತು. ರಕ್ತ ಪಿಪಾಸು ಕೋಮುವಾದಿಗಳು ಲೆಕ್ಕಾಚಾರ ಹಾಕಿಯೆ ಬೀದಿಗೆ ಇಳಿದರು. ಶಾಸಕರುಗಳು ಇವರ ಬೆಂಗಾವಲಿಗೆ ನಿಂತಿದ್ದಾರೆ. ಬಿಜೆಪಿ ಶಾಸಕರುಗಳು, ವಿರೋಧ ಪಕ್ಷದ ನಾಯಕರು, ಗೃಹ ಸಚಿವರು, ಹಿರಿಯ ಅಧಿಕಾರಿಗಳು ಮಂಗಳೂರಿಗೆ ಧಾವಿಸಿ ಬರುತ್ತಾರೆ.

ಅಶ್ರಫ್ ನನ್ನು ಕೊಂದುಹಾಕಿದಾಗ ಇಡೀ ಮಂಗಳೂರು ಮೌನ ತಾಳಿತ್ತು

ಮಾಬ್ ಲಿಂಚಿಂಗ್ ನಲ್ಲಿ ಅಶ್ರಫ್ ನನ್ನು ಕೊಂದುಹಾಕಿದಾಗ ಇಡೀ ಮಂಗಳೂರು ಮೌನ ತಾಳಿತ್ತು. ಖಂಡನೆ, ಸಚಿವರ ಆಗಮನ, ಬಂದ್ ಏನೂ ಇರಲಿಲ್ಲ. ಅಶ್ರಫ್, ಹಾಗೆಯೆ ಆಟೋ ಚಾಲಕನ ಕೊಲೆ, ಉಡುಪಿ ನೇಜಾರಿನಲ್ಲಿ ಇಡೀ ಕುಟುಂಬದ ಕೊಲೆ ನಡೆದಾಗ ಮುಸ್ಲಿಮರು ಹಿಂದುಗಳ ಕಡೆಗೆ ಕೈ ತೋರಿಸಿಲ್ಲ. ಆದರೆ, ಗ್ಯಾಂಗ್ ವಾರ್ ಗೆ ಸುಹಾಸ್ ಬಲಿಯಾದಾಗ ಇಡೀ ಮುಸ್ಲಿಮ್ ಸಮುದಾಯವನ್ನೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಒಂದೇ ನಗರದಲ್ಲಿ ವಾರದ ಅಂತರದಲ್ಲಿ ನಡೆದ ಎರಡು ಕೊಲೆಗಳು ಕೊಲೆಯಾದವರ ಧರ್ಮದ ಕಾರಣಕ್ಕೆ ಪ್ರತ್ಯೇಕ ಸ್ಪಂದನೆಗೆ ಕಾರಣವಾಗಿದೆ. ಗುಂಪಿನಿಂದ ತನ್ನ ಧರ್ಮದ ಗುರುತಿನ ಕಾರಣಕ್ಕೆ ಬರ್ಬರವಾಗಿ ಕೊಲೆಯಾದ ಅಶ್ರಫ್ ನ ಸಾವು ಬಿಜೆಪಿಗೆ ಮಾತ್ರ ಅಲ್ಲ ಕಾಂಗ್ರೆಸ್ ಗೂ ಬೇಡವಾಗಿದೆ.

ಬಿಜೆಪಿ ಬೆಂಬಲಿಗರಿಂದ ಕೊಲೆಯಾದ ನೆರೆ ರಾಜ್ಯದ ಅಮಾಯಕ ಅಶ್ರಫ್ ಕುರಿತು ರಾಜ್ಯದಲ್ಲಿ ಬಿಡಿ, ಮಂಗಳೂರಿನಲ್ಲಿ ಒಂದು ಶಬ್ದ ಮಾತಾಡುವವರಿಲ್ಲ. ಅಶ್ರಫ್ ಗುಂಪುಹತ್ಯೆ ಪ್ರಧಾನ ಆರೋಪಿ, ಬಿಜೆಪಿ ನೇತಾರ ರವೀಂದ್ರನ ಬಂಧನ ಇನ್ನೂ ಆಗಿಲ್ಲ. ಪ್ರಕರಣದಲ್ಲಿ ಭಾಗಿಯಾದ ಹಲವು ಆರೋಪಿಗಳು ಹಾಯಾಗಿದ್ದಾರೆ. ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಹಿರಿಯ ಪೊಲೀಸ್ ಅಧಿಕಾರಿಗಳು ಹಾಯಾಗಿದ್ದಾರೆ. ಪ್ರಕರಣದ ತನಿಖೆ ಯಾವ ರೀತಿ ನಡೆಯಬಹುದು, ಸಾಕ್ಷಿ ಸಂಗ್ರಹ,



ಬಲವಾದ ಆರೋಪ ಪಟ್ಟಿ ಸಲ್ಲಿಕೆ ಆಗುವುದು ಅನುಮಾನ. ಪ್ರಕರಣದ ತನಿಖೆಗೆ ಜಿಲ್ಲೆಯ ಹೊರಗಿನ ಅಧಿಕಾರಿಗಳ ನೇತೃತ್ವದ ವಿಶೇಷ ತನಿಖಾ ತಂಡಕ್ಕೆ ವಹಿಸಿ ಎಂಬ ಜಿಲ್ಲೆಯ ಜನಪರ ಸಂಘಟನೆಗಳ ಬೇಡಿಕೆ ಹಾಗೆಯೆ ಉಳಿದು ಹೋಗಿದೆ. ಜನಾಕ್ರೋಶ ವ್ಯಕ್ತವಾದ ಸಂದರ್ಭ "ವಿಶೇಷ ತನಿಖಾ ತಂಡ ರಚಿಸಿ" ಎಂದು ಗೃಹ ಸಚಿವರಿಗೆ ಪತ್ರ ಬರೆದಿದ್ದ ಉಸ್ತುವಾರಿ ಸಚಿವ ದಿನೇಶ್ ಗುಂಡುರಾವ್ ಈಗ ಬಹುಷ ಪ್ರಕರಣವನ್ನೆ ಮರೆತು ಬಿಟ್ಟಿದ್ದಾರೆ.

ಪೊಲೀಸ್ ಇಲಾಖೆಯ ದಯನೀಯ ವೈಫಲ್ಯ

ಮಂಗಳೂರು ನಗರದ ಪೊಲೀಸ್ ಇಲಾಖೆಯ ದಯನೀಯ ವೈಫಲ್ಯದಿಂದ ನಗರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು ಇತ್ತೀಚೆಗೆ ನಡೆದ ಮಾಬ್ ಲಿಂಚಿಂಗ್ ಪ್ರಕರಣದಿಂದಲೇ ಎಚ್ಚೆತ್ತುಕೊಳ್ಳಬೇಕಾಗಿದ್ದ ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳದ ಕಾರಣ ಜಿಲ್ಲೆಯಲ್ಲಿ ಹಿಂಸಾಚಾರ ಹೆಚ್ಚಳಗೊಂಡಿದೆ. ಶಾಸಕ ವೇದವ್ಯಾಸ ಕಾಮತರ ಪ್ರಕಾರ ದ್ವೇಷ ಭಾಷಣ ಮಾಡಿದ ಶಾಸಕ ಹರೀಶ್ ಪೂಂಜಾ ಮೇಲೆ ದಾಖಲಿಸಿರುವ ಪ್ರಕರಣ ರಾಜಕೀಯ ಪ್ರೇರಿತವಂತೆ. ಕಾಂಗ್ರೆಸ್ ಸರಕಾರ ರಾಜಕೀಯ ಮಾಡುವುದು ಬಿಡಿ, ಕನಿಷ್ಟ ತನ್ನ ಜಬಾಬ್ದಾರಿಗೆ ನಿಷ್ಟ ಆಗಿದ್ದರೂ, ಹರೀಶ್ ಪೂಂಜಾ, ಭರತ್ ಶೆಟ್ಟಿ ಮೊದಲಾದ ಬಿಜೆಪಿ ದ್ವೇಷ ಭಾಷಣಕಾರರು ಜೈಲು ಸೇರಬೇಕಿತ್ತು. ವಿನಾಯಕ ಬಾಳಿಗಾ ಕೊಲೆ ಪ್ರಕರಣದಲ್ಲಿ ಇದೇ ವೇದವ್ಯಾಸರು ತನಿಖೆಗೆ ಒಳಗಾಗಬೇಕಿತ್ತು. ಬಾಳಿಗಾ ಪ್ರಕರಣ ಖಚಖಿ ತನಿಖೆಗೆ ಒಳಪಡಬೇಕಿತ್ತು. ಕಾಂಗ್ರೆಸ್ ಪಕ್ಷ, ಸರಕಾರ "ಬ್ರದರ್ಸ್" (ವೇದವ್ಯಾಸರ ಪ್ರಕಾರ ಮುಸ್ಲಿಮರು) ಗಳಿಗೆ ಏನು ಅನುಕೂಲ ಮಾಡಿ ಕೊಟ್ಟಿದೆ, ಎಷ್ಟು ನ್ಯಾಯ ಪಾಲಿಸಿದೆ ಎಂಬುದರ ಕುರಿತು ಒಂದು ಬಹಿರಂಗ ಚರ್ಚೆಯನ್ನು ವೇದವ್ಯಾಸರೆ ಏರ್ಪಡಿಸಲಿ. ಆದರೆ, ಕಾಂಗ್ರೆಸ್ ಸರಕಾರದ ಈ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತದ ಪೂರ್ತಿ ನಿಯಂತ್ರಣ ಹೊಂದಿರುವ "ಬ್ರದರ್ಸ್" ಗಳ ಜೊತೆ ವೇದವ್ಯಾಸ ಕಾಮತ್ ಸಹಿತ ಬಿಜೆಪಿ ಶಾಸಕರುಗಳು, ಮುಖಂಡರುಗಳು ಹೊಂದಿರುವ ಗಳಸ್ಯ ಕಂಠಸ್ಯ ಸಂಬಂಧ, ಎಡ್ಜೆಸ್ಟ್ ಮೆಂಟ್ ರಾಜಕಾರಣ ಗುಟ್ಟಿನ ಸಂಗತಿ ಏನಲ್ಲ.





ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಆಡಳಿತದಲ್ಲಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಸಂಘಪರಿವಾರದ ನಿಯಂತ್ರಣಕ್ಕೆ ಬಿಟ್ಟು ಕೊಟ್ಟಿದೆ ಎಂದರೆ ನಾಚಿಕೆಗೇಡಿನ ಸಂಗತಿ. ಇಷ್ಟೆಲ್ಲಾ ಸಂಘಪರಿವಾರದ ನಾಯಕರು ಹಿಂಸಾಚಾರಕ್ಕೆ ಮತ್ತು ಜಿಲ್ಲೆಯ ಬಂದ್ ಗೆ ಕರೆಕೊಟ್ಟರೂ, ಈ ಬಗ್ಗೆ ಅವರ ವಿರುದ್ದ ಸೂಕ್ತ ಕಾನೂನು ಕ್ರಮಗಳನ್ನು ಕೈಕೊಳ್ಳಲು ಪೊಲೀಸರು ಮುಂದಾಗಲಿಲ್ಲ. ಸರಕಾರದ ಇಂತಹ ಬೇಜಾವಾಬ್ದಾರಿ ನಡೆಗಳಿಂದ ಜನಸಾಮಾನ್ಯರು ಆತಂಕದಲ್ಲಿ ಬದುಕುವಂತಾಗಿದೆ. ಹಿಂಸೆಗೊಳಗಾಗಿ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಮುಸ್ಲಿಂ ಸಮುದಾಯದ ಬಡ ಕೂಲಿ ಕಾರ್ಮಿಕ ಸಂತ್ರಸ್ತರಿಗೆ ಕನಿಷ್ಟ ಚಿಕಿತ್ಸೆಯ ವೆಚ್ಚವನ್ನು ಬರಿಸುವ ಭರವಸೆಯನ್ನು ಜಿಲ್ಲಾಡಳಿತ ನೀಡಲಿಲ್ಲ.

ಮುಸ್ಲಿಂ ಪೊಲೀಸ್ ಸಿಬ್ಬಂದಿ ಟಾರ್ಗೆಟ್

ಬಿಜೆಪಿ, ಸಂಘಪರಿವಾರದ ಕೀಳು, ಮತಾಂಧ ರಾಜಕಾರಣ ತೀರಾ ಅಮಾನವೀಯ ಹಂತಕ್ಕೆ ತಲುಪಿದೆ. ಮುಸ್ಲಿಮರು ಪೊಲೀಸ್ ಇಲಾಖೆಯಲ್ಲಿ ಇರುವುದೇ ಅಪರೂಪ. ನಾಲ್ಕೈದು ಠಾಣೆಗಳಿಗೆ ಲೆಕ್ಕ ಹಾಕಿದರೆ ಒಬ್ಬ ಮುಸ್ಲಿಂ ಪೊಲೀಸ್ ಸಿಬ್ಬಂದಿ ಸಿಗುವುದು ಕಷ್ಟ. ಅಂತಹ ಒಬ್ಬಿಬ್ಬರು ಪೊಲೀಸರೂ ಸಂಘಪರಿವಾರಕ್ಕೆ ಸದಾ ಟಾರ್ಗೆಟ್, ಸಂಘದ ಭಯದಿಂದಲೆ ಅವರು ಕೆಲಸ ಮಾಡಬೇಕು.

ಸುಹಾಸ್ ಶೆಟ್ಟಿ ಕೊಲೆ ನಡೆದ ವ್ಯಾಪ್ತಿಯ ಬಜ್ಪೆ ಠಾಣೆಯಲ್ಲಿ ರಶೀದ್ ಎಂಬ ಹೆಡ್ ಕಾನ್ಸ್ ಟೇಬಲ್ ಇದ್ದಾರೆ. ಆತನ ಧರ್ಮವನ್ನು ಈಗ ಸುಹಾಸ್ ಕೊಲೆ ಆರೋಪಿಗಳ ಧರ್ಮದೊಂದಿಗೆ ಬಿಜೆಪಿ, ಸಂಘಪರಿವಾರ ಜೋಡಿಸಿ ಬಿಟ್ಟಿದೆ. ಹಂತಕರ ಜೊತೆ ಕಾನ್ಸ್ ಟೇಬಲ್ ರಶೀದ್ ಈ ಕೊಲೆಯ ಸಂಚಿನಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದೆ. ಇದಂತು ಭಯಾನಕ ಸ್ಥಿತಿ. ಇಂತಹ ವಾತಾವರಣದಲ್ಲಿ ಮುಸ್ಲಿಂ ಅಧಿಕಾರಿಗಳು, ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುವುದಾದರೂ ಹೇಗೆ? ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಅವರ ಆತ್ಮ ಸ್ಥೈರ್ಯ ಕುಸಿದು ಹೋಗುವುದಿಲ್ಲವೆ? ಇಡೀ ಪೊಲೀಸ್ ಇಲಾಖೆ ರಶೀದ್ ಜೊತೆ ನಿಲ್ಲಬೇಕಿದೆ.

ಸಿದ್ದರಾಮಯ್ಯ ಸರಕಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಭ್ರಷ್ಟ ಅಧಿಕಾರಿಗಳು, ದುಷ್ಟ ಕೋಮುವಾದಿಗಳಿಗೆ, ದಂಧೆಕೋರರಿಗೆ, ನಾಜೂಕಯ್ಯ ರಾಜಕಾರಣಿಗಳಿಗೆ ಬಿಟ್ಟು ಕೊಡಲಾಗಿದೆ. ನಿರುಪಯೋಗಿ ಪುಟ 6 ಕ್ಕೆ

“ಸ್ವತಂತ್ರ ಮಾಧ್ಯಮ ದನಿಯೆತ್ತದಂತೆ ಮಾಡುವುದು ಪ್ರಜಾಪ್ರಭುತ್ವವನ್ನು ಕಾಪಾಡುವುದಿಲ್ಲ, ಅದನ್ನು ದುರ್ಬಲಗೊಳಿಸುತ್ತದೆ”

‘ದಿ ವೈರ್’ ಮೇಲೆ ನಿರ್ಬಂಧವನ್ನು ಹಿಂತೆಗೆದುಕೊಳ್ಳುವಂತೆ ಡಿಜಿಪಬ್ ಆಗ್ರಹ

ದೇಶದ ಒಂದು ಪ್ರಮುಖ ಇಂಗ್ಲಿಷ್ ಡಿಜಿಟಲ್ ಮಾಧ್ಯಮವಾದ ‘ದಿ ವೈರ್’ ಅನ್ನು ನೋಡಲಾಗದಂತೆ ನಿರ್ಬಂಧಿಸಲಾಗಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ವಿವಿಧ ಡಿಜಿಟಲ್ ಸುದ್ದಿ ಮಾಧ್ಯಮ ಸಂಸ್ಥೆಗಳು ಮತ್ತು ಸ್ವತಂತ್ರ ಪತ್ರಕರ್ತರ ವೇದಿಕೆಯಾದ ಡಿಜಿಪಬ್ (DIGIPUB) ನ್ಯೂಸ್ ಇಂಡಿಯಾ ಫೌಂಡೇಶನ್, ಅದನ್ನು ಬಲವಾಗಿ ಖಂಡಿಸಿದೆ, ಭಾರತ ಸರ್ಕಾರ ನಿಜವಾಗಿಯೂ ಹಾಗೆ ಮಾಡಿದ್ದರೆ, ಅದು "ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಸ್ಪಷ್ಟ ಪ್ರಹಾರ" ಎಂದು ಅದು ಹೇಳಿದೆ. ಮುಂದುವರೆದು "ಸ್ವತಂತ್ರ ಮಾಧ್ಯಮವನ್ನು ಮೌನಗೊಳಿಸುವುದು ಪ್ರಜಾಪ್ರಭುತ್ವವನ್ನು ರಕ್ಷಿಸುವುದಿಲ್ಲ–ಅದು ಅದನ್ನು ದುರ್ಬಲಗೊಳಿಸುತ್ತದೆ" ಎಂದು ಅದು ಹೇಳಿದೆ.

ಮೇ 9ರಂದು ಕೆಲವು ಇಂಟರ್ನೆಟ್ ಸೇವಾ ಪೂರೈಕೆದಾರರು (ಐಎಸ್‌ಪಿಗಳು) ಸರ್ಕಾರದ ಆದೇಶದ ನಂತರ ತಮ್ಮ ವೆಬ್‌ಸೈಟ್‌ಗೆ ಪ್ರವೇಶವನ್ನು ನಿರ್ಬಂಧಿಸಿದ್ದಾರೆ, ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೇಳಿರುವ ಪ್ರಕಾರ ಹಾಗೆ ಮಾಡಲಾಗಿದೆ ಎಂದು ಒಂದು ಐಎಸ್‌ಪಿ ಹೇಳಿದೆ ಎಂದು ‘ದಿ ವೈರ್’ ಈ ಕುರಿತು ನೀಡಿರುವ ಹೇಳಿಕೆಯಲ್ಲಿ ತಿಳಿಸಿದೆ.

ದಿ ನ್ಯೂಸ್ ಮಿನಿಟ್, ನ್ಯೂಸ್‌ಲಾಂಡ್ರಿ, ಆರ್ಟಿಕಲ್ 14, ಆಲ್ಟ್‌ನ್ಯೂಸ್, ದಿ ಕ್ವಿಂಟ್, ಸ್ಕ್ರೋಲ್, ನ್ಯೂಸ್‌ಕ್ಲಿಕ್, ಬೂಮ್‌ಲೈವ್, ಕೋಬ್ರಾಪೋಸ್ಟ್, ಎಚ್‌ಡಬ್ಲ್ಯೂ ನ್ಯೂಸ್ ಮತ್ತು ಇತರ ಹಲವಾರು ವೆಬ್‌ಸೈಟ್‌ಗಳು ಮತ್ತು ಸ್ವತಂತ್ರ ಪತ್ರಕರ್ತರನ್ನು, ಸುದ್ದಿ ವೆಬ್‌ಸೈಟ್‌ಗಳನ್ನು ಸದಸ್ಯರಾಗಿ ಹೊಂದಿರುವ ಡಿಜಿಪಬ್, ಇಂತಹ ಸೆನ್ಸಾರ್‌ಶಿಪ್ ಅನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

"ಭಾರತ ಸರ್ಕಾರವು ವಾಕ್ ಸ್ವಾತಂತ್ರ್ಯದ ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಮತ್ತು ಸ್ವತಂತ್ರ ಮಾಧ್ಯಮಕ್ಕೆ ಅಡೆ–ತಡೆಗಳಿಲ್ಲದ ಅವಕಾಶವನ್ನು ಪುನಃಸ್ಥಾಪಿಸಬೇಕು– ಪ್ರಜಾಪ್ರಭುತ್ವವು ಮೌನದಲ್ಲಿ ಬದುಕುಳಿಯಲು ಸಾಧ್ಯವಿಲ್ಲ" ಎಂದು ಅದು ಹೇಳಿದೆ.

ಇದಕ್ಕೆ ಮೊದಲು, ಲ್ಯಾಪ್‌ಟಾಪ್‌ಗಳು ಮತ್ತು ಡೆಸ್ಕ್‌ಟಾಪ್‌ಗಳಲ್ಲಿ ಹಾಗೂ ಕೆಲವು ಮೊಬೈಲ್ ಫೋನ್‌ಗಳಲ್ಲಿ ‘ದಿ ವೈರ್’ನ ವೆಬ್‌ಸೈಟ್ ತೆರೆಯಲು ಸಾಧ್ಯವಾಗುತ್ತಿಲ್ಲ ಎಂದು ಹಲವರು ವರದಿ ಮಾಡಿದಾಗ, ಅದರ ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್ ತಮ್ಮ ಎಕ್ಸ್ ಹ್ಯಾಂಡಲ್‌ನಲ್ಲಿ, "ವಿವೇಕಯುತ, ಸತ್ಯವಾದ, ನ್ಯಾಯಯುತ ಮತ್ತು ತರ್ಕಬದ್ಧ ಸುದ್ದಿ ಮತ್ತು ಮಾಹಿತಿಯ ಧ್ವನಿಗಳು ಮತ್ತು ಮೂಲಗಳು ಭಾರತ ಹೊಂದಿರುವ ಅತಿದೊಡ್ಡ ಆಸ್ತಿಗಳಲ್ಲಿ ಒಂದಾಗಿರುವಾಗ" ಇಂತಹ ಸೆನ್ಸಾರ್‌ಶಿಪ್ ಭಾರತಕ್ಕೆ ಬರುತ್ತಿದೆ ಎಂದು ಪ್ರತಿಭಟಿಸಿದರು.

"ಈ ಸ್ವೇಚ್ಛಾಚಾರದ ಮತ್ತು ವಿವರಿಸಲಾಗದ ನಡೆಯನ್ನು ಪ್ರಶ್ನಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ” ಎಂದು ದಿ ವೈರ್ ಹೇಳಿದೆ.

"ಗೋದಿಮೀಡಿಯಾ" ಎಂದು ಕರೆಯಲ್ಪಡುವ ಟಿವಿ ಚಾನೆಲ್‌ಗಳು ಮಾಡುತ್ತಿರುವ ನಕಲಿ, ಪ್ರಚೋದನಕಾರಿ ಮತ್ತು ಉದ್ರೇಕಕಾರಿ ಸುದ್ದಿ ಪ್ರಸಾರದ ಪ್ರವಾಹದಿಂದಾಗಿ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದಿ ವೈರ್ ಗೆ ತಲುಪದಂತೆ ನಿರ್ಬಂಧಿಸಲಾಗಿದೆ, 4PM ನಂತಹ ವಿವಿಧ ಸ್ವತಂತ್ರ ಯು ಟ್ಯೂಬ್ ಚಾನೆಲ್‌ಗಳು ಹಾಗೂ ಗಾಯಕಿ ನೇಹಾ ಸಿಂಗ್ ರಾಥೋಡ್ ಮತ್ತು ಉಪನ್ಯಾಸಕಿ ಮಾದ್ರಿ ಕಾಕೋಟಿ (ಡಾ. ಮೆಡುಸಾ) ಮತ್ತು ಇತರರಂತಹ ವಿಡಂಬನಕಾರರ ಮೇಲೆ ನಿರ್ಬಂಧ ಹೇರಲಾಗಿದೆ ಅಥವಾ ಪ್ರಕರಣ ದಾಖಲಿಸಲಾಗಿದೆ.

ಮೇ 9 ರಂದು ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, "ಸಾರ್ವಜನಿಕರಿಗೆ ನಿಖರ, ವಿಭಿನ್ನ ಮತ್ತು ಸ್ವತಂತ್ರ ಮಾಹಿತಿಯ ತುರ್ತಾಗಿ ಲಭಿಸಬೇಕಾದ ಸಮಯದಲ್ಲಿ–ವಿಶೇಷವಾಗಿ ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ–ಇಂತಹ ಮನಸೋಇಚ್ಛೆ ನಿರ್ಬಂಧಗಳು ಅಪಾಯಕಾರಿ ಪೂರ್ವನಿದರ್ಶನವನ್ನು ಸ್ಥಾಪಿಸುತ್ತವೆ ಮತ್ತು ಸಾರ್ವಜನಿಕ ಹಿತಾಸಕ್ತಿ ಪತ್ರಿಕೋದ್ಯಮಕ್ಕೆ ಬದ್ಧವಾಗಿರುವ ಧ್ವನಿಗಳನ್ನು ನಿಗ್ರಹಿಸುತ್ತವೆ" ಎಂದು ಚೆನ್ನೈ ಪ್ರೆಸ್ ಕ್ಲಬ್ ಕೂಡ ಮಾಧ್ಯಮ ಸೆನ್ಸಾರ್‌ಶಿಪ್ ಅನ್ನು ಖಂಡಿಸಿದೆ. "ಸಾರ್ವಜನಿಕ ಭಾವನೆಗಳನ್ನು ಕೆರಳಿಸದಂತೆ ಮತ್ತು ರಾಷ್ಟ್ರೀಯ ಭದ್ರತೆ ಮತ್ತು ಸಾಮರಸ್ಯಕ್ಕೆ ಧಕ್ಕೆ ತರದಂತೆ" ಭಾರತ–ಪಾಕಿಸ್ತಾನದ ಉದ್ವಿಗ್ನತೆಯ ವರದಿ ಮಾಡುವಾಗ "ಅತ್ಯಂತ ಜವಾಬ್ದಾರಿ, ನಿಖರತೆ ಮತ್ತು ಸಂಯಮವನ್ನು" ಪಾಲಿಸಲು ಅದು ಎಲ್ಲಾ ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಾಧ್ಯಮ ಸಂಸ್ಥೆಗಳಿಗೆ ಕರೆ ನೀಡಿದೆ.

ದಿ ವೈರ್‌ನಂತಹ ಸ್ವತಂತ್ರ ಮಾಧ್ಯಮಗಳ ಮೇಲಿನ ದಮನವನ್ನು ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಇಂಡಿಯನ್ ವುಮೆನ್ಸ್ ಪ್ರೆಸ್ ಕೋರ್, ದಿಲ್ಲಿ ಪತ್ರಕರ್ತರ ಸಂಘ ಮತ್ತು ಪ್ರೆಸ್ ಅಸೋಸಿಯೇಷನ್ ಸಹ ಖಂಡಿಸಿವೆ. ಕೆಲವು ಮಾಧ್ಯಮ ವಿಭಾಗಗಳು ಮತ್ತು ಸ್ವತಂತ್ರ ಯೂಟ್ಯೂಬ್ ಚಾನೆಲ್‌ಗಳ ಮೇಲೆ ಸಹ "ಅನ್ಯಾಯವಾಗಿ ಗುರಿಯಿಡಲಾಗಿದೆ" ಎಂದು ಅವು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ಪ್ರಸಿದ್ಧ ಪತ್ರಕರ್ತರಾದ ಅನುರಾಧಾ ಭಸಿನ್ ಮತ್ತು ಮುಜಮಿಲ್ ಜಲೀಲ್ ಹಾಗೂ ಸ್ವತಂತ್ರ ಮಾಧ್ಯಮ ಸಂಸ್ಥೆ ಮಕ್ತೂಬ್ ಮೀಡಿಯಾ ಅವರ ಎಕ್ಸ್ ಖಾತೆಗಳನ್ನು ಸರ್ಕಾರವು "ಕಾನೂನು ಆಗ್ರಹ"ದ ಮೇಲೆ ತಡೆಹಿಡಿದಿದೆ ಎಂದೂ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

"ಇಡೀ ಮಾಧ್ಯಮವು ಜವಾಬ್ದಾರಿಯುತವಾಗಿ ವರ್ತಿಸಬೇಕು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲವಾದರೂ, ಮಾಧ್ಯಮ ವ್ಯಕ್ತಿಗಳು ಮತ್ತು ಸುದ್ದಿ ಸಂಸ್ಥೆಗಳ ಕೆಲವು ಸಾಮಾಜಿಕ ಮಾಧ್ಯಮ ಖಾತೆಗಳನ್ನು ಮನಬಂದಂತೆ ನಿರ್ಬಂಧಿಸುವುದನ್ನು, ಸಾರ್ವಜನಿಕಗೊಳಿಸದ ಆದೇಶಗಳನ್ನು ತೆಗೆದುಹಾಕಬೇಕು," ಎಂದು ಡಿಜಿಪಬ್ ಆಗ್ರಹಿಸಿದೆ.

ಮಂಗಳೂರು: ಹತ್ಯೆಗಳು ಮತ್ತು ಪೊಲೀಸ್ ಇಲಾಖೆಯ..... ಪುಟ 5 ರಿಂದ

ನಾಯಕರುಗಳು ಆಯೋಜಿಸುವ ಕಂಬಳಗಳಿಗೆ ಮಂಗಳೂರಿಗೆ ಬಂದು ಮುಂಡಾಸು ಕಟ್ಟಿ, ಬೆತ್ತ ಜಳಪಿಸಿ ವಾಪಾಸು ಹೋಗುವ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಇಂದಿನ ಸ್ಥಿತಿಗೆ ನೇರಹೊಣೆ.

ಗೃಹ ಸಚಿವರ ಹೇಳಿಕೆಯಲ್ಲಿ ವಿಶ್ವಾಸಾರ್ಹತೆಯ ಕೊರತೆಯಿದೆ

ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕೋಮು ಗಲಭೆ ತಡೆಯಲು ಹೊಸ ಟಾಸ್ಕ್ ಫೋರ್ಸ್ ಕೋಮು ನಿಗ್ರಹ ಕಾರ್ಯಪಡೆ ರಚಿಸುವುದಾಗಿ ಗೃಹ ಸಚಿವರು ಹೇಳಿದ್ದಾರೆ. ಈ ಎರಡು ಜಿಲ್ಲೆಗೆ ಮಾತ್ರ ಇದು ಸೀಮಿತವಾಗಿರುತ್ತದೆ. ಪ್ರತ್ಯೇಕವಾಗಿ ಆ್ಯಂಟಿ ನಕ್ಸಲ್ ಫೋರ್ಸ್ ನಂತೆ ಆ್ಯಂಟಿ ಕಮ್ಯುನಲ್ ಫೋರ್ಸ್ ಕೆಲಸ ಮಾಡುತ್ತದೆ. ರೆಗ್ಯುಲರ್ ಪೊಲೀಸರೊಂದಿಗೆ ಸಮನ್ವಯದೊಂದಿಗೆ ಇದು ಕೆಲಸ ಮಾಡಲಿದೆ, ಪ್ರಚೋದನಕಾರಿ ಭಾಷಣ ಮಾಡಿದರೆ, ಹೇಳಿಕೆ ನೀಡಿದರೆ ಅವರ ವಿರುದ್ದ ಕಠಿಣ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚನೆ ನೀಡಿದ್ದಾಗಿ ಸಚಿವರು ಹೇಳಿದರು. ಆದರೆ, ಕುಡುಪು ಮಾಬ್ ಲಿಂಚಿಂಗ್ ಪ್ರಕರಣದ ಎಸ್‌ಐಟಿ ತನಿಖೆ, ತಪ್ಪಿತಸ್ಥ ಪೊಲೀಸ್ ಕಮೀಷನರ್ ಮೇಲಿನ ಕ್ರಮಗಳನ್ನು ಜರುಗಿಸುವ ಕುರಿತು ಗೃಹ ಸಚಿವರು ಏನನ್ನೂ ಹೇಳದೆ, ತಿಪ್ಪೆ ಸಾರಿಸುವ ಮಾತುಗಳನ್ನಷ್ಟೆ ಆಡಿ ನಿರಾಶೆ ವ್ಯಕ್ತಪಡಿಸಿದರು. ಕುಡುಪು ಮಾಬ್ ಲಿಂಚಿಂಗ್ ಪ್ರಕರಣದ ಎಸ್‌ಐಟಿ ತನಿಖೆ, ತಪ್ಪಿತಸ್ಥ ಪೊಲೀಸ್ ಕಮೀಷನರ್ ಮೇಲಿನ ಕ್ರಮಗಳನ್ನು ಜರುಗಿಸುವ ಕುರಿತು ಗೃಹ ಸಚಿವರು ಏನನ್ನೂ ಹೇಳದೆ, ತಿಪ್ಪೆ ಸಾರಿಸುವ ಮಾತುಗಳನ್ನಷ್ಟೆ ಆಡಿದ್ದಾರೆ.

ಕರಾವಳಿ ಜಿಲ್ಲೆಯಲ್ಲಿ ಕೋಮುಶಕ್ತಿಗಳ ನಿಗ್ರಹಕ್ಕೆ ಸರಕಾರ ಕೈಗೊಳ್ಳುವ ಕ್ರಮಗಳ ಕುರಿತು ನೀಡಿರುವ ಸಚಿವರ ಹೇಳಿಕೆ ವಿಶ್ವಾಸಾರ್ಹತೆಯ ಕೊರತೆಯನ್ನು ಹೊಂದಿದೆ. ಸಚಿವರ ಹೇಳಿಕೆ ಪ್ರಾಯೋಗಿಕವಾಗಿ ಸಾಧ್ಯಗೊಳ್ಳುವುದು ಕಷ್ಟ ಸಾಧ್ಯ. ಇದು ನಕಾರಾತ್ಮಕ ಫಲಿತಾಂಶಕ್ಕೂ ಕಾರಣವಾಗುವ ಸಾಧ್ಯತೆ ಇದೆ. ಕೋಮುವಾದ, ಕೋಮು ಶಕ್ತಿಗಳನ್ನು ನಿಗ್ರಹಿಸುವುದು ಪೊಲೀಸರಿಂದ ಮಾತ್ರ ಸಾಧ್ಯ ಆಗುವ ಸಂಗತಿ ಅಲ್ಲ. ಅದು ಬಹಳ ದೀರ್ಘಕಾಲದಿಂದ ಸಂಘಟನಾತ್ಮಕವಾಗಿ ಕಟ್ಟಿ ಬೆಳೆಸಿದ ಒಂದು ಸೈದ್ಧಾಂತಿಕ ವ್ಯವಸ್ಥೆ. ಇದರ ವಿರುದ್ಧದ ಹೋರಾಟ ಅಂದರೆ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಲ್ಲಿ ಪರ್ಯಾಯ ಕಾರ್ಯಕ್ರಮಗಳನ್ನು ಇಟ್ಟು ಕೊಂಡು ದುಡಿಯುವುದು. ಕೋಮುವಾದಿ ಶಕ್ತಿಗಳ ಎದುರು ಸಣ್ಣ ಪುಟ್ಟ ಪ್ರತಿರೋಧಗಳಿಗೂ ಸಿದ್ದರಿಲ್ಲದ ಕಾಂಗ್ರೆಸ್ ಸರಕಾರ ಕೋಮುವಾದಿ ನಿಗ್ರಹ ಕಾರ್ಯಪಡೆ ಹೇಳಿಕೆಯನ್ನು ಕಾರ್ಯರೂಪಕ್ಕೆ ತರುವುದು ನಂಬಲು ಕಷ್ಟವಾಗುವ ಸಂಗತಿ. ಇದೇ ಸಚಿವರು ವರ್ಷದ ಹಿಂದೆ ರಚಿಸಿದ ಯಾಂಟಿ ಮೋರಲ್ ಪೊಲೀಸ್ ವಿಂಗ್ ಕಾರ್ಯಾಚರಣೆಗೆ ಇಳಿಯುವ ಮುನ್ನವೆ ಅಸ್ತಿತ್ವ ಕಳೆದು ಕೊಂಡಿರುವ ಅನುಭವ ಇರುವಾಗ ಸಚಿವರ ಮಾತು ಜನತೆಯಲ್ಲಿ ವಿಶ್ವಾಸ ಮೂಡಿಸುತ್ತಿಲ್ಲ. ಕ್ರಿಮಿನಲ್ ಹಿನ್ನಲೆಯ ದ್ವೇಷ ಭಾಷಣಕಾರರು, ರೌಡಿಗಳ ಮೇಲೆ ಕ್ರಮ ಕೈಗೊಳ್ಳಲು ಸತತವಾಗಿ ಹಿಂಜರಿದ ಸರಕಾರ, ಈಗ ಏಕಾಏಕಿ ದ್ವೇಷ ಭಾಷಣ ಮಾಡುವವರನ್ನು ಮುಲಾಜಿಲ್ಲದೆ ಹೆಡೆಮುರಿ ಕಟ್ಟುತ್ತೇವೆ ಎಂಬ ಮಾತು ಉತ್ತರ ಕುಮಾರನ ಪೌರುಷ ರೀತಿ ಕಾಣಿಸುತ್ತದೆ.

ಕೋಮುವಾದ ಆಳವಾಗಿ ಬೇರೂರಿರುವ ಕರಾವಳಿ ಜಿಲ್ಲೆಗಳ ಕುರಿತು ರಾಜ್ಯ ಸರಕಾರ ಅಧಿಕಾರಕ್ಕೆ ಬಂದ ತಕ್ಷಣವೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಪೊಲೀಸ್ ಇಲಾಖೆ ಮಾತ್ರವಲ್ಲದೆ, ಶಿಕ್ಷಣ, ವಿಶ್ವ ವಿದ್ಯಾಲಯ ಸೇರಿದಂತೆ ಎಲ್ಲಾ ಇಳಾಖೆಗಳಿಗೆ ಪ್ರಜ್ಞಾಪೂರ್ವಕ ನೇಮಕಾತಿ, ವಿಶೇಷ ಕಾರ್ಯಕ್ರಮಗಳನ್ನು ಯೋಜಿಸಬೇಕಿತ್ತು. ಆ ಕುರಿತು ಸಿಪಿಐ(ಎಂ) ಹಾಗೂ ವಿವಿಧ ಜನ ಚಳವಳಿಗಳು ರಾಜ್ಯ ಸರಕಾರದ ಗಮನ ಸೆಳೆದಿದ್ದವು. ಆದರೆ, ಈ ಕುರಿತು ಸಣ್ಣ ಕ್ರಮಗಳನ್ನೂ ಕೈಗೊಳ್ಳದೆ ಆನೆ ನಡೆದದ್ದೆ ದಾರಿ ಎಂಬಂತೆ ವರ್ತಿಸಿದ ಕಾಂಗ್ರೆಸ್ ಸರಕಾರ ಹಾಗೂ ಅದರ ನಾಯಕತ್ವ ಈಗ ಖೆಡ್ಡಾಕ್ಕೆ ಬಿದ್ದಿದೆ. ಇಂತಹ ಸಂದರ್ಭದಲ್ಲಿ ಉಸ್ತುವಾರಿ ಹಾಗೂ ಗೃಹ ಸಚಿವರ ವೀರಾವೇಶದ ಮಾತುಗಳು ಯಾರಲ್ಲೂ ವಿಶ್ವಾಸ ಮೂಡಿಸುತ್ತಿಲ್ಲ.

ಜನರೇ,"ಧರ್ಮ ಧರ್ಮ" ಎಂದು ಉದ್ರೇಕಗೊಳಿಸುವ, ರಕ್ತ ಹರಿಸುವ (ಖಳ) ನಾಯಕರ ಮಾತುಗಳಿಗೆ ಕಿವಿಗೊಡಬೇಡಿ. ಮಾನವೀಯತೆಗೆ ಬೆಲೆ ಕೊಡಿ. ಸರಕಾರವನ್ನು ನಂಬಿ ಕೂರಬೇಡಿ. ಅಕ್ಕಪಕ್ಕದ ಹಿಂದು ಮುಸ್ಲಿಮರನ್ನು ಪರಸ್ಪರ ರಕ್ಷಿಸಿ, ಹಿಂಸೆಗೆ ಇಳಿಯುವವರನ್ನು, ಪ್ರಚೋದಿಸುವವರನ್ನು ತರಾಟೆಗೆ ಎತ್ತಿಕೊಳ್ಳಿ. ಸೋದರತೆ, ಮಾನವತೆಯಲ್ಲಿ ಮಾತ್ರ ಬದುಕಿದೆ ಎನ್ನುತ್ತಾರೆ ಮುನೀರ್ ಕಾಟಿಪಳ್ಳ.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣದ ಆಳ ಅಗಲ ಎಲ್ಲವೂ ಹೊರ ಬರಬೇಕು. ಕತ್ತಿ ಬೀಸಿದವರನ್ನಷ್ಟೆ ಬಂಧಿಸಿದರೆ ಸಾಲದು. ಪಿತೂರಿದಾರರು ಬಹಿರಂಗಗೊಳ್ಳಬೇಕು. ಅದರ ಜೊತೆಗೆ, ಕೊಲೆಯ ತರುವಾಯ ಮುಸ್ಲಿಮರನ್ನು ಗುರಿಯಾಗಿಸಿ ನಡೆದ ಇರಿತದ ಪ್ರಕರಣಗಳಲ್ಲಿ ಭಾಗಿಯಾದ ಪ್ರತಿಯೊಬ್ಬರ ಬಂಧನವೂ ನಡೆಯಬೇಕು. ಈ ಇರಿತ ಪ್ರಕರಣಗಳು ಸಂಘಟಿತ ರೀತಿಯಲ್ಲಿ ನಡೆದಿದ್ದು, ಇದರ ಹಿಂದಿರುವವರನ್ನೂ ಬಂಧಿಸಬೇಕು. ಹಾಗೆಯೆ, ಕುಡುಪು ಮಾಬ್ ಲಿಂಚಿಂಗ್ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ನೇಮಕ, ಪ್ರಕರಣ ಮುಚ್ಚಿಹಾಕಲು ಯತ್ನಿಸಿದ ಪೊಲೀಸ್ ಕಮೀಷನರ್ ಮೇಲಿನ ಕ್ರಮಗಳ ಕುರಿತೂ ಜನತೆಗೆ ಉತ್ತರಿಸಬೇಕು. ಕಳೆದ ಎರಡು ವರ್ಷಗಳ ಕಾಲ ಕೋಮುಶಕ್ತಿಗಳ ಮೇಲೆ ಸರಿಯಾದ ಕ್ರಮ ಜರುಗಿಸದೆ ಮೃದು ಧೋರಣೆ ತಾಳಿದ ಪೊಲೀಸ್ ವ್ಯವಸ್ಥೆಯ ಅಮೂಲಾಗ್ರ ಕ್ರಮಗಳ ಕುರಿತೂ ಪ್ರಕಟಿಸಬೇಕು.

ಸರಕಾರ, ಪೊಲೀಸ್ ಇಲಾಖೆ ಅಲ್ಲಲ್ಲಿ ಹಿಂಸಾಚಾರಕ್ಕೆ ಪ್ರೇರಣೆ ನೀಡಿದ ಹಾಗೂ ಎಸಗಿದವರನ್ನು ಈ ಕೂಡಲೇ ಬಂಧಿಸಬೇಕು. ಶಾಂತಿ ಕದಡುವವರ ವಿರುದ್ದ ಕಠಿಣ ಕ್ರಮ ಜರುಗಿಸಬೇಕು ಹಾಗೂ ಇರಿತಕ್ಕೊಳಗಾದ ಸಂತ್ರಸ್ತರಿಗೆ ಪರಿಹಾರ ಕ್ರಮ ಒದಗಿಸಬೇಕಿದೆ.

ಪಹಲ್ಗಾಮ್ ದಾಳಿಗೆ ಭಾರತದ ಪ್ರತಿಕ್ರಿಯೆ

ಪ್ರಕಾಶ್ ಕಾರತ್

ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಮತ್ತು ಪಾಕಿಸ್ತಾನಿ ಪ್ರದೇಶಗಳ ಒಳಗೆ ಒಂಬತ್ತು ನೆಲೆಗಳನ್ನು ಗುರಿಯಾಗಿಸಿ ಭಾರತೀಯ ಸಶಸ್ತ್ರ ಪಡೆಗಳು ಮೇ 7ರ ಮುಂಜಾನೆ ಆಪರೇಷನ್ ಸಿಂಧೂರ ಹೆಸರಿನ ಮಿಲಿಟರಿ ಕಾರ್ಯಾಚರಣೆ ನಡೆಸಿವೆ. ಪಹಲ್ಗಾಮ್‌ನಲ್ಲಿ ನಡೆದ ಭಾರತೀಯ ಪ್ರವಾಸಿಗರ ಬರ್ಬರ ಹತ್ಯೆಗಳಿಗೆ ಪ್ರತಿಕ್ರಿಯಿಸುವ ಅಗತ್ಯದ ಬಗ್ಗೆ ರಾಜಕೀಯ ವಲಯದಲ್ಲಿ ಒಮ್ಮತವಿತ್ತು. ಭಾರತ ಸರಕಾರ ಮತ್ತು ಸಶಸ್ತ್ರ ಪಡೆಗಳ ಪ್ರತಿನಿಧಿಗಳು ಮುಂದಿಟ್ಟ ಪುರಾವೆಗಳು ನರಮೇಧದಲ್ಲಿ ಪಾಕಿಸ್ತಾನಿ ಸರಕಾರವು ನೇರವಾಗಿ ನಿರ್ವಹಿಸುವ ಲಷ್ಕರ್–ಎ–ತಯ್ಬಾ (ಎಲ್‌ಇಟಿ) ಸಂಘಟನೆ ಒಳಗೊಂಡಿರುವುದನ್ನು ಸಾಬೀತುಪಡಿಸುತ್ತದೆ. ಎಲ್‌ಇಟಿ ಈಗಾಗಲೇ ವಿಶ್ವಸಂಸ್ಥೆಯ ನಿಯೋಜಿತ ಭಯೋತ್ಪಾದಕ ಸಂಘಟನೆಗಳ ಪಟ್ಟಿಯಲ್ಲಿದೆ.

ಕೋಮು ಧ್ರುವೀಕರಣ ಸೃಷ್ಟಿಸುವುದು ಪಹಲ್ಗಾಮ್‌ನಲ್ಲಿನಡೆಸಿದದಾಳಿಯಉದ್ದೇಶವಾಗಿತ್ತು ಎಂದು ಮಿಲಿಟರಿ ಕಾರ್ಯಾಚರಣೆಗಳ ನಂತರ ಮಾಧ್ಯಮ ಗೋಷ್ಠಿಯಲ್ಲಿ ವಿದೇಶಾಂಗ ಕಾರ್ಯದರ್ಶಿ ಹೇಳಿದರು. ಅದು ನಿಜವಾದರೂ ಭಾರತೀಯ ಮುಖ್ಯವಾಹಿನಿ ಮಾಧ್ಯಮ ಮತ್ತು ವಿಶೇಷವಾಗಿ ಸಾಮಾಜಿಕ ಮಾಧ್ಯಮವು ಈ ಪಿತೂರಿಯನ್ನು ಗಣನೆಗೆ ತೆಗೆದುಕೊಂಡಿದೆಯೇ ಎಂಬ ಪ್ರಶ್ನೆಯನ್ನೂ ಎತ್ತುತ್ತದೆ. ಅದಕ್ಕೆ ಉತ್ತರ ಸ್ವಯಂ–ವೇದ್ಯವಾಗಿದೆ.

ಬಲಪಂಥೀಯ ಹ್ಯಾಂಡಲ್‌ಗಳ ಬಹುತೇಕ ವಿಭಾಗ ಮತ್ತು ಪೋಸ್ಟ್‌ಗಳು ಹರಡುತ್ತಲೇ ಇರುವ ವಿಷಮಯ ವಾತಾವರಣ ಕೂಡ ಕಡಿಮೆ ಅಪರಾಧವಲ್ಲ ಎನ್ನುವುದನ್ನು ಮನಗಾಣಬೇಕು. ಅವರು ಇದೇ ಧೋರಣೆಯನ್ನು ಅಳವಡಿಸಿಕೊಂಡಿದ್ದಾರೆ ಮಾತ್ರವಲ್ಲದೆ ಪಹಲ್ಗಾಮ್‌ನಲ್ಲಿ ಭಯೋತ್ಪಾದನೆ ಹರಡಿದವರ ರೀತಿಯಲ್ಲೇ ಜನರ ಒಗ್ಗಟ್ಟನ್ನು ಮುರಿಯಲು ಅವರು ಕೂಡ ಅಷ್ಟೇ ಸಂಕಲ್ಪ ತೊಟ್ಟಿರುವಂತೆ ಕಾಣುತ್ತದೆ. ಆದ್ದರಿಂದ ಮಾಧ್ಯಮದಲ್ಲಿನ ಈ ವಿಷವನ್ನು ನಿವಾರಿಸಲು ದೃಢವಾದ ಬ್ಯಾಕ್‌ಅಪ್ ಕಾರ್ಯಾಚರಣೆಯನ್ನು ಹೊಂದುವುದು ಕೂಡ ಅಷ್ಟೇ ಅಗತ್ಯವಾಗುತ್ತದೆ. ಈ ಉದ್ದೇಶವನ್ನು ಸಾಧಿಸಲು ಸಂವಿಧಾನ ಹಾಗೂ ಭಾರತದ ಕಾನೂನುಗಳಲ್ಲಿ ಸಾಕಷ್ಟು ನಿಯಮಗಳಿವೆ.

ಮಿಲಿಟರಿ ಕಾರ್ಯಾಚರಣೆಯು ನಿಖರವಾಗಿತ್ತು ಹಾಗೂ ಪರಿಸ್ಥಿತಿ ಉಲ್ಬಣಗೊಳ್ಳದಂತೆ ಟಾರ್ಗೆಟ್‌ಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು ಎಂದು ಭಾರತೀಯ ಅಧಿಕಾರಿಗಳು ಹೇಳಿದ್ದಾರೆ. ಸಮಕಾಲೀನ ಜಗತ್ತಿನಲ್ಲಿ, ಪೂರ್ಣಪ್ರಮಾಣದ ಮಿಲಿಟರಿ ಸಂಘರ್ಷದ ಪರಿಣಾಮವು ನಿಸ್ಸಂಶಯವಾಗಿಯೂ ವಿನಾಶಕಾರಿಯಾಗುತ್ತದೆ ಎನ್ನುವುದು ತುಂಬಾ ಸ್ಪಷ್ಟವಾಗಿದೆ. ಆದ್ದರಿಂದ, ಇಂಥ ಕಾರ್ಯಾಚರಣೆಗಳು ಯಾವಾಗಲೂ ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಸಾಧ್ಯತೆ ಹೊಂದಿರುವುದರಿಂದ ನಾವು ಆದಷ್ಟೂ ಹೆಚ್ಚು ಜಾಗರೂಕರಾಗಿರಬೇಕು. ಅಂಥ ಪರಿಸ್ಥಿತಿಯನ್ನು ನಿವಾರಿಸಬೇಕು.

ಭಾರತ ಇನ್ನಷ್ಟು ಹೆಚ್ಚು ವಿಶ್ವಾಸಾರ್ಹವಾದ ಪುರಾವೆಗಳನ್ನು ಸಂಗ್ರಹಿಸಬೇಕು. ಪಹಲ್ಗಾಮ್ ನರಮೇಧದ ಅಪರಾಧಿಗಳನ್ನು ಬಂಧಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಪಾಕಿಸ್ತಾನಿ ವ್ಯವಸ್ಥೆಯ ಮೇಲೆ ಇನ್ನಷ್ಟು ರಾಜತಾಂತ್ರಿಕ ಮತ್ತು ರಾಜಕೀಯ ಒತ್ತಡವನ್ನು ಹೇರಲು ಇದು ಅಗತ್ಯ. ಭವಿಷ್ಯದಲ್ಲಿ ಈ ರೀತಿಯ ಭಯೋತ್ಪಾದನಾ ಆಕ್ರಮಣಗಳು ನಡೆಯುವುದನ್ನು ತಡೆಯಲು ಇದು ಅಗತ್ಯ. ಸಮೃದ್ಧಿ ಮತ್ತು ಪ್ರಗತಿಗಾಗಿ ಉಭಯ ದೇಶಗಳ ಜನರು ಶಾಂತಿ ಮತ್ತು ಸ್ಥಿರತೆಗೆ ಅರ್ಹರಾಗಿದ್ದಾರೆ. ಭಾರತ ಒಂದು ವೈವಿಧ್ಯಮಯ ಸಮಾಜವಾಗಿದೆ ಹಾಗೂ ವಿವಿಧತೆಯಲ್ಲಿ ಏಕತೆಯೇ ಅದರ ದೊಡ್ಡ ಶಕ್ತಿಯಾಗಿದೆ. ಅದು ಹಾಗೆಯೇ ಇರಬೇಕು ಕೂಡ. ನಮ್ಮ ಜನರ ಒಗ್ಗಟ್ಟನ್ನು ಅಸ್ತವ್ಯಸ್ತಗೊಳಿಸುವ ಹಾಗೂ ಒಗ್ಗಟ್ಟನ್ನು ಮುರಿಯುವ ಯಾವುದೇ ಕ್ರಮಗಳಿಗೆ ಯಾರೂ ಕೈ ಹಾಕಬಾರದು. ಅಸ್ಮಿತೆ ಆಧಾರಿತ ದ್ವೇಷವನ್ನು ನಡೆಸುವುದರಿಂದ ದೂರವಿರಬೇಕು.



ಅನು: ವಿಶ್ವ

ಕಾಶ್ಮೀರ ಭಯೋತ್ಪಾದನೆಯ ಸಮಸ್ಯೆ ಪರಿಹಾರಕ್ಕೆ ಪಂಜಾಬಿನ ಪಾಠಗಳು

ಪಂಜಾಬಿನಲ್ಲಿ ನಿತ್ಯ ಭಯೋತ್ಪಾದನೆಯ ದಾಳಿಗಳು ನಡೆಯುತ್ತಿದ್ದ ಸಮಯ. ಪಾಕ್ ಗಡಿ ಭಾಗದಲ್ಲಿ 230 ಭಯೋತ್ಪಾದಕರ ತರಬೇತಿ ಕೇಂದ್ರಗಳನ್ನು ಸಿಐಎ ತನ್ನ ಹಣ, ಶಸ್ತ್ರಾಸ್ತ್ರಗಳಿಂದ ನಡೆಸುತ್ತಿದ್ದರು. ಪಾಕ್ ತನ್ನ ನೆಲವನ್ನು ಭಾರತದ ಗಡಿಯಲ್ಲಿ, ಅಫ್ಘಾನಿಸ್ತಾನದ ಗಡಿಯಲ್ಲಿ ದಶಕಗಳ ಕಾಲ ಸಿಐಎಗೆ ಬಾಡಿಗೆಗೆ ಕೊಟ್ಟು ಅಮೆರಿಕದಿಂದ ಬಹು ದೊಡ್ಡ ಪ್ರಮಾಣದ ಧನಸಹಾಯ ಪಡೆಯುತ್ತಿತ್ತು. ಇದಕ್ಕೆ ಹಿನ್ನೆಲೆಯೆಂದರೆ ಅಮೆರಿಕ ನೇಟೊ ರೀತಿಯಲ್ಲಿ ಸೀಟೋ, ಸೆಂಟೋ ಎಂಬ ಮಿಲಿಟರಿ ಕೂಟಗಳನ್ನು ರಚಿಸಿ ಅದಕ್ಕೆ ಪಾಕ್ ಅನ್ನು ಸೇರಿಸಿಕೊಂಡಿತ್ತು.

ಪಂಜಾಬಿನಲ್ಲಿ ಭಯೋತ್ಪಾದನೆಯಿಂದ ಸಾವಿರಾರು ಸಾಮಾನ್ಯ ಜನರು ಸಾವನ್ನಪ್ಪಿದ್ದರು. ಈ ಭಯೋತ್ಪಾದನೆಯನ್ನು, ಪಂಜಾಬ್ ಪ್ರತ್ಯೇಕ ದೇಶವಾಗುವ ಒತ್ತಾಯವನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಸಿಪಿಐ(ಎಂ)ನ 200ಕ್ಕೂ ಹೆಚ್ಚು ಯುವಕರು, ರೈತರು ಭಯೋತ್ಪಾದಕರನ್ನು ಎದುರಿಸಿ ಪ್ರಾಣ ತೆತ್ತಿದ್ದಾರೆ.

ಭೀಂದ್ರನವಾಲೇ ಹತ್ಯೆ, ಇಂದಿರಾಗಾಂಧಿಯವರ ಬಲಿ ತೆಗೆದುಕೊಂಡ ದೊಡ್ಡ ಭಯೋತ್ಪಾದನೆ ಅದು.

ಈಗ್ಯಾಕೆ ಈ ಕಥೆ ಎಂದರೆ, ಅಷ್ಟೊಂದು ತೀವ್ರವಾಗಿದ್ದ ಈ ಭಯೋತ್ಪಾದನೆ ನಂತರ ತಣ್ಣಗಾಯಿತು. ಏಕೆ? ಹೇಗೆ? ಎಂದರೆ ಸರ್ಕಾರದ ಮಿಲಿಟರಿ ಕ್ರಮಗಳಿಂದಲ್ಲ. ಪಂಜಾಬಿನ ಜನ ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ನಿಲ್ಲಿಸಿದ್ದರಿಂದ. ಪಂಜಾಬಿನ ಜನತೆ ತಮ್ಮ ಭವಿಷ್ಯ ಭಾರತದ ಒಳಗೇ ಎಂದು ಮನಗಾಣುವ ಪರಿಸ್ಥಿತಿಯನ್ನು ಉಂಟು ಮಾಡಿದ್ದರಿಂದ.

ಈಗ ಕಾಶ್ಮೀರದಲ್ಲಿ ಚುನಾವಣೆ ನಡೆದು ಜನರು ಬಯಸಿದ ಸರ್ಕಾರ ಅಸ್ತಿತ್ವಕ್ಕೆ ಬಂದಿರುವ ಸಂದರ್ಭದಲ್ಲಿ, ತಮ್ಮ ಬದುಕಿಗೆ ಶಾಂತಿ ಅವಶ್ಯ ಎಂದು ಜನ ಭಾವಿಸಿದ ಕಾರಣ, ಅಲ್ಲಿನ ಜನರು ಪಹಲ್ಗಾಮ್ ಭಯೋತ್ಪಾದನೆಯ ವಿರುದ್ಧ ದೊಡ್ಡ ಪ್ರಮಾಣದ ವಿರೋಧ ವ್ಯಕ್ತಪಡಿಸಿದ್ದಾರೆ.

ಅದನ್ನು ಅಡಿಪಾಯವಾಗಿಟ್ಟುಕೊಂಡು ಕೇಂದ್ರ ಸರ್ಕಾರ ಮುಂದುವರೆಯಬೇಕು. ಕಾಶ್ಮೀರದ ಜನ ಭಯೋತ್ಪಾದನೆಗೆ ಬೆಂಬಲ ನೀಡುವುದು ನಿಲ್ಲುವಂತೆ ಇವರ ನೀತಿ, ತಕ್ಷಣದ ಕ್ರಮಗಳು ಇರಬೇಕು.

ಕಾಶ್ಮೀರದಲ್ಲಿ ಇಂದೂ ಕೂಡ ಸಿಪಿಐ(ಎಂ) ಸಂಗಾತಿಗಳು ಭಯೋತ್ಪಾದನೆ ವಿರೋಧಿಸಿ ಅದರ ವಿರುದ್ಧ ಜನರ ನಡುವೆ ಅರಿವು ಮೂಡಿಸಲು ಶ್ರಮಿಸುತ್ತಿದ್ದಾರೆ. ಭಯೋತ್ಪಾದಕರ ಹಿಟ್ ಲಿಸ್ಟ್‌ನಲ್ಲಿ ಅತ್ಯಂತ ಮೇಲಿನ ಸ್ಥಾನದಲ್ಲಿದ್ದಾರೆ.

ಅವರೆಲ್ಲರ ಅಭಿಪ್ರಾಯವೆಂದರೆ ಕೇಂದ್ರ ಸರ್ಕಾರದ ಕ್ರಮಗಳು, 370, ರಾಜ್ಯ ಸ್ಥಾನ, ಸ್ವಾಯತ್ತ ಬೆಳವಣಿಗೆ, ಜನರ ಮೇಲೆ ಸೈನ್ಯದ ದೌರ್ಜನ್ಯ ಇವುಗಳ ಪರಿಹಾರ. ಇದು ಕಾಶ್ಮೀರದಲ್ಲಿ ಭಯೋತ್ಪಾದನೆಯ ಉತ್ಪಾದನೆಯನ್ನು ಕುಗ್ಗಿಸುತ್ತದೆ. ಹೊರಗಿನ ದಾಳಿಗಳಿಗೆ ಸ್ಥಳೀಯ ಬೆಂಬಲ ಇಲ್ಲವಾಗುವಂತೆ ಮಾಡುತ್ತದೆ.

ಕಾಶ್ಮೀರದ ಜನತೆಯನ್ನು ಒಲಿಸಿಕೊಳ್ಳುವುದೇ ಎಲ್ಲಕ್ಕಿಂತ ಮುಖ್ಯವಾಗಬೇಕು. ಒಳಗೆ ಒಗ್ಗಟ್ಟಿದ್ದರೆ ಹೊರಗಿನವರು ಕಡ್ಡಿ ಆಡಿಸುವುದಕ್ಕೆ ಅವಕಾಶವಾಗುವುದಿಲ್ಲ.

ಜಿ.ಎನ್.ನಾಗರಾಜ್ (ಚಿಂತಕರು)

ಭಯೋತ್ಪಾದಕರ ವಿರುದ್ಧದ ಕ್ರಮಗಳಿಗೆ ಬೆಂಬಲ: ಆಪರೇಷನ್ ಸಿಂಧೂರ್ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತೀಯ ಸಶಸ್ತ್ರ ಪಡೆಗಳು ಪಿಒಕೆ(ಪಾಕಿಸ್ತಾನ–ಆಕ್ರಮಿತ ಕಾಶ್ಮೀರ) ಮತ್ತು ಪಾಕಿಸ್ತಾನದಲ್ಲಿನ ಭಯೋತ್ಪಾದಕ ಶಿಬಿರಗಳು ಮತ್ತು ಅವುಗಳ ಮೂಲ ಸೌಕರ್ಯಗಳನ್ನು ನಾಶ ಮಾಡುವ ಉದ್ದೇಶದಿಂದ ಆಪರೇಷನ್ ಸಿಂಧೂರ್ ಅನ್ನು ನಡೆಸಿವೆ. ಈ ಪ್ರಹಾರಗಳನ್ನು ನಿದಿಷ್ಟ ಗುರಿಗಳ ಮೇಲೆ, ಅಳೆದು–ಸುರಿದು ಮತ್ತು ಪರಿಸ್ಥಿತಿ ಉಲ್ಬಣಗೊಳ್ಳದ ರೀತಿಯಲ್ಲಿ ಮಾಡಲಾಗಿದೆ ಹಾಗೂ ಒಂಬತ್ತು ಸ್ಥಳಗಳಲ್ಲಿ ಯಶಸ್ವಿಯಾಗಿ ಇದನ್ನು ನಡೆಸಲಾಯಿತು ಎಂದು ಸಶಸ್ತ್ರ ಪಡೆಗಳು ಹೇಳಿವೆ.

ಒಕ್ಕೂಟ ಸರ್ಕಾರ ಕರೆದ ಸರ್ವಪಕ್ಷ ಸಭೆಯಲ್ಲಿ, ಭಯೋತ್ಪಾದಕರು ಮತ್ತು ಅವರ ನಿರ್ವಾಹಕರ ವಿರುದ್ಧ ಗುರಿಯಿಟ್ಟು ಒಕ್ಕೂಟ ಸರ್ಕಾರ ತೆಗೆದುಕೊಳ್ಳುವ ಕ್ರಮಗಳಿಗೆ ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲ ನೀಡಿದ್ದವು ಎಂದು ಈ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಈ ಕ್ರಮಗಳ ಜೊತೆಗೆ, ಪಹಲ್ಗಾಮ್‌ನಲ್ಲಿ ಮುಗ್ಧ ಜನರ ಹತ್ಯಾಕಾಂಡಕ್ಕೆ ಕಾರಣರಾದವರನ್ನು ಹಸ್ತಾಂತರಿಸಲು ಮತ್ತು ತನ್ನ ಪ್ರದೇಶದಿಂದ ಯಾವುದೇ ಭಯೋತ್ಪಾದಕ ಶಿಬಿರಗಳು ಕಾರ್ಯನಿರ್ವಹಿಸದಂತೆ ನೋಡಿಕೊಳ್ಳಲು ಪಾಕಿಸ್ತಾನದ ಮೇಲೆ ಒತ್ತಡ ಹೇರುವುದನ್ನು ಮುಂದುವರಿಸಬೇಕು. ಜನರ ಐಕ್ಯತೆ ಮತ್ತು ದೇಶದ ಸಮಗ್ರತೆಯನ್ನು ರಕ್ಷಿಸಲಾಗುತ್ತಿದೆ ಎಂಬುದನ್ನು ಭಾರತ ಸರ್ಕಾರ ಖಚಿತಗೊಳಿಸಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.





ತನ್ನ ದುಡಿಮೆಗೆ ಸೂಕ್ತವಾದ ವೇತನವನ್ನು ಪಡೆಯುವುದು ಪ್ರತಿ ಶ್ರಮಿಕರ ಮೂಲಭೂತ ಹಕ್ಕು. ಕನಿಷ್ಟ ವೇತನವನ್ನು ಪುನರ್ ವಿಮರ್ಶೆ ಮಾಡಬೇಕೆಂಬ ಬೇಡಿಕೆಯನ್ನು ಒತ್ತಾಯಿಸಿ ಕಾರ್ಮಿಕರು ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದ್ದಾರೆ. 2025ರ ಮೇ 20ರ ಸಾರ್ವತ್ರಿಕ ಮುಷ್ಕರದ ಬೇಡಿಕೆಗಳಲ್ಲಿ ಇದೂ ಒಂದು. ಕನಿಷ್ಟ ವೇತನ ಎಂದರೇನು? ಕನಿಷ್ಟ ವೇತನ ಯಾಕಾಗಿ ಅವಶ್ಯಕವಾಗಿದೆ? ಕನಿಷ್ಟ ವೇತನವನ್ನು ಲೆಕ್ಕ ಹಾಕುವುದು ಹೇಗೆ? ಇಂದಿನ ಕನಿಷ್ಟ ವೇತನ ಎಷ್ಟಿರಬೇಕು? ಕನಿಷ್ಟ ವೇತನದ ಕುರಿತು ಕಾರ್ಮಿಕ ಸಂಘಟಣೆಗಳು ಜಂಟಿಯಾಗಿ ಸಲ್ಲಿಸಿದ ಸಲಹೆಗಳಲ್ಲಿ ಏನಿದೆ? ಕನಿಷ್ಟ ವೇತನ ಹೆಚ್ಚಾದಲ್ಲಿ ಕೈಗಾರಿಕೆಗಳು ರಾಜ್ಯ ಬಿಟ್ಟು ಹೋಗುತ್ತವೆಯೇ? ಈ ಕುರಿತು ವಿವರಣೆ ಇಲ್ಲಿದೆ.

ವೈಜ್ಞಾನಿಕ ಕನಿಷ್ಟ ವೇತನದ ಜಾರಿ: ರಾಜ್ಯ ಸರ್ಕಾರದ ಆದ್ಯತೆಯ ಕರ್ತವ್ಯ


ಮೀನಾಕ್ಷಿ ಸುಂದರಂ
ಸಿಐಟಿಯು ಪ್ರಧಾನ ಕಾರ್ಯದರ್ಶಿ

ತನ್ನ ದುಡಿಮೆಗೆ ಸೂಕ್ತವಾದ ವೇತನವನ್ನು ಪಡೆಯುವುದು ಪ್ರತಿ ಶ್ರಮಿಕನ ಮೂಲಭೂತ ಹಕ್ಕು. ಶ್ರಮದ ಮಾರುಕಟ್ಟೆಯಲ್ಲಿ ಶೋಷಣೆಯನ್ನು ತಡೆಯಲು ಹಾಗು ಉತ್ಪಾದನಾ ಕ್ಷೇತ್ರದಲ್ಲಿ ವೇತನಕ್ಕಾಗಿ ಆಗುವ ಖರ್ಚನ್ನು ಕಡಿತಗೊಳಿಸಲು ನಡೆಯುವ ಅಮಾನವೀಯ ಪೈಪೋಟಿಯನ್ನು ನಿಗ್ರಹಿಸಲು ಕನಿಷ್ಟ ವೇತನವನ್ನು ಸಮರ್ಪಕವಾಗಿ ಜಾರಿಗೊಳಿಸುವುದು ಸರ್ಕಾರಗಳ ಅನಿವಾರ್ಯ ಹಾಗು ಆದ್ಯತೆಯ ಕರ್ತವ್ಯವಾಗಿರುತ್ತದೆ.

ಕನಿಷ್ಟ ವೇತನ ಕಾಯಿದೆ 1948ರ ಚಾರಿತ್ರಿಕ ಹಿನ್ನೆಲೆ:

ಸ್ವಾತಂತ್ರ್ಯ ಪೂರ್ವದಲ್ಲಿ 1943 ಮತ್ತು 1944ರಲ್ಲಿ ನಡೆದ "ಸ್ಥಾಯಿ ಕಾರ್ಮಿಕ ಸಮಿತಿ"ಯ ಮೂರನೇ ಮತ್ತು ನಾಲ್ಕನೇ ಸಭೆಗಳಲ್ಲಿ ಹಾಗು 1943, 1944 ಮತ್ತು 1945ರಲ್ಲಿ ನಡೆದ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದ ಸತತ ಅಧಿವೇಶನಗಳಲ್ಲಿ ಭಾರತದಲ್ಲಿ ದುಡಿಯುವ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ನಿಗದಿಪಡಿಸಲು ಶಾಸನಬದ್ಧ ಉಪಕರಣಗಳನ್ನು ಸ್ಥಾಪಿಸಲು ಚರ್ಚೆಗಳಾದವು. 1945ರ ತ್ರಿಪಕ್ಷೀಯ ಸಭೆಯು ಕನಿಷ್ಟ ವೇತನ ಶಾಸನವನ್ನು ತಾತ್ವಿಕವಾಗಿ ಜಾರಿಗೆ ತರುವ ತೀರ್ಮಾನವನ್ನು ಅನುಮೋದಿಸಿತು. ಅದರಂತೆ ಏಪ್ರಿಲ್ 11, 1946ರಂದು ಸಂಸತ್ತಿನಲ್ಲಿ ಕನಿಷ್ಟ ವೇತನ ಮಸೂದೆಯನ್ನು ಪರಿಚಯಿಸಲಾಯಿತು. ಆದರೆ ದೇಶದ ಸ್ವಾತಂತ್ರ್ಯದ ಪ್ರಕ್ರಿಯೆಯ ಕಾರಣಗಳಿಂದ ಸ್ವಲ್ಪ ವಿಳಂಬವಾಗಿ, ಮಾರ್ಚ್ 1948ರಲ್ಲಿ ಕನಿಷ್ಟ ವೇತನ ಕಾಯಿದೆಯನ್ನು ಅಂಗೀಕರಿಲಾಗಿದೆ.

ಈ ಪ್ರಕ್ರಿಯೆಗೆ ಮೂಲಕಾರಣ, ಜಾಗತಿಕವಾಗಿ ಹಾಗು ದೇಶದಲ್ಲಿ ಕಾರ್ಮಿಕ ಸಂಘಟನೆಗಳು ನಡೆಸಿದ ಹೋರಾಟಗಳು. ಈ ಹೋರಾಟಗಳ ಪರಿಣಾಮವಾಗಿ, 1928ರಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ಐಎಲ್‌ಓ)ದ 11ನೇ ಅಧಿವೇಶನದಲ್ಲಿ ಮೊದಲ ಬಾರಿಗೆ ಕನಿಷ್ಟ ವೇತನವನ್ನು ನಿಗಧಿಪಡಿಸಲು ಶಾಸನಬದ್ಧ ಉಪಕರಣಗಳನ್ನು ಸಿದ್ದಪಡಿಸುವ ವಿಚಾರವನ್ನು ಕನ್ವೆನ್ಸನ್ 26ರಲ್ಲಿ ಅಂಗೀಕರಿಸಲಾಯಿತು. ಅದರ ನಂತರ ಐಎಲ್‌ಓ 34ನೇ ಅಧಿವೇಶನದಲ್ಲಿ (1951) ಕೃಷಿ ಕ್ಷೇತ್ರದಲ್ಲಿನ ಕಾರ್ಮಿಕರ ಕನಿಷ್ಟ ವೇತನದ ನಿಗಧಿಯನ್ನು 11ನೇ ಅಧಿವೇಶನದ ಆಧಾರದಲ್ಲಿ ಮಾಡಲು ಕನ್ವೆನ್ಸನ್ 99ರಲ್ಲಿ ತೀರ್ಮಾನಿಸಿತು. ಅದರ ನಂತರ ಐಎಲ್‌ಓ ಕನ್ವೆನ್ಸನ್ 131 (1970)ರಲ್ಲಿ ಅಭಿವೃದ್ಧಿಶೀಲ ದೇಶಗಳಲ್ಲಿ ಕನಿಷ್ಟ ವೇತನ ನಿಗಧಿ ಹಾಗು ಈ ಕನಿಷ್ಟ ವೇತನದ ಕಾನೂನುಬದ್ಧ ಜಾರಿಯಿಂದ ದುರ್ಬಲ ಕಾರ್ಮಿಕರ ಜೀವನಮಟ್ಟವನ್ನು ಎತ್ತರಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದೆಂದು ತೀರ್ಮಾನಿಸಿತ್ತು.



1957ರಲ್ಲಿ ದೆಹಲಿಯಲ್ಲಿ ನಡೆದ ಭಾರತ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ 15ನೇ ಅಧಿವೇಶನವು, ದೇಶದಲ್ಲಿನ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರ ಕನಿಷ್ಟ ಅಗತ್ಯತೆಗಳನ್ನು ಪೂರೈಸಲು ಸೂಕ್ತವಾದ ಕನಿಷ್ಟ ವೇತನವನ್ನು ನಿಗಧಿಪಡಿಸಲು ನಿರ್ಧಿಷ್ಟ ಸೂತ್ರಗಳನ್ನು ಪ್ರಕಟಿಸಿತು. 1991ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರೆಪ್ಟಕೋಸ್ ಬ್ರೆಟ್ ಪ್ರಕರಣದಲ್ಲಿ, ಮಕ್ಕಳ ಶಿಕ್ಷಣ, ಅರೋಗ್ಯ, ಮನೋರಂಜನೆ ಇತ್ಯಾದಿಗಳ ಖರ್ಚುಗಳಿಗಾಗಿ ಹೆಚ್ಚುವರಿ ಶೇ.25 ಸೇರಿಸಿ ಕನಿಷ್ಟ ವೇತನವನ್ನು ನಿಗಧಿಪಡಿಸಬೇಕು ಎಂಬ ತೀರ್ಪನ್ನು ನೀಡಿತು. ಕನಿಷ್ಟ ವೇತನವನ್ನು ನಿಗಧಿಪಡಿಸಲು ಅನುಸರಿಸಬೇಕಾದ ಸೂತ್ರದ ಮೂಲ ಅಂಶಗಳು ಈ ಕೆಳಗಿನಂತಿವೆ:

ಓರ್ವ ದುಡಿಯುವ ವ್ಯಕ್ತಿಗೆ ಮೂರು ಬಳಕೆಯ ಯೂನಿಟ್‌ಗಳು, ಸರಳ ಚಟುವಟಿಕೆ ನಡೆಸುವ ಸರಾಸರಿ ಭಾರತೀಯ ವಯಸ್ಕರಿಗೆ ಡಾ. ಅಕ್ರಾಯ್ಡ್ ಶಿಫಾರಸ್ಸು ಮಾಡಿರುವ ರೀತಿಯಲ್ಲಿ 2700 ಕ್ಯಾಲೊರಿ ನಿವ್ವಳ ಆಹಾರ ಸೇವನೆಯು ಕನಿಷ್ಠ ಆಹಾರ ಅವಶ್ಯಕತೆಯಾಗಬೇಕು.

ವರ್ಷಕ್ಕೆ 72 ಯಾರ್ಡ್ ಬಟ್ಟೆಯ ಅವಶ್ಯಕತೆ, ಸರ್ಕಾರದ ಕೈಗಾರಿಕಾ ಪ್ರದೇಶ ಗೃಹ ಯೋಜನೆಗೆ ಪೂರಕವಾಗಿ ಬಾಡಿಗೆ, ಒಟ್ಟು ಕನಿಷ್ಠ ವೇತನದ ಶೇ.20ರಷ್ಟು ಪ್ರಮಾಣ ಇಂಧನ, ಬೆಳಕು ಮತ್ತಿತರ ವಸ್ತುಗಳಿಗೆ ಆಗಬೇಕು.

ಹಾಗು ಶಿಕ್ಷಣ ವೆಚ್ಚ, ವೈದ್ಯಕೀಯ ಅಗತ್ಯ, ಹಬ್ಬಗಳು/ಆಚರಣೆಗಳು ಒಳಗೊಂಡು ಕನಿಷ್ಟ ಮನರಂಜನೆ ಮತ್ತು ವೃದ್ಯಾಪ್ಯ, ಮದುವೆ ಇತ್ಯಾದಿಗಳಿಗೆ ಕೂಡಿಡುವುದಕ್ಕೆ ಒಟ್ಟು ಕನಿಷ್ಠ ವೇತನದಲ್ಲಿ ಶೇ.25ರಷ್ಟು ಪ್ರಮಾಣ ಹೊಂದಿರಬೇಕು.

ಈ ರೀತಿಯಲ್ಲಿ ನಿಗಧಿಪಡಿಸಲಾಗುವ ಕನಿಷ್ಟ ವೇತನವು ಐದು ವರ್ಷಗಳ ಕಾಲಾವಧಿಗೆ ಹೆಚ್ಚಾಗಲಾರದಂತೆ ಪುನರ್‌ವಿಮರ್ಶೆಗೆ ಒಳಗಾಗಬೇಕೆಂಬ ನಿಯಮವಿದೆ. ನಿಗಧಿಪಡಿಸಲಾದ ಕನಿಷ್ಟ ವೇತನವನ್ನು ನೀಡಲು ಯಾವುದೇ ಮಾಲೀಕರು ನಿರಾಕರಿಸುವಂತಿಲ್ಲ ಎಂಬುದು ಮತ್ತೊಂದು ಮುಖ್ಯವಾದ ನಿಯಮವಾಗಿದೆ.

ಕನಿಷ್ಟ ವೇತನ ನಿಗದಿಪಡಿಸಲು ಶಾಸನಬದ್ಧ ವಿಧಾನಗಳು:

ಕನಿಷ್ಟ ವೇತನ ಕಾಯಿದೆ 1948ರ ಸೆಕ್ಷನ್ 5(1) ಕನಿಷ್ಟ ವೇತನವನ್ನು ಪ್ರಕಟಿಸುವ ವಿಧಾನ ಕುರಿತದ್ದಾಗಿರುತ್ತದೆ. ಸೆಕ್ಷನ್ 5(1) (ಎ) ಪ್ರಕಾರ ಶೆಡ್ಯೂಲ್‌ನಲ್ಲಿರುವ ಉದ್ದಿಮೆಗಳಿಗೆ ಪ್ರತ್ಯೇಕ ಸಮಿತಿಗಳು, ಉಪ ಸಮಿತಿಗಳನ್ನು ನೇಮಕಮಾಡುವುದು ಹಾಗು ಆ ಸಮಿತಿಗಳ ಶಿಫಾರಸ್ಸುಗಳನ್ನು ಆಧರಿಸಿ ಕನಿಷ್ಟ ವೇತನದ ಅಂತಿಮ ಪ್ರಕಟಣೆಯನ್ನು ಮಾಡಬಹುದು. ಅಥವಾ ಸೆಕ್ಷನ್ 5(1)(ಬಿ) ಪ್ರಕಾರ, ಕನಿಷ್ಟ ವೇತನ ಉದ್ದೇಶವನ್ನು ನಿಗದಿಪಡಿಸುವ ಕುರಿತು ಕರಡು ಪ್ರಕಟಣೆಯನ್ನು ಗೆಜೆಟ್‌ನಲ್ಲಿ ಪ್ರಕಟಿಸಿದ ನಂತರ ಬಾಧಿತರಾಗುವವರಿಂದ ಆಕ್ಷೇಪಣೆ/ಸಲಹೆಗಳನ್ನು ಎರಡು ತಿಂಗಳುಗಳಿಗೆ ಹೆಚ್ಚಾಗದ ಕಾಲಮಿತಿಯಲ್ಲಿ ಸ್ವೀಕರಿಸಬೇಕು. ಸ್ವೀಕೃತ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಿ ಅಂತಿಮ ಪ್ರಕಟಣೆಯನ್ನು ಮಾಡಬೇಕು.

ಈ ಸಂಕ್ಷಿಪ್ತ ಚರಿತ್ರೆಯ ಹಿನ್ನೆಲೆಯಲ್ಲಿ 2025 ಏಪ್ರಿಲ್ ತಿಂಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಪ್ರಕಟಿಸಿರುವ ಕರಡು ಕನಿಷ್ಟ ವೇತನ ಅಧಿಸೂಚನೆಯನ್ನು ವಿಶ್ಲೇಷಣೆ ಮಾಡುವುದು ಮುಖ್ಯವಾಗುತ್ತದೆ.

2025ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಪ್ರಕಟಿಸಿರುವ ಕರಡು ಕನಿಷ್ಟ ವೇತನದ ಕುರಿತು:

ಹಿನ್ನೆಲೆ:


ಕರ್ನಾಟಕ ರಾಜ್ಯದಲ್ಲಿ ಸಿಐಟಿಯು 2008ರಿಂದಲೇ ಕನಿಷ್ಟ ವೇತನದ ಶೆಡ್ಯೂಲ್‌ನಲ್ಲಿರುವ ಎಲ್ಲಾ ಕೈಗಾರಿಕೆಗಳಿಗೂ ಒಂದೇ ಪ್ರಕಟಣೆಯ ಮೂಲಕ, ಏಕಕಾಲದಲ್ಲಿ ಕನಿಷ್ಟ ವೇತನವನ್ನು ಪುನರ್ ವಿಮರ್ಶೆ ಮಾಡಬೇಕೆಂಬ ಬೇಡಿಕೆಯನ್ನು ಒತ್ತಾಯಿಸಿ ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಿದೆ. ವೈಜ್ಞಾನಿಕ ಕನಿಷ್ಟ ವೇತನ ಬೇಡಿಕೆ ಇಟ್ಟು ಹೋರಾಟ ನಡೆಸಿದ ಕಾರಣಕ್ಕಾಗಿ ಸಿಐಟಿಯುವಿನ ನೂರಾರು ಕಾರ್ಯಕರ್ತರು ಹಾಗು ಮುಖಂಡರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಈ ನಿರಂತರ ಹೋರಾಟಗಳ ಫಲವಾಗಿ 2016–17ನೇ ಸಾಲಿನಲ್ಲಿ ಬಹುತೇಕ ಉದ್ದಿಮೆಗಳಿಗೆ ಏಕರೂಪದಲ್ಲಿನ ವೇತನವಿರುವ ಪ್ರತ್ಯೇಕ ಕನಿಷ್ಟ ವೇತನ ಪ್ರಕಟಣೆಗಳನ್ನು ಮಾಡಲು ರಾಜ್ಯ ಸರ್ಕಾರವು ಮುಂದಾಯಿತು. ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ರಾಜ್ಯದ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ಅಗತ್ಯ ವಸ್ತುಗಳ ಬೆಲೆಗಳು, ಮನೆ ಬಾಡಿಗೆ ಮುಂತಾದ ಹಲವು ಅಂಶಗಳನ್ನು ಅಧ್ಯಯನ ಮಾಡಿದ ನಂತರ ಒಂದು ಉತ್ತಮ ಪುನರ್‌ವಿಮರ್ಶೆ ಮಾಡಲು ಸಾಧ್ಯವಾಯಿತು. ಆದರೆ ರಾಜ್ಯದ ಹಲವು ಮಾಲೀಕರು ಈ ಎಲ್ಲಾ ಪ್ರಕಟಣೆಗಳನ್ನು ಪ್ರಶ್ನಿಸಿ ಕಾನೂನು ಪ್ರಕ್ರಿಯೆಯಲ್ಲಿ ತೊಡಗಿದ್ದರು. ಅಂತಿಮವಾಗಿ ದೇಶದ ಸರ್ವೋಚ್ಚ ನ್ಯಾಯಾಲಯವು 2016–17ರಲ್ಲಿನ ಕನಿಷ್ಟ ವೇತನ ಪ್ರಕಟಣೆಗಳು ನ್ಯಾಯ ಹಾಗು ವೈಜ್ಞಾನಿಕವಾಗಿದೆ ಎಂಬ ತೀರ್ಪನ್ನು ನೀಡಿರುತ್ತದೆ. ಇದರಿಂದಾಗಿ ರಾಜ್ಯದ ಹಲವು ಉದ್ದಿಮೆಗಳಲ್ಲಿನ ಕಾರ್ಮಿಕರು ಪೂರ್ವಾನ್ವಯವಾಗುವಂತೆ ಬಾಕಿ ಸಮೇತವಾಗಿ ವೇತನ ಹೆಚ್ಚಳವನ್ನು ಪಡೆಯಲು ಸಾಧ್ಯವಾಗಿದೆ. ಐದು ವರ್ಷದ ಅವಧಿಯಲ್ಲಿ ಈ ಕನಿಷ್ಟ ವೇತನವನ್ನು ಮತ್ತೆ ಪುನರ್‌ವಿಮರ್ಶೆಗೆ ಒಳಪಡಿಸಬೇಕಿತ್ತು. ಕಳೆದ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ 2021–22ರಲ್ಲಿ ಒಟ್ಟು 81 ↗

ಉದ್ಧಿಮೆಗಳಿಗೆ ಕನಿಷ್ಟ ವೇತನವನ್ನು ಪುನರ್‌ವಿಮರ್ಶೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕಾರ್ಮಿಕ ಸಂಘಟನೆಗಳು ಒತ್ತಾಯಿಸಿದವು. ಆದರೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಚಾಲ್ತಿಯಲ್ಲಿದ್ದ ಕೂಲಿಗೆ ಶೇ. 5ರಿಂದ ಶೇ. 10ರಷ್ಟು ಹೆಚ್ಚಳಮಾಡಿ ಹೊಸ ಪ್ರಕಟಣೆಗಳನ್ನು ಮಾಡಲು ಮುಂದಾಯಿತು. ಈ ಮೋಸದ ಪ್ರಯತ್ನವನ್ನು ವಿರೋಧಿಸಿ ಸಿಐಟಿಯು ಹಾಗು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಆಕ್ಷೇಪಣೆಗಳನ್ನು ಹಾಗು ಸಲಹೆಗಳನ್ನು ಸಲ್ಲಿಸಿದವು.

ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಸಲ್ಲಿಸಿದ ಸಲಹೆಗಳ ಸಾರಾಂಶ:

* ಪ್ರಸ್ತುತ ಕನಿಷ್ಠ ವೇತನದ ನ್ಯಾಯಶಾಸ್ತ್ರವು ಒಂದು ಸಾಮಾನ್ಯ ಕುಟುಂಬವು ಕಾರ್ಮಿಕನ/ಳ ಜೊತೆಯಲ್ಲಿ ಓರ್ವ ಹೆಂಡತಿ/ಗಂಡ ಮತ್ತು 14 ವರ್ಷದೊಳಗಿರುವ ಇಬ್ಬರು ಮಕ್ಕಳು ಎಂದು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಗಂಡನಿಗೆ 1 ಯೂನಿಟ್, ಹೆಂಡತಿಗೆ 0.8 ಯೂನಿಟ್ ಮತ್ತು ಇಬ್ಬರು ಮಕ್ಕಳಿಗೆ ತಲಾ 0.6 ಯೂನಿಟ್ ಲೆಕ್ಕದಲ್ಲಿ ಕನಿಷ್ಠ ವೇತನವು 3 ಸೇವನೆ ಯೂನಿಟ್‌ಗಳನ್ನು ಪರಿಗಣಿಸಬೇಕು. ಇದನ್ನು ಇನ್ನಷ್ಟು ಸುಧಾರಿಸಿ, ಹೆಂಡತಿಗೆ 1 ಯೂನಿಟ್ ಮತ್ತು ಇಬ್ಬರು ಮಕ್ಕಳಿಗೆ ತಲಾ 0.8 ಯೂನಿಟ್ ಲೆಕ್ಕದಲ್ಲಿ ಒಟ್ಟು 3.6 ಯೂನಿಟ್‌ಗೆ ಏರಿಸಬೇಕು.
* ಮೊಬೈಲ್ ಫೋನ್ ಡಾಟಾ ಬಳಕೆಗೆ ಮಾಸಿಕ ರೂ.294 ಹೆಚ್ಚುವರಿ ಅಂಶ ಸೇರಿಸಬೇಕು. ಡಿಜಿಟಲ್ ಇಂಡಿಯಾ ಕಾರ್ಯಕ್ರಮದಿಂದ ಅಂತರ್‌ಜಾಲದ ವೆಚ್ಚ ಅನಿವಾರ್ಯವಾಗಿದೆ.
* ತುಟ್ಟಿ ಭತ್ಯೆಯ ನ್ಯೂಟ್ರಲೈಸೇಶನ್ ಪ್ರಮಾಣವನ್ನು ಸಮಾನವಾಗಿ ಎಲ್ಲಾ ಉದ್ದಿಮೆಗಳಿಗೂ ಗ್ರಾಹಕ ಸೂಚ್ಯಂಕದ ಪ್ರತಿ ಅಂಶಕ್ಕೆ ಪ್ರತಿ ದಿನಕ್ಕೆ 6 ಪೈಸೆಗೆ ಪರಿಷ್ಕರಿಸುವುದು.
* ಎಲ್ಲಾ ಶೆಡ್ಯೂಲ್ಡ್ ಉದ್ಯೋಗಗಳ ಎಲ್ಲಾ ಕನಿಷ್ಠ ವೇತನಗಳ ಪರಿಷ್ಕರಣೆಯನ್ನು ಒಟ್ಟಿಗೆ ಕೈಗೆತ್ತಿಕೊಳ್ಳಬೇಕೆಂದು ನಾವು ಆಗ್ರಹಿಸುತ್ತಿದ್ದೇವೆ. ಇದರಿಂದಾಗಿ ಕೈಗಾರಿಕೆಗಳ ನಡುವೆ ಮತ್ತು ಕೈಗಾರಿಕೆಗಳ ಒಳಗೆ (ಎಲ್ಲೆಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಶೆಡ್ಯೂಲ್ಡ್ ಉದ್ಯೋಗಗಳಿಂದ ಕಾರ್ಮಿಕರನ್ನು ತೆಗೆದುಕೊಳ್ಳಲಾಗುತ್ತದೆಯೋ ಅಲ್ಲಿ) ಸಮಾನ ವೇತನವನ್ನು ಖಾತ್ರಿಗೊಳಿಸಬಹುದು.
* ಅಕುಶಲ ಕಾರ್ಮಿಕರಿಗೆ ವಲಯ ಒಂದರಲ್ಲಿ ಮಾಸಿಕ ಕನಿಷ್ಟ ವೇತನವನ್ನು (ಮೂರು ಯೂನಿಟ್ ಕುಟುಂಬವಾದರೆ) ರೂ.31,566 ಮತ್ತು (3.6 ಯೂನಿಟ್ ಕುಟುಂಬವಾದರೆ) ರೂ.35,930 ನಿಗದಿಪಡಿಸಬೇಕು.
* 2021ರ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕಕ್ಕೆ ಹೆಚ್ಚಾಗುವ ಪ್ರತಿ ಅಂಶಕ್ಕೆ ಪ್ರತಿ ದಿನಕ್ಕೆ 6 ಪೈಸೆ ತುಟ್ಟಿ ಭತ್ಯೆ ನೀಡಬೇಕು.

ಆದರೆ, ಅಂದಿನ ಬಿಜೆಪಿ ಸರ್ಕಾರವು ಈ ಎಲ್ಲಾ ಸಲಹೆಗಳನ್ನು ತಿರಸ್ಕರಿಸಿದ್ದಲ್ಲದೆ, ಕನಿಷ್ಟ ವೇತನದ ಪುನರ್‌ವಿಮರ್ಶೆಗೆ ಈ ಶಾಸನಬದ್ಧ ನಿಯಮಗಳನ್ನು ಅನುಸರಿಸಲು ಅಗತ್ಯವಿಲ್ಲ ಎಂಬ ನಿಲುವನ್ನು ತೆಗೆದುಕೊಂಡು, 34 ಉದ್ಧಿಮೆಗಳಿಗೆ ಅತಿ ಕಡಿಮೆ ಹೆಚ್ಚಳವನ್ನು ಒಳಗೊಂಡ ಕನಿಷ್ಟ ವೇತನದ ಅಂತಿಮ ಪ್ರಕಟಣೆ ಮಾಡಿತು. ಅದರಲ್ಲಿಯೂ ಟೈಲರಿಂಗ್ ಉದ್ಧಿಮೆಗೆ ಕರಡು ಪ್ರಕಟಣೆಗಿಂತಲೂ ಕಡಿಮೆ ಮಟ್ಟದ ಕನಿಷ್ಟ ವೇತನವನ್ನು ಪ್ರಕಟಿಸಿತು. ಗಾರ್ಮೆಂಟ್ಸ್ ಕಂಪನಿಗಳ ಮಾಲೀಕರ ಒತ್ತಡಕ್ಕೆ ಸರ್ಕಾರ ಮಣಿದಿತ್ತು. ಈ ನ್ಯಾಯಬಾಹಿರ ಕ್ರಮಗಳನ್ನು ಕಾರ್ಮಿಕ ಸಂಘಟನೆಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿದವು. ಕರ್ನಾಟಕ ಉಚ್ಚ ನ್ಯಾಯಾಲಯವು ಕನಿಷ್ಟ ವೇತನದ ಪುನರ್‌ವಿಮರ್ಶೆಯನ್ನು ಕೂಡ ವೈಜ್ಞಾನಿಕವಾಗಿ ಶಾಸನಬದ್ಧ ಸೂತ್ರಗಳ ಆಧಾರದಲ್ಲಿಯೇ ಮಾಡಬೇಕೆಂದು ತೀರ್ಪು ನೀಡಿತು. ಈ ತೀರ್ಪನ್ನು ಬಂಡವಾಳಿಗರು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದರು. ಈ ಪ್ರಕರಣದಲ್ಲಿ ಹೊರಬಂದ ತೀರ್ಪಿನ ಕಾರಣದಿಂದಾಗಿ 2025ರ ಏಪ್ರಿಲ್‌ನಲ್ಲಿ ಈಗಿನ ಕಾಂಗ್ರೆಸ್ ಸರ್ಕಾರವು ಕರಡು ಪ್ರಕಟಣೆಯನ್ನು ಹೊರಡಿಸಿದೆ.



2025 ಏಪ್ರಿಲ್ ಅಧಿಸೂಚನೆ

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವಂತೆ, ನ್ಯಾಯಾಲಯ ಹಾಗು ಕಾರ್ಮಿಕ ಸಂಘಗಳ ಹೋರಾಟದ ಕಾರಣದಿಂದಾಗಿ ಹೊಸದಾದ ಕನಿಷ್ಟ ವೇತನದ ಕರಡು ಪ್ರಕಟಣೆಯಾಗಿದೆ. ಈ ಪ್ರಕಟಣೆಗೆ ಭಾದಿತರಾಗುವ ಉದ್ಯೋಗದಾತರು/ ಉದ್ಯೋಗಿಗಳು/ಸಂಘ ಸಂಸ್ಥೆಗಳು ಆಕ್ಷೇಪಣೆಗಳನ್ನು/ಸಲಹೆಗಳನ್ನು ಸಲ್ಲಿಸಲು 2025ರ ಜೂನ್ 10ರ ವರೆಗೆ ಸಮಯಾವಕಾಶ ಇರುತ್ತದೆ. ಅದರ ನಂತರ ಸಲಹೆ ಸೂಚನೆಗಳನ್ನು ಪರಿಗಣಿಸಿ, ರಾಜ್ಯ ಸರ್ಕಾರವು ಕನಿಷ್ಟ ವೇತನದ ಅಂತಿಮ ಅಧಿಸೂಚನೆಯನ್ನು ಪ್ರಕಟಿಸುತ್ತದೆ.

ಕಾಂಗ್ರೆಸ್ ಸರ್ಕಾರವು ವೈಜ್ಞಾನಿಕವಾಗಿ ಹಾಗು ಅತಿ ಹೆಚ್ಚು ವೇತನ ಹೆಚ್ಚಳವನ್ನು ಮಾಡುವ ಮೂಲಕ ಕಾರ್ಮಿಕರಿಗೆ ಅನುಕೂಲ ಮಾಡಿದೆ ಎಂದು ಪ್ರಚಾರ ಮಾಡುತ್ತಿದೆ. ಈ ಪ್ರಮಾಣದಲ್ಲಿ ವೇತನ ಹೆಚ್ಚಳವಾದರೆ ಕಾರ್ಖಾನೆಗಳು ರಾಜ್ಯವನ್ನು ತೊರೆದು ಬೇರೆ ರಾಜ್ಯಗಳಿಗೆ ಸ್ಥಳಾಂತರಿಸಿಕೊಳ್ಳುತ್ತವೆ ಎಂದು ಮಾಲೀಕರು ಬೆದರಿಕೆ ಹಾಕುತ್ತಿದ್ದಾರೆ.

ರಾಜ್ಯದ ಕಾಂಗ್ರೆಸ್ ಸರ್ಕಾರವು ನವ ಉದಾರೀಕರಣದ ನೀತಿಗಳನ್ನೇ ಅನುಸರಿಸುತ್ತಿದೆ. ಮಾಲೀಕರನ್ನು ತೃಪ್ತಿಗೊಳಿಸುವ ಸಲುವಾಗಿ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ ಪ್ರಕ್ರಿಯೆಗಳನ್ನು ಪ್ರಾರಂಭಿಸಿದೆ. ಅಪಾಯಕಾರಿ ಉತ್ಪಾದನಾ ಕಾರ್ಯದಲ್ಲಿ ಮಹಿಳಾ ಕಾರ್ಮಿಕರನ್ನು ನೇಮಕಗೊಳಿಸಲು ಅವಕಾಶ ನೀಡುವುದು, ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಲು ಯಾವುದೇ ನಿರ್ಬಂಧಗಳಿಲ್ಲದೆ ಅವಕಾಶ ಕೊಡುವುದು, ದಿನದ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸುವುದು ಹಾಗು ಕಾರ್ಖಾನೆಗಳ ಕಾಯಿದೆಯ ಅನ್ವಯದಿಂದ ವಿನಾಯಿತಿ ನೀಡಲು ಕಾರ್ಮಿಕರ ಸಂಖ್ಯೆಯನ್ನು 10 ರಿಂದ 20ಕ್ಕೆ (ವಿದ್ಯುತ್ ಸಹಾಯದೊಂದಿಗೆ) ಹಾಗು 20ರಿಂದ 40ಕ್ಕೆ (ವಿದ್ಯುತ್ ಸಹಾಯವಿಲ್ಲದೆ) ಹೆಚ್ಚಿಸುವ ಕ್ರಮಗಳಿಗೆ ಮುಂದಾಗಿದೆ. ಈ ಎಲ್ಲಾ ಅಂಶಗಳು ದೇಶದ ಕಾರ್ಮಿಕ ವರ್ಗ ವಿರೋಧಿಸುತ್ತಿರುವ ನಾಲ್ಕು ಹೊಸ ಸಂಹಿತೆಗಳಲ್ಲಿನ ಕಾರ್ಮಿಕ ವಿರೋಧಿ ನಿಯಮಗಳಾಗಿರುತ್ತವೆ. ಇದಲ್ಲದೆ, ರಾಜ್ಯ ಸರ್ಕಾರ ಬಂಡವಾಳಿಗರಿಗೆ ಹಲವಾರು ತೆರಿಗೆ ರಿಯಾಯಿತಿಗಳು ಹಾಗು ಹಣಕಾಸು ಪ್ರೋತ್ಸಾಹವನ್ನು ನೀಡುತ್ತಿದೆ. ರಾಜ್ಯ ಸರ್ಕಾರವು ಸ್ವದೇಶಿ ಹಾಗು ವಿದೇಶಿ ಬಂಡವಾಳದ ಆಕರ್ಷಣೆ ಹಾಗು ಲಾಭಕ್ಕೆ ಅನುಗುಣವಾದ ನೀತಿಗಳನ್ನೇ ತೀವ್ರವಾಗಿ ಅನುಸರಿಸುತ್ತಿದೆ. ಬಿಜೆಪಿ ಸರ್ಕಾರ ಜಾರಿಗೆ ತಂದ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕಾಂಗ್ರೆಸ್ ಸರ್ಕಾರ ಅನುಷ್ಠಾನಕ್ಕೆ ತಂದಿದೆ. ಹಾಗು ಕಾರ್ಮಿಕ ವರ್ಗದ ಮೇಲಿನ ದಾಳಿಯನ್ನು ತೀವ್ರಗೊಳಿಸುತ್ತಿದೆ. ಈ ಕನಿಷ್ಟವೇತನದ ಅಧಿಸೂಚನೆಯಲ್ಲಿಯೂ ಬಂಡವಾಳಿಗರಿಗೆ ಅನುಕೂಲವಾಗುವ ನಿಯಮಗಳನ್ನು ಸೇರಿಸಲಾಗಿದೆ. ಈ ಅಧಿಸೂಚನೆಯಲ್ಲಿ ಎಲ್ಲಾ ಶೆಡ್ಯೂಲ್‌ನಲ್ಲಿನ ಎಲ್ಲಾ 81 ಉದ್ದಿಮೆಗಳಿಗೆ ಕನಿಷ್ಟ ವೇತನ ನಿಗದಿಪಡಿಸುವುದಾಗಿ ಹೇಳಲಾಗಿದೆ.

ಸ್ವಾಗತಾರ್ಹ ಅಂಶಗಳು

62 ಉದ್ಧಿಮೆಗಳಿಗೆ ಏಕರೂಪದ ಹಾಗು ಒಂದೇ ಪ್ರಕಟಣೆಯು ಸ್ವಾಗತಾರ್ಹ ಕ್ರಮವಾಗಿರುತ್ತದೆ. ದೈಹಿಕ ಕೆಲಸಗಳ ಒತ್ತಡವಿರುವ ನಾಲ್ಕು ಉದ್ಯೋಗಗಳಿಗೆ ವಿಶೇಷವಾದ ಕನಿಷ್ಟ ವೇತನ ಪ್ರಕಟಣೆಯು ಸ್ವಾಗತಾರ್ಹವಾಗಿದೆ. ಇದರಲ್ಲಿ ಶೌಚಾಲಯಗಳು, ಸ್ನಾನಗೃಹಗಳನ್ನು ಶುಚಿಮಾಡುವ ಕೆಲಸಗಳಲ್ಲಿ ಉದ್ಯೋಗ, ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಉದ್ಯೋಗ, ಫೌಂಡ್ರಿಗಳಲ್ಲಿ ಉದ್ಯೋಗ ಹಾಗು ರಾಸಾಯನಿಕ ಗೊಬ್ಬರ, ಕೀಟನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳು ಒಳಗೊಂಡಿರುತ್ತದೆ. ಇದಲ್ಲದೇ 18 ಉದ್ದಿಮೆಗಳನ್ನು ಹೊಸದಾಗಿ ಅನುಸೂಚಿಗೆ ಸೇರ್ಪಡೆಗೊಳಿಸುವ ಪ್ರಸ್ತಾಪವು ಸ್ವಾಗತಾರ್ಹವಾಗಿದೆ. ಈ ವಿಚಾರಗಳನ್ನು ಯಾವುದೇ ಸಡಿಲಿಕೆ ಇಲ್ಲದೆ ಜಾರಿಮಾಡಲು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಅಪಾಯಕಾರಿಯಾದ ಅಂಶಗಳು

ಈ ಅಧಿಸೂಚನೆಯಲ್ಲಿ ತುಟ್ಟಿಭತ್ಯೆಯ ಕುರಿತು ಯಾವ ಪ್ರಸ್ತಾಪವೂ ಇರಲಿಲ್ಲ. ಸಿಐಟಿಯು ರಾಜ್ಯ ಸಮಿತಿ ಕೂಡಲೇ ಇದರ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸಿತು. ನಂತರ ರಾಜ್ಯ ಸರ್ಕಾರವು 2025ರ ಏಪ್ರಿಲ್ 19ರಂದು ಈ ಅಧಿಸೂಚನೆಗೆ, ಗ್ರಾಹಕ ಬೆಲೆ ಸೂಚ್ಯಂಕದ ಪ್ರತಿಯೊಂದು ಅಂಶದ ಹೆಚ್ಚಳಕ್ಕೆ ಪ್ರತಿ ದಿನಕ್ಕೆ 4 ಪೈಸೆ ತುಟ್ಟಿಭತ್ಯೆಯನ್ನು ಸೇರ್ಪಡೆ ಮಾಡಿ ಪ್ರಕಟಿಸಿದೆ. ಈ ತುಟ್ಟಿಭತ್ಯೆಯು 2024ರ ಸರಾಸರಿ ಗ್ರಾಹಕ ಬೆಲೆ ಸೂಚ್ಯಂಕಕ್ಕಿಂತಲು ಹೆಚ್ಚಾಗುವ ಅಂದರೆ, 9469 ಅಂಶಗಳಿಗಿಂತಲೂ ಹೆಚ್ಚಾಗುವ ಅಂಶಗಳಿಗೆ ಅನ್ವಯವಾಗುತ್ತದೆ.

ಪುಟ 11 ಕ್ಕೆ

ವಲಯ 1 ರಲ್ಲಿ ಕೌಶಲ್ಯ ರಹಿತ ಕೆಲಸಗಾರರಿಗೆ ಕನಿಷ್ಠ ವೇತನ
(ಡಾ. ಅಕ್ರಾಯ್ಡ್ ಅವರ ಆಹಾರ ಪದ್ಧತಿ, 15 ನೇ ಐಎಲ್‌ಸಿ ಶಿಫಾರಸು ಮತ್ತು ರೆಪ್ಟಕೋಸ್ ಬ್ರೆಟ್ ಎಸ್‌ಸಿ ಆದೇಶ)


	ಆಹಾರ ಮತ್ತು ಆಹಾರೇತರ ವಸ್ತುಗಳು	ಪ್ರತಿ ದಿನ	ಘಟಕ	ಪ್ರತಿ ತಿಂಗಳು 3 ಪಿಸಿಯು		ದರ	ವೆಚ್ಚಗಳು 2ಪಿಸಿಯು	ವೆಚ್ಚಗಳು 3.6 ಪಿಸಿಯು
1	ಅಕ್ಕಿ ಮತ್ತು ರಾಗಿ	475	gm	42.75	Kg	44	1881.00	2257.20
2	ದಾಲ್ (ತೊಗರಿ)	80	gm	7.2	Kg	129	928.80	1114.56
3	ಹಸಿ ತರಕಾರಿಗಳು	100	gm	9	Kg	46.13	415.17	498.20
4	ಹಸಿರು ತರಕಾರಿಗಳು	125	gm	11.25	Kg	55.7	626.63	751.95
5	ಇತರ ತರಕಾರಿಗಳು	75	gm	6.75	Kg	73.6	496.80	596.16
6	ಹಣ್ಣುಗಳು	120	gm	10.8	Kg	98.14	1059.91	1271.89
7	ಹಾಲು	200	gm	18	Kg	44	792.00	950.40
8	ಸಕ್ಕರೆ/ಬೆಲ್ಲ	56	gm	5.04	Kg	44	221.76	266.11
9	ಖಾದ್ಯಎಣ್ಣೆ	40	gm	3.6	Kg	205	738.00	885.60
10	ಮೀನು			2.5	Kg	450	1125.00	1350.00
11	ಮಾಂಸ			5	Kg	445	2225.00	2670.00
12	ಮೊಟ್ಟೆ			90	Nos	6	540.00	648.00
13	ಬಟ್ಟೆ ಹಾಗು ಸ್ನಾನದ ಸಾಬೂನುಗಳು						291.31	349.57
14	ಬಟ್ಟೆ (ವರ್ಷಕ್ಕೆ 66 ಮೀಟರ್)						660.00	792.00
15	ಒಟ್ಟು (1–14)						12001.38	14401.65
16	ಮನೆ ಬಾಡಿಗೆಯ ವೆಚ್ಚ (2016 ರ ನಿಮಿಷದ ವೇತನದ ಲೆಕ್ಕಾಚಾರದದರದಲ್ಲಿ ಲೆಕ್ಕಹಾಕಲಾಗಿದೆ) 5% ಬಾಡಿಗೆ ಹೆಚ್ಚಳದೊಂದಿಗೆ						5360.28	5360.28
17	ಒಟ್ಟು ಕನಿಷ್ಠ ವೇತನದ 20% ರಷ್ಟು ಇತರೆ						6313.33	7186.16
18	ಮಕ್ಕಳ ಶಿಕ್ಷಣ ಇತ್ಯಾದಿ ಕನಿಷ್ಠ ವೇತನದ 25% ರಷ್ಟು						7891.66	8982.70
19	ಕೌಶಲ್ಯರಹಿತ ಕೆಲಸಗಾರರಿಗೆಕನಿಷ್ಠ ವೇತನ ವಲಯ 1, ಒಟ್ಟು (15, 16, 17, 18)						31566.65	35930.79

ಹುಳ್ಳಗಿನ ಮನಸ್ಸಿನ ಕಳ್ಳರು– ಕೋಮು ದಳ್ಳುರಿಯ ರೂವಾರಿಗಳು

ಪಹಲ್ಗಾಂ ನಲ್ಲಿ ಭಯೋತ್ಪಾದಕರ ದಾಳಿ ನಡೆದು ಒಂದು ವಾರವಾಗಿದೆ. ಈ ದಾಳಿಯನ್ನು ಎಲ್ಲರೂ ಖಂಡಿಸಿದ್ದಾರೆ. ಭಾರತದ ವಿರೋಧ ಪಕ್ಷಗಳು ಸರ್ಕಾರದ ಎಲ್ಲ ಕ್ರಮಗಳಿಗೆ ಬೆಂಬಲ ಘೋಷಿಸಿದ್ದಾರೆ. ಅದರಂತೆ ನಡೆದುಕೊಳ್ಳುತ್ತಿದ್ದಾರೆ. ಸರ್ಕಾರ ಸೂಕ್ತ ಕ್ರಮಗಳ ಬಗ್ಗೆ ಚಿಂತನೆ ನಡೆಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ರಾಜತಾಂತ್ರಿಕ ಮಟ್ಟದಲ್ಲಿ ಜಗತ್ತಿನ ಹಲವು ದೇಶಗಳಿಗೆ ಪಾಕಿಸ್ತಾನದ ನಡೆಯ ಬಗೆಗೆ ತಿಳಿಸುವ ಕೆಲಸವೂ ನಡೆಯುತ್ತಿದೆ. ಇವೆಲ್ಲವುಗಳ ನಡುವೆ ಮೋದಿ ಸರ್ಕಾರ ತನಗೆ ಪ್ರಶ್ನೆ ಕೇಳಿದವರನ್ನು ದಮನಿಸುವ ಅತ್ಯಂತ ಹೇಯ ಮತ್ತು ಹೇಡಿತನದ ಕೆಲಸ ಮಾಡುತ್ತಿದೆ. ಇಂಥ ಕೆಲಸಗಳ ಸ್ಯಾಂಪಲ್ಲು ಇದೆ ನೋಡಿ.

1. 4 PM (ಅಂದರೆ ಸಾಯಂಕಾಲ ನಾಲ್ಕು ಘಂಟೆ– ಇದು ಯೂ ಟ್ಯೂಬು ವಾಹಿನಿಯೊಂದರ ಹೆಸರು) ಅನ್ನು ನಿರ್ಭಂದಿಸಲಾಗಿದೆ. ಅಂದರೆ ಅದು ಕಾರ್ಯ ನಿರ್ವಹಿಸುವಂತಿಲ್ಲ. ಹಿಂದಿನಿಂದಲೂ ಮೋದಿ ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳುತ್ತಾ ಬಂದಿರುವ ಈ ವಾಹಿನಿ ಈಗಲೂ ಸಹ ಪಹಲ್ಗಾಮೀನಂತಹ ಪ್ರವಾಸಿಗರು ಬರುವ ಕಡೆ ಸುರಕ್ಷತೆ ಯಾಕಿರಲಿಲ್ಲ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದೆ. ಅದಕ್ಕೆ ಅದರ ಮೇಲೆ ನಿರ್ಬಂಧ. ಹಿಂದೆಯೂ ಈ ವಾಹಿನಿಯ ಮೇಲೆ ಇಂಥ ದಮನಕಾರಿ ಕ್ರಮಗಳು ಜರುಗಿದ್ದವು. ಈ ವಾಹಿನಿ ಹೆದರದೆ ಹೋರಾಟ ನಡೆಸಿತ್ತು. ಈಗಲೂ ಅದು ಹೋರಾಟದ ಹಾದಿ ಹಿಡಿದಿದೆ.
2. ಆಸ್ಸಾಮಿನಲ್ಲಿ ಅಲ್ಲಿನ ಶಾಸಕ ಶ್ರೀ ಅಮಿನೂಲ್ ಇಸ್ಲಾಂ ಅವರನ್ನು ಬಂಧಿಸಲಾಗಿದೆ. ಅವರೂ ಅಷ್ಟೇ. ಈ ಹಿಂದೆ ಪುಲ್ವಾಮದಲ್ಲಿ ನಮ್ಮ ಸೈನಿಕರು ಇಂತಹ ದಾಳಿಗೆ ಬಲಿಯಾದರು. ಅದರ ತನಿಖೆ ಮತ್ತು ವರದಿಗಳು ಎಲ್ಲಿ ಎಂದು ಪ್ರಶಿಸಿದ್ದರು. "ಪ್ರಶ್ನಿಸಿದರೆ ಜೈಲು" ಇದು ಮೋದಿ ಸರ್ಕಾರದ ನೀತಿ ಎನ್ನೋಣವೆ?
3. ನೇಹ ಸಿಂಗ್ ರಾತೋರ್ ಎಂಬ ಮಹಿಳೆ ಕವಯಿತ್ರಿ ಮತ್ತು ಗಾಯಕಿ. ಈಕೆಯೂ ಸುರಕ್ಷತೆಯ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅಷ್ಟೇ ಅಲ್ಲ. ಅದನ್ನು ತಮ್ಮ ಹಾಡಿನಲ್ಲಿ ಹಾದಿ ವೀಡಿಯೋ ಮಾಡಿ ಯು ಟ್ಯೂಬ್ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಸರ್ಕಾರ ಅವರ ವಿರುದ್ಧ ಎಫ್ ಐ ಆರ್ ಹಾಕಿದೆ. ಪಾಕಿಸ್ತಾನದ ಜೊತೆ ಶಾಮಿಲಾಗುವುದು ಮತ್ತು ಸರ್ಕಾರಕ್ಕೆ ಪ್ರಶ್ನೆ ಕೇಳುವುದು ಒಂದೇ ಅಲ್ಲ. ಚುನಾಯಿತ ಸರ್ಕಾರಕ್ಕೆ ಇದರ ವ್ಯತ್ಯಾಸದ ಅರಿವಿರಬೇಕು. ನೇಹಾ ಅವರ ಪ್ರಶ್ನೆಗಳು ಮತ್ತು ಹಾಡುಗಳು ಪಾಕಿಸ್ತಾನದ ಜನರನ್ನು ತಟ್ಟಿ ಅವರು ಅದನ್ನು ಪ್ರಚಾರ ಮಾಡಿದರೆ ಅದು ನೇಹಾ ಅವರ ತಪ್ಪೇ? ಬಿಜೆಪಿ ಗರು ನೇಹ ಪಾಕಿಸ್ತಾನಿಗಳಿಗೆ ಭಾರತದ ವಿರುದ್ಧ ಪ್ರಚಾರ ಮಾಡಲು ವಸ್ತು ನೀಡಿದ್ದಾರೆ ಎಂದು ಹಲುಬುತ್ತಿದ್ದಾರೆ. ಬದಲಿಗೆ ನೇಹ ಅವರ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕೊಡಬಹುದಿತ್ತಲ್ಲವೇ?
4. ಇದೆ ರೀತಿ ಡಾಕ್ಟರ್ ಮೆದುಸ ಅವರು ಪಹಲ್ಗಾಂ ಸುರಕ್ಷತೆಯ ಬಗ್ಗೆ ಪ್ರಶ್ನಿಸಿದ್ದಾರೆ. ಸರ್ಕಾರ ಅವರ ವಿರುದ್ದವೂ ಎಫ್.ಐ.ಆರ್. ಹಾಕಿದೆ.

ಇಲ್ಲಿ ನಡೆಯುತ್ತಿರುವ ಪ್ರಕ್ರಿಯೆಗಳು ಸ್ಪಷ್ಟ ಇವೆ. ಬಿಜೆಪಿ ಮತ್ತು ಸಂಘಿಗಳು ನಡೆವ ಪ್ರತಿಯೊಂದು ಘಟನೆಯನ್ನು ಕೋಮು ದ್ವೇಷದ ಸನ್ನಿವೇಶಗಳಿಗೆ ತಿರುಗಿಸಿ ರಾಜಕೀಯ ಲಾಭ ಪಡೆದುಕೊಳ್ಳುವ ಹುನ್ನಾರ ನಡೆಸುತ್ತಿವೆ. ಇಂತಹ ಹುನ್ನಾರಗಳನ್ನು ಮಟ್ಟ ಹಾಕುವ ಬದಲು ಸರ್ಕಾರ ಇವುಗಳನ್ನು ಪ್ರೋತ್ಸಾಹಿಸಿ ಪೋಷಿಸುತ್ತಿದೆ. ಜವಾಬ್ದಾರಿಯುತ ಸರ್ಕಾರದ ಲಕ್ಷಣವೆ ಇದು?



ಡೆಹ್ರಾಡೂನ್, ಉತ್ತರ ಪ್ರದೇಶ, ಹರಿಯಾಣ, ಮಹಾರಾಷ್ಟ್ರ, ಮುಂಬೈ ನಗರ ಇತ್ಯಾದಿ ಪ್ರದೇಶಗಳಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳ ಮೇಲೆ ದಾಳಿ ನಡೆದಿದೆ. ಇಂತಹ ದಾಳಿಗಳನ್ನು ತಡೆಗಟ್ಟುವ ಬದಲು ಬಿಜೆಪಿ ಮತ್ತು ಅದರ ಸರ್ಕಾರಗಳು "ಉರಿವ ಮನೆಯ ಗಳ ಹಿರಿಯುವ" ಮನೆ ಮುರುಕ ಕೆಲಸ ಮಾಡುತ್ತಿವೆ. ಕೋಮು ದಳ್ಳುರಿಗೆ ತುಪ್ಪ ಎರೆವ ದುಷ್ಟ ಕಾರ್ಯ ಮಾಡುತ್ತಿವೆ. ನಿತಿಶ್ ರಾಣೆ ಎಂಬ ಮಹಾರಾಷ್ಟ್ರದ ಮಂತ್ರಿ ಮಹೋದಯ ಸ್ಪಷ್ಟವಾಗಿ ಇಂತಹ ಕೆಲಸ ಮಾಡುತ್ತಿದ್ದಾರೆ.

ಈ ಸನ್ನಿವೇಶದಲ್ಲಿ ಅಲ್ಪಸಂಖ್ಯಾತರಲ್ಲಿ ಭಯ ಮನೆ ಮಾಡಿದೆ. ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವ ಈ ವಾತಾವರಣ ತಿಳಿಗೊಳ್ಳುವ ಅವಶ್ಯಕತೆ ಇದೆ. ಮೋದಿ ಸರ್ಕಾರ ಪರಿಸ್ಥಿತಿಯನ್ನು ತಿಳಿಗೊಳಿಸುವ ಕೆಲಸಕ್ಕೆ ಇಳಿಯಬೇಕು. ತಪ್ಪಿದರೆ ಜನ ಅರ್ಥಮಾಡಿಕೊಳ್ಳುತ್ತಾರೆ. ಮುಂದೆ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಬುದ್ದಿ ಕಲಿಸುತ್ತಾರೆ. ಇಂತಹ ಕಲಿಕೆಯೇ ಬೇಕೆಂದರೆ ದೇಶ/ ಜನ ಬೆಲೆ ತೆರಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದ ವ್ಯಂಗ್ಯವೆ?

ದೇಶದ ಅಭಿವೃದ್ಧಿ ಮಾಡಿ ಅದರ ಆಧಾರದಲ್ಲಿ ವೋಟು ಕೇಳುವ ಬದಲು ಕೋಮು ದಳ್ಳುರಿ ಸೃಷ್ಟಿಸಿ ಅದರ ಆಧಾರದಲ್ಲಿ ವೋಟು ಪಡೆಯುವ ಚಾಳಿ ಬೆಳೆಸಿಕೊಂಡಿರುವ ಬಿಜೆಪಿಗರಿಗೆ ಎಂತಹ ನೈತಿಕತೆ ಇದೆ?

–ಜಿ.ಎಸ್. ಮಣಿ

ರಾಷ್ಟ್ರೀಯ ಹಿತದೃಷ್ಟಿಯಿಂದ ಅಂದಾಭಿಮಾನಿಗಳನ್ನು, ದ್ವೇಷಕೋರರನ್ನು ನಿಯಂತ್ರಿಸಬೇಕು- ಸರಕಾರಕ್ಕೆ ಕೇಂದ್ರೀಯ ಕಾರ್ಮಿಕ ಸಂಘಗಳ ಆಗ್ರಹ

ಕಾರ್ಮಿಕ ಸಂಹಿತೆಗಳು ಮತ್ತು ಇತರ ಹಕ್ಕೊತ್ತಾಯಗಳ ಮೇಲೆ ಮೇ 20 ರಂದು ದೇಶಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವ ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯ ಒಕ್ಕೂಟಗಳ ವೇದಿಕೆ ಶುಕ್ರವಾರ ಸಭೆ ಸೇರಿ ಈ ಜಂಟಿ ಕಾರ್ಯಾಚರಣೆಗೆ ಸಿದ್ಧತೆಗಳನ್ನು ಮುಂದುವರೆಸಲು ನಿರ್ಧರಿಸಿದೆ. ಆದರೂ, ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, "ಪರಿಸ್ಥಿತಿ ಮತ್ತಷ್ಟು ವಿಕಸನಗೊಂಡಂತೆ ಅದನ್ನು ಪರಿಶೀಲಿಸಲು" ಮೇ 15 ರಂದು ಮತ್ತೆ ಸಭೆ ಸೇರಲು ಕೇಂದ್ರೀಯ ಕಾರ್ಮಿಕ ಸಂಘಗಳು ನಿರ್ಧರಿಸಿವೆ.

"ಮುಷ್ಕರಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ. ಕೆಲವು ಸ್ಥಳಗಳಲ್ಲಿ ಭಾರತ ಸರ್ಕಾರ ಮತ್ತು ಆಡಳಿತ ಮಂಡಳಿಗಳು ದೇಶದಲ್ಲಿ ಇನ್ನೂ ಅಧಿಸೂಚಿಸದಿರುವ/ಅನುಷ್ಠಾನಗೊಳಿಸದಿರುವ ಕಾರ್ಮಿಕ ಸಂಹಿತೆಗಳ ನಿಬಂಧನೆಗಳನ್ನು ಅನ್ವಯಿಸುವ ಮೂಲಕ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಉಲ್ಲಂಘಿಸುತ್ತಿರುವುದರಿಂದ ಕಾರ್ಮಿಕರಲ್ಲಿ ಆಕ್ರೋಶ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಸಿದ್ಧತೆಗಳು ಹೆಚ್ಚು ದೃಢನಿರ್ಧಾರದಿಂದ ಸಾಗುತ್ತಿವೆ. ಇದು ಪೂರ್ಣ ಹುರುಪಿನಿಂದ ಮುಂದುವರಿಯಬೇಕು" ಎಂದು ಮೇ9 ರಂದು ಕಾರ್ಮಿಕ ಸಂಘಗಳು ನೀಡಿದ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತದಲ್ಲಿ ದ್ವೇಷವನ್ನು ಹರಡುವ ಮತ್ತು ಕೋಮು ಘರ್ಷಣೆಗಳನ್ನು ಪ್ರಚೋದಿಸುವ ಗುರಿಯಿಂದ ಪಹಲ್‌ಗಾಂನಲ್ಲಿ ಮುಗ್ಧ ನಾಗರಿಕರ ಮೇಲೆ ಭಯೋತ್ಪಾದಕ ದಾಳಿಯನ್ನು ನಡೆಸಲಾಗಿದೆ ಎಂದು ಖಂಡಿಸಿದ ಕೇಂದ್ರೀಯ ಕಾರ್ಮಿಕ ಸಂಘಗಳು, ದೇಶದೊಳಗೆ ಕೋಮುವಾದಿ ಸಂಘಟನೆಗಳು ನಡೆಸುತ್ತಿರುವ ಕೋಮುವಾದೀ ದಾಳಿಯ ನಡುವೆ, "ಜನಸಾಮಾನ್ಯರಲ್ಲಿ ಐಕ್ಯತೆ ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಮುಂಚೂಣಿಯಲ್ಲಿರಬೇಕು" ಎಂದು ಎಲ್ಲಾ ದುಡಿಯುವ ಜನರಿಗೆ ಕರೆ ನೀಡಿವೆ.

"ಪಹಲ್ಗಾಮ್‌ನ ಭೀಕರ ಘಟನೆಯ ನಂತರ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಕಾಶ್ಮೀರಿ ನಾಗರಿಕರು ಮತ್ತು ವಿದ್ಯಾರ್ಥಿಗಳ ಮೇಲಿನ ದಾಳಿಯನ್ನು ನಾವು ಖಂಡಿಸುತ್ತೇವೆ. ಪ್ರವಾಸಿಗರ ಈ ಹತ್ಯೆಗೆ ತಕ್ಷಣವೇ ತಮ್ಮ ತಿರಸ್ಕಾರವನ್ನು ವ್ಯಕ್ತಪಡಿಸಿರುವ ಮತ್ತು ರಾಷ್ಟ್ರೀಯ ಐಕ್ಯತೆಯಯ ಪರವಾಗಿ ಬಂಡೆಗಲ್ಲಿನಂತೆ ಗಟ್ಟಿಯಾಗಿ ನಿಂತ ಜಮ್ಮು ಮತ್ತು ಕಾಶ್ಮೀರದ ಜನರ ಪ್ರತಿಕ್ರಿಯೆಯನ್ನು ನಾವು ಗಮನಿಸುತ್ತೇವೆ ಮತ್ತು ಬಹುವಾಗಿ ಪ್ರಶಂಸಿಸುತ್ತೇವೆ" ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

"ಭಾರತೀಯ ನೌಕಾಪಡೆಯ ಲೆಫ್ಟಿನೆಂಟ್ ನರ್ವಾಲ್ ಅವರ ಪತ್ನಿ ಹಿಮಾಂಶಿ ನರ್ವಾಲ್ ಅವರ ಟ್ರೋಲರ್‌ಗಳು/ನಿಂದಕರನ್ನು ನಾವು ಖಂಡಿಸುತ್ತೇವೆ, ಅವರು ತಮ್ಮ ಸಂದರ್ಶನದಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳು ಮತ್ತು ಸಾಮಾನ್ಯವಾಗಿ ಮುಸ್ಲಿಮರ ಮೇಲಿನ ದಾಳಿಯನ್ನು ಅನುಮೋದಿಸಲಿಲ್ಲ ಮತ್ತು ಭಾರತೀಯ ಜನಸಾಮಾನ್ಯರ ಐಕ್ಯತೆಯನ್ನು ಕಾಪಾಡಿಕೊಳ್ಳಲು ಮನವಿ ಮಾಡಿದರು" ಎಂದು ತಮ್ಮ ಜಂಟಿ ಹೇಳಿಕೆಯಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಹೇಳಿದ್ದಾರೆ.

ಭಾರತ ಸರ್ಕಾರದ ವಿದೇಶಾಂಗ ಕಾರ್ಯದರ್ಶಿ ಶ್ರೀ ವಿಕ್ರಮ್ ಮಿಶ್ರಿ, ಕರ್ನಲ್ ಸೋಫಿಯಾ ಖುರೇಷಿ ಮತ್ತು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರು ನಡೆಸಿದ ಪತ್ರಿಕಾಗೋಷ್ಠಿಯನ್ನು ನಾವು ಗಮನಿಸುತ್ತೇವೆ, ಅವರು ಭಾರತೀಯ ಸೇನೆಯ ಕ್ರಮವನ್ನು ಭಾರತೀಯ ನೆಲದಲ್ಲಿ ಭಯೋತ್ಪಾದನೆಯ ಅಪರಾಧಿಗಳನ್ನು ಶಿಕ್ಷಿಸಲು ಯುದ್ಧ ಕ್ರಮ ಎಂದು ಬಣ್ಣಿಸಿದ್ದಾರೆ ಮತ್ತು ಪರಿಸ್ಥಿತಿಯನ್ನು ಉಲ್ಬಣಗೊಳಿಸಲು ಬಯಸುವುದಿಲ್ಲ ಎಂದು ಹೇಳಿದ್ದಾರೆ. ಭಯೋತ್ಪಾದಕರನ್ನು ಶಿಕ್ಷಿಸಲು ರಾಜತಾಂತ್ರಿಕ ಮಾರ್ಗಗಳನ್ನು ಬಳಸುವುದು ಸೇರಿದಂತೆ ಎಲ್ಲಾ ಪ್ರಯತ್ನಗಳನ್ನು ನಡೆಸಬೇಕು, ಅದೇ ಸಮಯದಲ್ಲಿ, ಪರಿಸ್ಥಿತಿ ಉಲ್ಬಣಗೊಳ್ಳಲು ಬಿಡಬಾರದು ಎಂದೂ ಕಾರ್ಮಿಕ ಮುಖಂಡರು ಹೇಳಿದರು.

ದೇಶದ ಜನರು ಬಹುಪಾಲು ಸಮಚಿತ್ತದಿಂದ ತೆಗೆದುಕೊಂಡಿದ್ದಾರೆ, ಅವರು ಎರಡೂ ದೇಶಗಳಲ್ಲಿನ ನಾಗರಿಕರಿಗೆ ಹಾನಿ ಮಾಡುವ ಯುದ್ಧವನ್ನು ಬಯಸುವುದಿಲ್ಲ. ಇದೀಗ ನಮ್ಮ ದೇಶದ ಹಿತದೃಷ್ಟಿಯಿಂದ ಅಂಧಾಭಿಮಾನಿಗಳು ಮತ್ತು ದ್ವೇಷ ಹರಡುವವರನ್ನು ನಿಯಂತ್ರಿಸಬೇಕಾದ ಸಮಯ ಎಂದಿರುವ ಅವರು ಜನಸಾಮಾನ್ಯರಲ್ಲಿ ಐಕ್ಯತೆ ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಎಲ್ಲಾ ಕಾರ್ಮಿಕರು ಮುಂಚೂಣಿಯಲ್ಲಿರಬೇಕು ಎಂದು ಕರೆ ನೀಡುತ್ತ, ಪರಿಸ್ಥಿತಿ ಮತ್ತಷ್ಟು ವಿಕಸನಗೊಂಡಂತೆ ಅದನ್ನು ಪರಿಶೀಲಿಸಲು ಮೇ 15 ರಂದು ಮತ್ತೆ ಸಭೆ ಸೇರಲು ನಿರ್ಧರಿಸಿರುವುದಾಗಿ ಹೇಳಿದರು.

ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಯ ಮುಖಂಡರು ಈ ವೇದಿಕೆಯ ಸಭೆಯಲ್ಲಿ ಭಾಗವಹಿಸಿದ್ದರು.

ಕದನ ವಿರಾಮ– ಸಕಾರಾತ್ಮಕ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತ ಮತ್ತು ಪಾಕಿಸ್ತಾನದ ನಡುವೆ ತಕ್ಷಣವೇ ಕದನ ವಿರಾಮ ಜಾರಿಗೆ ಬರಲಿದೆ ಎಂಬ ಪ್ರಕಟಣೆಯನ್ನು ಸಕಾರಾತ್ಮಕವಾಗಿ ಗಮನಿಸಿರುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಎರಡೂ ದೇಶಗಳ ಜನತೆ ತಮ್ಮ ಪ್ರಗತಿ ಮತ್ತು ಸಮೃದ್ಧಿಗಾಗಿ ಶಾಂತಿಗೆ ಅರ್ಹರು. ಎರಡೂ ದೇಶಗಳು ಇದನ್ನು ಬಳಸಿಕೊಳ್ಳಬೇಕೆಂಬುದು ನಮ್ಮ ಕಳಕಳಿಯ ನಿರೀಕ್ಷೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಪಾಕಿಸ್ತಾನವು ತನ್ನ ಗಡಿಗಳೊಳಗೆ ಭಯೋತ್ಪಾದಕ ಚಟುವಟಿಕೆ ಕೊನೆಗೊಳ್ಳುವಂತೆ ನೋಡಿಕೊಳ್ಳಬೇಕು ಎನ್ನುತ್ತ, ಇನ್ನು ಮುಂದೆ ಯಾವುದೇ ಸಂಘರ್ಷ ನಡೆಯದಂತೆ ನೋಡಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದೆ.

ಕಾರ್ಲ್ ಮಾರ್ಕ್ಸ್: ಮಾರ್ಕ್ಸ್ ಅವರ ಪ್ರಧಾನ ಕೊಡುಗೆಗಳು

ಜಿ.ಎನ್. ನಾಗರಾಜ್


ಮಾರ್ಕ್ಸ್‌ರ ಹುಟ್ಟುಹಬ್ಬ ಇಂದು. ಪ್ರಜಾಪ್ರಭುತ್ವದ ವಿರೂಪದ ಸಾಧ್ಯತೆ, ಅದನ್ನು ಅತ್ಯಂತ ವಿಸ್ತಾರವಾಗಿಸುವ ತುರ್ತು, ಜ್ಞಾನದ ಅಖಂಡತೆ, ಸಮಗ್ರತೆ, ಅದನ್ನು ತುಂಡು ತುಂಡು ಮಾಡುವ ಹುನ್ನಾರ, ಅದರಿಂದ ಉಂಟಾಗುವ ವ್ಯಕ್ತಿತ್ವದ ವಿಘಟನೆ, ಪ್ರಜಾಪ್ರಭುತ್ವದ ವಿಕಾರ. ಜ್ಞಾನ ಮಾತ್ತು ಕ್ರಿಯೆಯ ನಿರಂತರ ಐಕ್ಯತೆ, ಕ್ರಿಯೆಯ ಪ್ರಾಧಾನ್ಯತೆಯನ್ನು ಸಾಧಿಸುವ ಜನಮುಖಿ ತತ್ವಶಾಸ್ತ್ರ, ಸಮಾಜದ ವಿಷಮ ಅಸಮ ರಚನೆಯ ಆಳವಾದ ಅರಿವು, ಶೋಷಣೆ, ದಮನಗಳ ಮೂಲಚೂಲಗಳ ಶೋಧಿಸಿದ ಅರ್ಥಶಾಸ್ತ್ರ, ಸಮಾಜದ ವಿಷಮ ರಚನೆಯನ್ನು ಬೇಧಿಸುವ ಹೊಸ ಸಮಾಜವನ್ನು ಕಟ್ಟುವ ಕ್ರಾಂತಿಕಾರಿ ಇಂಜನಿಯರಿಂಗ್, ಜಗತ್ತಿನ ಕೋಟ್ಯಾಂತರ ಜನಕ್ಕೆ ಸಂಪೂರ್ಣ ಉದ್ಯೋಗ, ಸಾಂಸ್ಕೃತಿಕ, ವೈಜ್ಞಾನಿಕ ಔನ್ನತ್ಯ, ವ್ಯಕ್ತಿತ್ವದ ನಿರಂಕುಶ ವಿಕಸನದಿಂದ ಕೂಡಿದ ಹೊಸ ಮಾನವನ, ಹೊಸ ಜಗತ್ತಿನ ಹಿರಿಗನಸು ಇವು ನಾವೆಲ್ಲ ನೆನಪಿಸಿಕೊಳ್ಳಬೇಕಾದ ಮಾರ್ಕ್ಸ್‌ರವರ ಪ್ರಧಾನ ಕೊಡುಗೆಗಳು.

ಇಡೀ ಮಾನವ ಸಮಾಜವನ್ನು–ಕ್ರಾಂತಿಕಾರಿ ಬದಲಾವಣೆ, ರಾಜಕೀಯ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಮಾನವ ಶಾಸ್ತ್ರ, ಮನಶ್ಶಾಸ್ತ್ರ, ಗಣಿತ, ವಿಜ್ಞಾನ, ಸಾಹಿತ್ಯ, ಕಲೆ, ಸಿನಿಮಾ ಮೊದಲಾದ ಅದರ ಎಲ್ಲ ಆಯಾಮಗಳಲ್ಲಿ ಪ್ರಭಾವಿಸಿದ ಮಾರ್ಕ್ಸ್‌ರವರಂತಹ ಅಸಾಮಾನ್ಯ ಪ್ರತಿಭೆಯನ್ನು ವಿಶ್ವ ಮರೆಯಲಾಗದು. ಮರೆಯಬೇಕೆಂದವರೂ ಅನಿವಾರ್ಯವಾಗಿ ಮತ್ತೆ ಮತ್ತೆ ನೆನೆಸಿಕೊಳ್ಳಲೇಬೇಕಾಗಿದೆ. ಅವರ ನೆನಪನ್ನು ಅಳಿಸಿ ಹಾಕಲೆಂದೇ ಅರ್ಥಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ, ರಾಜಕೀಯ ಶಾಸ್ತ್ರಗಳಲ್ಲಿ ಹೊಸ ಹೊಸ ಮಾರ್ಕ್ಸ್‌ವಾದ ವಿರೋಧಿ ಸಿದ್ಧಾಂತಗಳನ್ನು ನೂರಾರು ಮಹಾ ಪ್ರಾಧ್ಯಾಪಕರುಗಳು ಶ್ರಮಿಸಿದ್ದಾರೆ, ಇನ್ನೂ ಶ್ರಮಿಸುತ್ತಿದ್ದಾರೆ. ಅವರ ಪುಸ್ತಕಗಳು ಪುಸ್ತಕ ಭಂಡಾರಗಳಲ್ಲಿ ಕಣ್ಣಿಗೆ ಬೀಳಬಾರದೆಂದು, ಅವರ ಹೆಸರು ಪತ್ರಿಕೆಗಳಲ್ಲಿ ಕಾಣಬಾರದೆಂದು ವಿಶ್ವದಾದ್ಯಂತ ಸೆನ್ಸಾರ್‌ಗಳು ಕುತಂತ್ರಗಳು ನಡೆಯುತ್ತಾ ಇವೆ. ಆದರೂ ಮಾರ್ಕ್ಸ್‌ವಾದ ತನ್ನ ಒಳಗಿನ ಪ್ರಖರ ವೈಜ್ಞಾನಿಕತೆ, ವೈಚಾರಿಕತೆಯಿಂದ ಹಬ್ಬುತ್ತಲೇ ಇದೆ.

ತತ್ವಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ, ವಿಜ್ಞಾನ, ಸಾಹಿತ್ಯ, ಕಲೆ, ಹೀಗೆ ಮೇಲೆ ಹೇಳಿದ ಎಲ್ಲ ಜ್ಞಾನ ವಿಭಾಗಗಳನ್ನೂ ಒಗ್ಗೂಡಿಸಿ ಐಕ್ಯಗೊಳಿಸಿ ಅದಕ್ಕೊಂದು ಹೊಸ ಹೊಳಪನ್ನು, ವಿಶ್ವವನ್ನು ಅರಿಯುವ ಪ್ರಖರ ಸಾಮರ್ಥ್ಯವನ್ನು ಮಾರ್ಕ್ಸ್ – ಎಂಗೆಲ್ಸ್ ರವರು ನೀಡಿದರು. ಇಂತಹ ಪ್ರಖರತೆಯ ಮೂಲ ಕಾರಣ ಮತ್ತು ಅಡಿಪಾಯವೇ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ನಿರಂತರ ಅಧ್ಯಯನ, ವೈವಿಧ್ಯಮಯವಾದ ಹತ್ತಾರು ಸಾವಿರ ಗ್ರಂಥಗಳ, ಪ್ರಬಂಧಗಳ ಅಧ್ಯಯನ ಮಾತ್ರವಲ್ಲದೆ ನಿರಂತರವಾದ ಕ್ರಿಯಾಶೀಲತೆ.

1848 ರಲ್ಲಿ ಯುರೋಪಿನ ಹಲವು ದೇಶಗಳಲ್ಲಿ ವ್ಯಾಪಿಸಿದ ಕ್ರಾಂತಿಗಳಲ್ಲಿ ನೇರವಾಗಿ ಭಾಗವಹಿಸಿದರು. ಕಮ್ಯುನಿಸ್ಟ್ ಲೀಗ್‌ನ ಭಾಗವಾದರು. ಅದಕ್ಕೊಂದು ಹೊಸ ವೈಚಾರಿಕತೆಯನ್ನು, ಹೊಸ ರೂಪವನ್ನು ನೀಡಿದರು. ಸ್ವತಃ ವಿಶ್ವದ ಮೊತ್ತ ಮೊದಲ ಕಾರ್ಮಿಕ ಅಂತರರಾಷ್ಟ್ರೀಯವನ್ನು ಕಟ್ಟಿದರು. ಕ್ರಾಂತಿಕಾರಿ ವೈಚಾರಿಕತೆ ಮತ್ತು ಕಾರ್ಮಿಕ ಚಳುವಳಿಯನ್ನು ವಿಶ್ವಾದ್ಯಂತ ಹಬ್ಬಿಸಲು ಶ್ರಮಿಸಿದರು. ಕಾರ್ಮಿಕರನ್ನು, ಜನರನ್ನು ತಪ್ಪುದಾರಿಗೆಳೆಯುತ್ತಿದ್ದ, ವೈಜ್ಞಾನಿಕ ಸಿದ್ಧಾಂತದ ವಿರುದ್ಧವಾದ ಎಲ್ಲ ವಿಚಾರಗಳ ವಿರುದ್ಧ ಹೋರಾಡುತ್ತಾ ಮಾರ್ಕ್ಸ್‌ವಾದವನ್ನು ರೂಪಿಸಿದರು. ಹೀಗೆ ತತ್ವ ಮತ್ತು ಕ್ರಿಯೆಯ ಏಕತ್ವವೇ ಮಾರ್ಕ್ಸ್‌ವಾದದ ಅಡಿಪಾಯವಾಯಿತು.

ಬಂಡವಾಳಶಾಹಿಗಳು ಒಂದೊಂದು ರೀತಿಯ ಜ್ಞಾನವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ವಿಧಾನವನ್ನು ಈ ಸಮಾಜದ ಮೇಲೆ ಹೇರಿದ್ದಾರೆ. ವಿಜ್ಞಾನ ಬೇರೆ, ಸಮಾಜ ವಿಜ್ಞಾನ ಬೇರೆ, ಸಾಹಿತ್ಯವಂತೂ ಇನ್ನೂ ಬೇರೆ. ವಿಜ್ಞಾನಿಗಳಿಗೆ ತಾವು ಬೆಳೆದು ಬಂದ ಸಮಾಜ, ಅದರ ಇತಿಹಾಸದ ಅರಿವೇ ಇಲ್ಲದಂತಾಗಿದೆ.



ಇದರಿಂದಾಗಿ ವಿಜ್ಞಾನ ತಂತ್ರಜ್ಞಾನ ಪದವೀಧರರು ವಿಶ್ವಾದ್ಯಂತ ಫ್ಯಾಸಿಸಮ್ ಬೆಂಬಲಿಗರಾಗುತ್ತಿದ್ದಾರೆ. ನಮ್ಮ ದೇಶದಲ್ಲಿ ಮೋದಿಯ ಮಬ್ಬಕ್ತರಾಗಿದ್ದಾರೆ. ವಿಜ್ಞಾನಗಳ ಒಳಗೂ ವಿಭಜನೆ. ಹೀಗಾಗಿ ಜ್ಞಾನ ತನ್ನ ಪ್ರಖರತೆಯ, ಸರ್ವವ್ಯಾಪಿತ್ವಕ್ಕೆ ಆಧಾರವಾದ ಸಮಗ್ರತೆಯನ್ನು ಕಳೆದುಕೊಂಡು ವಿಭಜನೆಗೆ ತುತ್ತಾಗಿದೆ. ಪರಿಣಾಮವಾಗಿ ಮನುಷ್ಯರ ವ್ಯಕ್ತಿತ್ವವೇ ವಿಭಜನೆಗೆ ಒಳಗಾಗಿದೆ. ಒಡೆದ ಕನ್ನಡಿಯಂತಾಗಿದೆ. ಅದರಿಂದಾಗಿ ಮಾನವ ಸಮಾಜವನ್ನು ವಿರೂಪಗೊಳಿಸಿದ ಮೂಲಭೂತ ಕಾರಣ ಶೋಷಣೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು, ಈ ಶೋಷಣೆಯನ್ನು ದಿನನಿತ್ಯ ಅನುಭವಿಸುತ್ತಾ ಸಂಕಟಪಡುವವರಿಗೂ ದೊಡ್ಡ ಅಡ್ಡಿಯನ್ನು ಉಂಟುಮಾಡಿದೆ.

ಡಾರ್ವಿನ್ನರ ವಿಕಾಸವಾದ, ನ್ಯೂಟನ್ನನ ನಿಯಮಗಳು, ಗುರುತ್ವಾಕರ್ಷಣೆಯ ತತ್ವ, ಐನ್‌ಸ್ಟೀನರ ಸಾಪೇಕ್ಷತಾವಾದಗಳು ಹೇಗೆ ಜಗತ್ತಿನ ಎಲ್ಲರೂ ಅಧ್ಯಯನ ಮಾಡುತ್ತಿದ್ದಾರೋ, ಅವುಗಳನ್ನು ತಮ್ಮದೇ ಸಂಶೋಧನೆಗಳ ಮುಂದುವರೆಸಿ ಬೆಳೆಸುತ್ತಿರುವರೋ ಅದೇ ರೀತಿ ಮಾರ್ಕ್ಸ್‌ರವರು ಎಂಗೆಲ್ಸ್‌ರವರ ಜೊತೆಗೂಡಿ ರೂಪಿಸಿದ ಮಾರ್ಕ್ಸ್‌ವಾದವನ್ನೂ ಜಗತ್ತಿನೆಲ್ಲ ಜನರು ಅಧ್ಯಯನ ಮಾಡಲೇಬೇಕಾಗುತ್ತದೆ. ಅದರ ಮೂಲಕ ಜಗತ್ತನ್ನು ಶೋಷಣೆ ರಹಿತವಾದ ಹೊಸ ಸಮಾಜವನ್ನು ರೂಪಿಸುತ್ತಾರೆ. ಮನುಷ್ಯರ ವ್ಯಕ್ತಿತ್ವದ ಬೆಳವಣಿಗೆಗೆ ಕಲ್ಲುಬಂಡೆಯಂತೆ ಅಡ್ಡಿಯಾಗಿರುವ ಸಾಮಾಜಿಕ, ಆರ್ಥಿಕ ಅಡ್ಡಿಗಳನ್ನೂ ತೊಡೆದು ಸ್ವಾರ್ಥ, ಅಸೂಯೆ, ದುರಾಸೆಗಳನ್ನು ದೂರ ಇಟ್ಟ ಹೊಸ ಮಾನವರನ್ನು ರೂಪಿಸುತ್ತದೆ.

ಮಾರ್ಕ್ಸ್, ಎಂಗೆಲ್ಸ್ ಪದೇ ಪದೇ ಹೇಳಿದಂತೆ ಮಾರ್ಕ್ಸ್‌ವಾದ ರೂಪುಗೊಂಡದ್ದು ಇಡೀ ಮಾನವ ಸಮಾಜದ ಜ್ಞಾನ ಸಂಪಾದನೆ ಮತ್ತು ಅದನ್ನು ವಾಸ್ತವಗೊಳಿಸುವ ಕ್ರಿಯೆಗಳ ಹೆದ್ದಾರಿಯಲ್ಲಿ. ಅದನ್ನು ಆಯಾ ದೇಶಗಳ ವಿಶಿಷ್ಟ ಪರಿಸ್ಥಿತಿ, ಸಮಾಜಕ್ಕೆ ಅನ್ವಯಿಸಿ ಕ್ರಿಯೆಗಿಳಿಸಬೇಕು. ಬೃಹತ್ ಅಣೆಕಟ್ಟುಗಳನ್ನು ಕಟ್ಟುವ ಮೂಲಭೂತ ತತ್ವಗಳು ಒಂದೇ ಇದ್ದರೂ ಕನ್ನಂಬಾಡಿ, ತುಂಗಭದ್ರಾ, ಭಾಕ್ರಾನಂಗಲ್ ಅಣೆಕಟ್ಟುಗಳನ್ನು ಕಟ್ಟಿದ ವಿಧಾನ, ರೀತಿ ಒಂದೇ ಅಲ್ಲ. ಅದೇ ರೀತಿ ವೈದ್ಯಕೀಯ ವಿಜ್ಞಾನ, ಒಂದು ರೋಗದ ಮೂಲಭೂತ ಕಾರಣ, ಚಿಕಿತ್ಸಾ ವಿಧಾನ ಒಂದೇ ಆದರೂ ಅದನ್ನು ವಿವಿಧ ದೇಶಗಳ ಪ್ರದೇಶಗಳ ಮನುಷ್ಯರ ದೈಹಿಕ ಬೆಳವಣಿಗೆ, ದಾರ್ಢ್ಯತೆ, ವಾತಾವರಣ ಇವುಗಳಿಗೆ ಅನ್ವಯಿಸಿ ಮಾರ್ಪಾಡುಗಳನ್ನು ಮಾಡಿಕೊಳ್ಳಲೇ ಬೇಕಾಗುತ್ತದೆ. ಹೀಗೆ ಅನ್ವಯಿಸುವ ದಾರಿಯಲ್ಲಿ ಆಯಾ ತಂತ್ರಜ್ಞಾನ, ವಿಜ್ಞಾನಗಳು ಬೆಳೆಯುತ್ತವೆ.

ಹಾಗೆಯೇ ಮಾರ್ಕ್ಸ್‌ವಾದವನ್ನೂ ಭಾರತಕ್ಕೆ, ಕರ್ನಾಟಕಕ್ಕೆ, ವಿವಿಧ ಪ್ರದೇಶಗಳ ವಿಶಿಷ್ಟ ಪರಿಸ್ಥಿತಿಗೆ ಅನ್ವಯಿಸಿ ವಾಸ್ತವಗೊಳಿಸಬೇಕಾಗುತ್ತದೆ, ಬೆಳೆಸಬೇಕಾಗುತ್ತದೆ.

ಮಾರ್ಕ್ಸ್‌ವಾದದ ಮೂಲಭೂತ ಅರಿವನ್ನು– ತತ್ವಶಾಸ್ತ್ರ, ಅರ್ಥಶಾಸ್ತ್ರ, ಕ್ರಾಂತಿಕಾರಿ ರಾಜಕೀಯದ ಅರಿವನ್ನು ಭಾರತದ ತತ್ವಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜಕೀಯದ ಅಧ್ಯಯನದ ಜೊತೆಗೆ ಮೇಳೈಸಬೇಕಾಗಿದೆ. ಇಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿಯ ಜನರಿಗೆ ವಿವರಿಸಿ ಜನರನ್ನು ಮಾರ್ಕ್ಸ್‌ವಾದದತ್ತ, ಕ್ರಾಂತಿಕಾರಿ ಬದಲಾವಣೆಯತ್ತ ಸೆಳೆಯಬೇಕಾಗಿದೆ. ಲೆನಿನ್, ಮಾವೋ, ಹೋಚಿಮಿನ್, ಕ್ಯಾಸ್ಟ್ರೋರಂತಹ ನಾಯಕರು ಮಹಾನ್ ಆಗಿದ್ದು, ಕೋಟ್ಯಾಂತರ ಜನರನ್ನು ಶೋಷಣೆಯಿಂದ ವಿಮೋಚನೆಗೊಳಿಸಿದ್ದು ಇದೇ ದಾರಿಯಲ್ಲಿ.

ಮಾರ್ಕ್ಸ್‌ರವರು ಹುಟ್ಟಿದ ಈ ದಿನ ಈ ಮುಖ್ಯ ಅಂಶಗಳನ್ನು ಮನಸ್ಸಿಗೆ ತಂದುಕೊಳ್ಳೋಣ. ಮಾರ್ಕ್ಸ್‌ವಾದ ಮತ್ತು ಭಾರತ, ಕರ್ನಾಟಕದ ಪರಿಸ್ಥಿತಿಗಳ ಅಧ್ಯಯನವನ್ನು ಬೆಸೆಯೋಣ. ❑


ತಿದ್ದುಪಡಿ:

ಹಿಂದಿನ ಸಂಚಿಕೆ 19 ರ ಪುಟ 3 ರಲ್ಲಿ ಇರುವ ಲೇಖನದ ತಲೆ ಬರಹದಲ್ಲಿ "ಕಾರ್ಪೋರೇಟ್ ಹಿಂದುತ್ವ ಅನೈತಿಕ ಮೈತ್ರಿಯನ್ನು ಸೋಲಿಸೋಣ....' ಎಂದಾಗಬೇಕಾಗಿತ್ತು. ಕಣ್ತಪ್ಪಿನಿಂದ (ಅನೈಕ್ಯತೆಯ) ಆಗಿರುವ ತಪ್ಪಿಗೆ ವಿಷಾಧಿಸುತ್ತೇವೆ.

–ಸಂ.

ವೈಜ್ಞಾನಿಕ ಕನಿಷ್ಟ ವೇತನದ ಜಾರಿ ರಾಜ್ಯ ಸರ್ಕಾರದ ಆಧ್ಯತೆಯ..... ಪುಟ 9 ರಿಂದ

ಕನಿಷ್ಟ ವೇತನವು ಶಾಸನಬದ್ಧ ಸೂತ್ರಗಳನ್ವಯ,



ಅಗತ್ಯ ವಸ್ತುಗಳ ಬೆಲೆಗಳ ಆಧಾರದಲ್ಲಿ ಲೆಕ್ಕ ಹಾಕಿದಲ್ಲಿ, ಈಗ ಪ್ರಕಟವಾಗಿರುವ ವೇತನವು ಅತಿ ಕಡಿಮೆಯಾಗಿರುತ್ತದೆ. ಕೇಂದ್ರ ಕಾರ್ಮಿಕ ಸಂಘಟನೆಗಳು ಮಂಡಿಸಿದ ಸೂಚನೆಯು 2021–22ರ ಬೆಲೆಗಳು ಹಾಗು ಗ್ರಾಹಕ ಸೂಚ್ಯಂಕವನ್ನು ಆದರಿಸಿ ಲೆಕ್ಕಾಚಾರ ಮಾಡಿದ್ದಾಗಿದೆ. ಈ 2025ರ ಸನ್ನಿವೇಶದಲ್ಲಿ ಈ ಬೇಡಿಕೆ ಇನ್ನೂ ಹೆಚ್ಚಾಗಬೇಕಾಗುತ್ತದೆ.

ಕನಿಷ್ಟ ವೇತನ ಹೆಚ್ಚಾದಲ್ಲಿ ಕೈಗಾರಿಕೆಗಳು ರಾಜ್ಯ ಬಿಟ್ಟು ಹೋಗುತ್ತವೆಯೇ?

ಕಾರ್ಮಿಕ ಸಚಿವರು ರೆಪ್ಟೋಕೋಸ್ ಬ್ರೆಟ್ ತೀರ್ಪಿನ ಮಾರ್ಗಸೂಚಿಗಳನ್ನು ಅನುಸರಿಸಿ ಕನಿಷ್ಟ ವೇತನವನ್ನು ಲೆಕ್ಕಾಚಾರ ಮಾಡಲಾಗಿದೆ ಎಂದು ಘೋಷಿಸಿಕೊಂಡಿರುವುದು ಸರಿಯಾದುದಲ್ಲ. ಹಾಗು ಈ ಹೆಚ್ಚಳದ ಮೂಲಕ ದೇಶದಲ್ಲೇ ಅತಿಹೆಚ್ಚು ಕನಿಷ್ಟ ವೇತನ ಇರುವ ರಾಜ್ಯವಾಗುತ್ತದೆ ಎಂಬ ವಾದದಲ್ಲಿಯೂ ಸತ್ಯವಿಲ್ಲ. ಕನಿಷ್ಟ ವೇತನ ಹೆಚ್ಚಾದಲ್ಲಿ ಕೈಗಾರಿಕೆಗಳು ರಾಜ್ಯ ಬಿಟ್ಟು ಹೋಗುತ್ತವೆ ಎಂಬುದು ತರ್ಕಬದ್ಧವಾದ ವಾದವಲ್ಲ. ಕನಿಷ್ಟ ವೇತನ ಅತಿ ಕಡಿಮೆ ಇರುವ ರಾಜ್ಯಗಳಿಂದ ಕೋಟಿಗಟ್ಟಲೆ ವಲಸೆ ಕಾರ್ಮಿಕರು, ಕನಿಷ್ಟ ವೇತನ ಹೆಚ್ಚಿರುವ ರಾಜ್ಯಗಳಾದ ಕರ್ನಾಟಕ ಹಾಗು ದಕ್ಷಿಣ ಭಾರತದ ರಾಜ್ಯಗಳಿಗೆ ಬರುತ್ತಿದ್ದಾರೆ. ಕೂಲಿ ಕಡಿಮೆ ಇರುವ ಕಡೆಗೆ ಕೈಗಾರಿಕೆಗಳು ಹೋಗುತ್ತಿಲ್ಲ ಎಂಬುದೇ ಸತ್ಯವಾಗಿದೆ. ರಾಜ್ಯದಲ್ಲಿ ದುಡಿಮೆಗಾರರು ಸೃಷ್ಟಿಸುವ ಸಂಪತ್ತಿನಲ್ಲಿ ದೊಡ್ಡ ಪಾಲು ಕೋಟ್ಯಾಂತರ ಕಾರ್ಮಿಕರಿಗೆ ವೇತನದ ರೂಪದಲ್ಲಿ ಲಭ್ಯವಾದರೆ ರಾಜ್ಯದ ಆರ್ಥಿಕತೆ ಬೆಳೆಯುತ್ತದೆ. ಜನಸಾಮಾನ್ಯರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ಜನಸಾಮಾನ್ಯರು ಹೆಚ್ಚಿನ ರೀತಿಯಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗುತ್ತಾರೆ.

ಕನಿಷ್ಟ ವೇತನವನ್ನು ವೈಜ್ಞಾನಿಕವಾಗಿ ನಿಗದಿಪಡಿಸುವುದು ಇಡೀ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಪೂರಕವಾದ ನೀತಿಯಾಗಿರುತ್ತದೆ. ರಾಜ್ಯ ಸರ್ಕಾರವು ಕನಿಷ್ಟ ವೇತನವನ್ನು ವೈಜ್ಞಾನಿಕವಾಗಿ ಹೆಚ್ಚಿಸುವ ಕೆಲಸದಿಂದ ಹಿಂದೆ ಸರಿಯಬಾರದು ಎಂದು ಸಿಐಟಿಯು ಒತ್ತಾಯಿಸುತ್ತದೆ. ❑

ಗಾಯದ ಮೇಲೆ ಬರೆ ಎಳೆಯುವವರು......

–ಜಿ.ಎಸ್.ಮಣಿ

ಪಹಲ್ಗಾಮ್‌ನ ಹುಲ್ಲುಗಾವಲಿನಲ್ಲಿ ತನ್ನ ಗಂಡನ ಹೆಣದ ಪಕ್ಕ ರೋಧಿಸಲೂ ಆಗದೆ ಸ್ತಬ್ಧವಾಗಿ, ಮೌನ ಪ್ರತಿಮೆಯಾಗಿ ಕುಳಿತ ಹೆಂಗಸಿನ ಫೋಟೋ ಮಾರನೇ ದಿನ ಪತ್ರಿಕೆಗಳಲ್ಲಿ ಪ್ರಕಟವಾದ ದೃಶ್ಯ ಎಂತವರನ್ನೂ ತೀವ್ರವಾಗಿ ಕಾಡುತ್ತದೆ. ಈ ಮಹಿಳೆ ಹಿಮಾಂಶಿ ನರವಾಲ್. ಈಕೆಯ ಪತಿ ಲೆಫ್ಟಿನೆಂಟ್ ವಿನಯ್ ನರವಾಲ್ ಮದುವೆಯಾಗಿ ಒಂದು ವಾರದೊಳಗೇ (ಏಪ್ರಿಲ್ 22 ರಂದು) ಭಯೋತ್ಪಾದಕರ ಗುಂಡಿಗೆ ಬಲಿಯಾದರು.

ಭಯೋತ್ಪಾದಕ ಕೊಲೆಗಳ ಒಬ್ಬ ಸಂತ್ರಸ್ತೆಯಾದ ಈಕೆಯನ್ನು ಕೇಸರಿ ಪಡೆ ಟ್ರೋಲ್ ಮಾಡುತ್ತಿದೆ. ಮನುಷ್ಯತ್ವದ ಕನಿಷ್ಟ ಸಂಯಮವೂ ಇಲ್ಲದ ಈ ಜನ ಕೆಟ್ಟ ರೀತಿಯಲ್ಲಿ ಈ ಧೀರ, ಸಂಯಮಿ ಮಹಿಳೆಯನ್ನು ಟ್ರೋಲ್ ಮಾಡುತ್ತಿದ್ದಾರೆಂದರೆ ಅವರ ನೀಚತನದ ಅರಿವಾದೀತು. ಪತಿಯನ್ನು ಕಳೆದುಕೊಂಡ ಈ ಮಹಿಳೆಯ ಬಗ್ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಬಂದಿರುವ ಕಾವಿ ಪಡೆಯ ಹೇಸಿಗೆ ಹುಟ್ಟಿಸುವ ಟ್ರೋಲ್‌ಗಳು ಮಾನವ ಸಹಜವಾದ ವರ್ತನೆಗೆ ಇವು ಹೊರತಾಗಿವೆ ಎಂಬುದನ್ನು ಕೂಗಿ ಹೇಳುತ್ತಿವೆ.

ಹಿಮಾಂಶಿ ನರವಾಲ್ ಬಹಳ ದಿಟ್ಟ ಮಹಿಳೆ. ಲೆಫ್ಟಿನೆಂಟ್ ವಿನಯ್ ನರವಾಲ್ ಅವರ ಜನ್ಮ ದಿನದಂದು ಕರ್ನಾಲ್‌ನಲ್ಲಿ 'ರಾಷ್ಟ್ರೀಯ ಏಕತೆಗಾಗಿ ಕಲಾವಿದರು ಮತ್ತು ಕಾರ್ಯಕರ್ತರ ವೇದಿಕೆ' ಎಂಬ ಸಂಸ್ಥೆ ರಕ್ತದಾನ ಶಿಬಿರ ಸಂಘಟಿಸಿತು. ಆ ಶಿಬಿರದಲ್ಲಿ ಭಾಗವಹಿಸಿದ ಹಿಮಾಂಶಿ ಹೇಳಿದ್ದು: "ಮುಸ್ಲಿಮರು ಮತ್ತು ಕಾಶ್ಮೀರಿಗಳನ್ನು ದೂರುವುದರಲ್ಲಿ ಅರ್ಥವಿಲ್ಲ. ನಮಗೆ ಶಾಂತಿ ಬೇಕು. ನಮಗೆ ನ್ಯಾಯವೂ ಬೇಕು. ಅದಕ್ಕೆ ಈ ತಪ್ಪುಗಳನ್ನು ಮಾಡಿದವರನ್ನು ಶಿಕ್ಷಿಸಬೇಕು". ಈ ಹೇಳಿಕೆಯನ್ನು ವಿವಿಧ ಸುದ್ದಿ ಸಂಸ್ಥೆಗಳು ಟ್ವಿಟ್ಟರ್ ನಲ್ಲಿ ಪ್ರಕಟಿಸಿದವು. ಈ ಹೇಳಿಕೆ ನೋಡಿದ ಕಾವಿಪಡೆ ಅವರನ್ನು ಟ್ರೋಲ್ ಮಾಡಲು ಶುರುಮಾಡಿತು. ಟ್ರೋಲ್ ಮುತ್ತುಗಳು ಒಂದಕ್ಕಿಂತ ಒಂದು ಪ್ರಬಲವಾಗಿ ಬಂದವು. ಆಯ್ದ ಕೆಲವನ್ನು ನೋಡುವುದಾದರೆ:

"ಈಕೆ ತನ್ನ ಅತ್ತೆ ಮಾವಂದಿರ ಆಸ್ತಿ ಮತ್ತು ಹಣವನ್ನು ಕಬಳಿಸುತ್ತಾಳೆ. ಸರ್ಕಾರ ನೀಡುವ ಹಣವನ್ನೂ ಕಬಳಿಸುತ್ತಾಳೆ"

"ಈಕೆ ತನ್ನ ಗಂಡನನ್ನು ಮುಸ್ಲಿಮ್ ಭಯೋತ್ಪಾದಕ ಮಿಂಡನಿಂದ ಕೊಲೆ ಮಾಡಿಸಿರುವಂತಿದೆ"

"ಈಕೆ ಎಲ್ಲ ಆಸ್ತಿಗಳನ್ನು ನುಂಗಿ ಅತ್ತೆ ಮಾವಂದಿರನ್ನು ಬೀದಿಪಾಲು ಮಾಡುತ್ತಾಳೆ"

ಈ ಶಿಬಿರದಲ್ಲಿ ರಾಜಕಾರಣಿಗಳಿದ್ದರು. ಬಿಜೆಪಿಯ ಶಾಸಕ ಜಗಮೋಹನ್ ಆನಂದ್ ಶಿಬಿರದಲ್ಲಿ ಭಾಗವಹಿಸಿದ್ದರು.

ಭಯೋತ್ಪಾದನೆಯ ಸಂತ್ರಸ್ತೆ ಶಾಂತಿಯ ಮಾತನ್ನಾಡಿದರೆ ಈ ರಾಜಕಾರಣಿಗಳು ಮತ್ತು ಕೇಸರಿಪಡೆ ಕೋಮು ದ್ವೇಷದ ಕಿಚ್ಚುಹಚ್ಚಲು ಸಾಧ್ಯವಾದುದನ್ನೆಲ್ಲ ಮಾಡಿದರು. ಅದರ ಪರಿಣಾಮವೇ ಇಂಥ ಟ್ರೋಲ್ (ವಿಷಕಾರುವ) ಮಾತುಗಳು.

ಗಂಡನನ್ನು ಭಯೋತ್ಪಾದಕರ ಗುಂಡಿಗೆ ಕಳೆದುಕೊಂಡ ಈಕೆ ಶಾಂತಿಯ ಮಾತನಾಡುತ್ತಾಳಲ್ಲ ಎಂದು ಕಟುಕಿದವರು ಹಲವರು.

ಹಿಮಾಂಶಿ ಅವರಿಗೆ ಭಯೋತ್ಪಾದಕರ ಜೊತೆಗೆ ಸಂಪರ್ಕ ಇರುವಂತೆ ಕಾಣಿಸುತ್ತಿದೆ. ಅದರ ತನಿಖೆ ಆಗಲಿ ಎಂದೂ ಟ್ವಿಟ್ಟರ್ ನಲ್ಲಿ ಕೆಲವರು ಹೇಳಿದರು!!

ಇಂತಹ ಬೆಚ್ಚಿಬಿಳಿಸುವ ಭಯೋತ್ಪಾದನಾ ದಾಳಿ ನಡೆದ ಮೇಲೆ ವಸ್ತುನಿಷ್ಟ ವಿಶ್ಲೇಷಣೆಯ ಪ್ರಯತ್ನಗಳು ನಡೆಯಬೇಕಾಗಿತ್ತು. ಎರಡು ಸಾವಿರ ಜನ ಪ್ರವಾಸಿಗರು ಬರುವ ತಾಣಕ್ಕೆ ಕನಿಷ್ಟ ಸುರಕ್ಷತೆಯ ವ್ಯವಸ್ಥೆ ಇರಬೇಕಿತ್ತಲ್ಲವೇ? ಯಾಕೆ ಇರಲಿಲ್ಲ? ಕೆಲವೇ ಕೆಲವು ದಿನಗಳ ಮೊದಲು ಗೃಹ ಮಂತ್ರಿ ಅಮಿತ್ ಶಾ ಅವರು ಉನ್ನತ ಮಟ್ಟದ ಸುರಕ್ಷೆಯ ಸಮೀಕ್ಷಾ ಸಭೆ ನಡೆಸಿದ್ದರು. ಇದು ಬರೀ ಬೂಟಾಟಿಕೆ ಆಗಿತ್ತೇ? ಇದಕ್ಕೂ ಮೊದಲೂ ಹಲವು ಹತ್ಯೆಗಳು ನಡೆದಿದ್ದವು. ಹೀಗಿರುವಾಗಲೂ ಕಾಶ್ಮೀರದ ಸ್ಥಿತಿ ಸಹಜ–ಸಾಮಾನ್ಯವಾಗಿದೆ ಎಂಬ ಪ್ರಚಾರವನ್ನು ಕೇಂದ್ರ ಸರ್ಕಾರ ಯಾಕೆ ಮಾಡಿತು? ಯಾಕೆ ಪ್ರವಾಸಗಳ ಮೇಲೆ ನಿರ್ಬಂಧ ಹೇರಲಿಲ್ಲ? ಕಾಶ್ಮೀರದ ತುಂಬಾ ಪಸರಿಸಿರುವ ಸೇನೆ ಇಲ್ಲಿ ಯಾಕೆ ಇರಲಿಲ್ಲ. ಗುಪ್ತಚರ ವರದಿಗಳು ಏನು ಹೇಳಿದ್ದವು? ಇದು ಗೂಢಚರ್ಯೆಯ ವೈಫಲ್ಯವೇ? ಇವೆಲ್ಲವಕ್ಕೂ ಜವಾಬ್ದಾರರು ಯಾರು? ಇಂಥ ಹಲವಾರು ಪ್ರಶ್ನೆಗಳಿಗೆ ಆಡಳಿತ (ಎಲ್ಲ ಲಗಾಮುಗಳನ್ನು ಹೊಂದಿರುವ ಕೇಂದ್ರ ಸರ್ಕಾರ) ಉತ್ತರ ನೀಡಲು ಬಾಧ್ಯಸ್ಥ. ತನ್ನ ಎಲ್ಲ ಇಂತಹ ಭಾಧ್ಯತೆಗಳಿಂದ ಗಮನವನ್ನು ಬೇರೆಡೆಗೆ ಹರಿಸಲು ಟ್ರೋಲ್ ಪಡೆಯನ್ನೇ ಸಂಘಟಿಸಿ ಮುಂದಕ್ಕೆ ಬಿಟ್ಟಿರುವಂತೆ ಕಾಣಿಸುತ್ತಿದೆ.

ಸ್ವಲ್ಪ ಆಳಕ್ಕೆ ಇಳಿದರೆ ಆಡಳಿತದ ಒಳಪುಕ್ಕಲುತನ ಗೊತ್ತಾಗುತ್ತದೆ. ಕಥುವದಲ್ಲಿ ಆರು ವರ್ಷದ ಬಾಲಕಿ ಅತ್ಯಾಚಾರಕ್ಕೊಳಗಾಗಿ ಕೊಲೆ ಆದಾಗ ಹಿಮಾಂಶಿ ನ್ಯಾಯ ಕೇಳಿದ್ದರು. ಈಕೆ ತನ್ನ ಕಾಲೇಜು ದಿನಗಳಲ್ಲಿ ಕಾಶ್ಮೀರಿಗಳ ಜೊತೆ ಸ್ನೇಹದಿಂದ ಇದ್ದರು ಎಂಬುದು ಇನ್ನೊಂದು ಒಳ ಉರಿಯ ಕಾರಣ. ಇವೆಲ್ಲಕ್ಕಿಂತ ದೊಡ್ಡದು ಈಕೆ ಜೆಎನ್‌ಯು ನಲ್ಲಿ ವಿದ್ಯಾರ್ಥಿನಿ ಆಗಿದ್ದರು ಎನ್ನುವುದು. ಈಕೆಯ ಜಾತ್ಯತೀತತೆ ಜೆಎನ್‌ಯುದಿಂದ ಬಂದಿರುವಂತಿದೆ ಎಂದೂ ಬಲಪಂಥೀಯನೊಬ್ಬ ಫೇಸ್ಬುಕ್‌ನಲ್ಲಿ ಉಲ್ಲೇಖಿಸಿದ್ದಾನೆ!!

ಕಾವಿ ಪಡೆಯ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. "ನನ್ನದಲ್ಲದ/ ನಾನು ಒಪ್ಪದ ವಿಚಾರವನ್ನು ಇಟ್ಟುಕೊಳ್ಳಲು ಯಾರಿಗೂ ಹಕ್ಕಿಲ್ಲ" ಎಂಬ ನಿಲುವು ಅವರದು. ಅದೇ ಪ್ರಜಾಪ್ರಭುತ್ವ ಎಂದೂ ಅವರು ಹೇಳುತ್ತಾರೆ.

"ಸರ್ಕಾರದ ಕೆಲಸದಲ್ಲಿ ಹಿಮಾಂಶಿ ಅಡ್ಡಗಾಲು ಹಾಕಿದ್ದಾರೆ" ಎಂದೂ ಒಬ್ಬ ಮಹಾಶಯ ಹೇಳಿದ್ದಾನೆ!

ಹಿಮಾಂಶಿ ಒಬ್ಬಳೇ ಅಲ್ಲ

ಈ ಭಯೋತ್ಪಾದನೆಯಲ್ಲಿ ತನ್ನ ತಂದೆ ರಾಮಚಂದ್ರನ್ ಅವರನ್ನು ಭಯೋತ್ಪಾದಕರ ಗುಂಡಿಗೆ ಕಳೆದುಕೊಂಡ ಆರತಿ ಮೆನನ್ ಅವರನ್ನೂ ಕಾವಿ ಪಡೆ ಟ್ರೋಲ್ ಮಾಡಿದೆ. ಆರತಿ "ತಂದೆಯನ್ನು ಈ ಭಯೋತ್ಪಾದನೆಯಲ್ಲಿ ಕಳೆದುಕೊಂಡೆ. ಆದರೆ ಇಬ್ಬರು ಸಹೋದರರರನ್ನು ಪಡೆದುಕೊಂಡೆ" ಎಂದು ತನ್ನನ್ನು ರಕ್ಷಿಸಿ ಸರಿಯಾದ ಸ್ಥಳಕ್ಕೆ ಕರೆದೊಯ್ದ ಮುಸ್ಲಿಮರ ಬಗ್ಗೆ ಹೇಳಿದ್ದು ಕಾವಿ ಪಡೆಗೆ ಸಹ್ಯವಾಗಿಲ್ಲ.

ಬಿಜೆಪಿಯ ಮಿತ್ರಪಕ್ಷ ಎಲ್‌ಜೆಪಿ ಪಕ್ಷದ ರಾಜಕಾರಣಿಯೊಬ್ಬರು ಟ್ರೋಲ್ ಮಾಡಿರುವುದು ಕಾವಿಪಡೆಯ ಈ ಮನೋಭಾವಕ್ಕೆ ಇನ್ನೊಂದು ಪುರಾವೆ. "ಇದು ಬುದ್ದಿ ತೊಳೆದುಕೊಂಡ ಭಾರತೀಯ ಜಾತ್ಯಾತೀತತೆಯ ಒಂದು ಮುಖ" ಎಂದೂ ಒಬ್ಬರು ಹೇಳಿದ್ದಾರೆ.



ವ್ಯಂಗ್ಯಚಿತ್ರ : ಸತೀಶ ಆಚಾರ್ಯ@ ಫೇಸ್‌ಬುಕ್

ನೌಕಾ ಪಡೆಯ ಹಿಂದಿನ ಮುಖ್ಯಸ್ಥ ದಿವಂಗತ ರಾಮ್‌ದಾಸ್ ಅವರ ಪತ್ನಿ ಲಲಿತಾ ರಾಮ್‌ದಾಸ್ ಅವರು ಹಿಮಾಂಶಿ ಅವರಿಗೆ ಪತ್ರ ಬರೆದು "ನೀವು ಧೀರ ಸೈನಿಕನಿಗೆ ತಕ್ಕ ಪತ್ನಿ" ಎಂದು ಶ್ಲಾಘಿಸಿರುವುದನ್ನು ಪರಂಜೋಯ್ ಗುಹ ಥಾಕುರ್ತಾ ಪತ್ರದ ಮೂಲಕ ಹಂಚಿಕೊಂಡು ಹಿಮಾಂಶಿ ಅವರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದಾರೆ.


ಇವೆಲ್ಲದರ ನಡುವೆ ಕೇಂದ್ರದ ಗೃಹ ಸಚಿವ ಅಮಿತ್ ಶಾ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ತಣ್ಣಗೆ ಕುಳಿತು ಒಳಗೊಳಗೆ ಪುಳಕ ಹೊಂದುತ್ತಿದ್ದಾರೇನೋ! ಇಲ್ಲದಿದ್ದರೆ ಕಾವಿ ಪಡೆಯೊಳಗಿನ ಈ ಬಾಯಿ–ಭಯೋತ್ಪಾದಕರ ಬಾಯಿ ಮುಚ್ಚಿಸುವುದು ಇವರಿಗೆ ಆಗದ ಕೆಲಸವೇನಲ್ಲ.

ಭಯೋತ್ಪಾದನೆಗಿಂತ ದೊಡ್ಡ ಪ್ರಜಾಪ್ರಭುತ್ವದ ತಣ್ಣಗಿನ ಕೊಲೆ ಇದು!



ವ್ಯಂಗ್ಯಚಿತ್ರ : ಮಂಜುಲ್ @ಮಂಜುಲ್‌ಟೂನ್ಸ್

ಭಯೋತ್ಪಾದಕರನ್ನೂ ಮೀರಿಸಿದ ಕಾವಿ ಟ್ರೋಲಿಗರು



ವ್ಯಂಗ್ಯಚಿತ್ರ : ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

ಬಿಜೆಪಿ ಸಂಸದನ ಹಾಸ್ಯಾಸ್ಪದ ಟಿಪ್ಪಣಿಗಳು ನಿಂದನಾ ಕ್ರಮಕ್ಕೂ ಯೋಗ್ಯವಲ್ಲ– ಸರ್ವೋಚ್ಚ ನ್ಯಾಯಾಲಯದ ತೀಕ್ಷ್ಣ ಲೇವಡಿ

ವಕ್ಫ್ ತಿದ್ದುಪಡಿ ಕಾಯ್ದೆಗೆ ಸವಾಲಿನ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರಿಂ ಕೋರ್ಟಿನ ಪೀಠ ಕಾಯ್ದೆಯ ಕೆಲವು ಅಂಶಗಳಿಗೆ ತಡೆ ಹಾಕುವ ವಿಷಯದಲ್ಲಿ ಹೇಳಿದ ಕೆಲವು ಮಾತುಗಳ ಬಗ್ಗೆ ಬಿಜೆಪಿಯ ಸಂಸದ ನಿಶಿಕಾಂತ್ ದುಬೆ ಮಾಡಿರುವ ಟಿಪ್ಪಣಿಗಳು ಬೇಜವಾಬ್ದಾರಿ, ಅಸಂಬದ್ಧ, ಇದರಲ್ಲಿ ನ್ಯಾಯಾಲಯ ಮತ್ತು ನ್ಯಾಯಾಧೀಶರನ್ನು ದೂಷಿಸುವ ಉದ್ದೇಶಪೂರ್ವಕ ಆಶಯ ಸ್ಪಷ್ಟವಾಗಿ ಕಾಣುತ್ತಿದ್ದರೂ, ಇಂತಹ ಹಾಸ್ಯಾಸ್ಪದ ಟಿಪ್ಪಣಿಗಳು ನಿಂದನಾ ಕ್ರಮಗಳಿಗೂ ಯೋಗ್ಯವಲ್ಲ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಟಿಪ್ಪಣಿ ಮಾಡಿದೆ.

ನ್ಯಾಯಾಲಯಗಳು ಹೂಗಳಷ್ಟು ನಾಜೂಕಲ್ಲ, ಇಂತಹ ಹಾಸ್ಯಾಸ್ಪದ ಹೇಳಿಕೆಗಳಿಂದೇನೂ ಅವು ಮುದುಡಿ ಹೋಗುವುದಿಲ್ಲ ಎಂದೂ ಅದು ಮಾರ್ಮಿಕವಾಗಿ ಹೇಳಿದೆ.

ದೇಶದ ಮುಖ್ಯ ನ್ಯಾಯಾಧೀಶರು ಭಾರತದಲ್ಲಿ ಸಂಭವಿಸುತ್ತಿರುವ ಎಲ್ಲ ಅಂತರ್ಯುದ್ಧಕ್ಕೆ ಹೊಣೆಗಾರರು, ಸರ್ವೋಚ್ಚ ನ್ಯಾಯಾಲಯ ದೇಶದಲ್ಲಿ ಮತೀಯ ಯುದ್ಧಗಳನ್ನು ಉದ್ರೇಕಿಸುವುದಕ್ಕೆ ಹೊಣೆಗಾರರಾಗುತ್ತಾರೆ ಎಂದೆಲ್ಲಾ ಹೇಳಿದ್ದರು.

ಭಾರತದಲ್ಲಿ ಅಂತರ್ಯುದ್ಧ ನಡೆಯುತ್ತಿಲ್ಲ ಎಂದಿರುವ ನ್ಯಾಯಪೀಠ, ದುಬೆಯರ ಟಿಪ್ಪಣಿಗಳು ಸಂವಿಧಾನಿಕ ನ್ಯಾಯಪೀಠಗಳ ಪಾತ್ರದ ಬಗ್ಗೆ ಮತ್ತು ಸಂವಿದಾನ ಅವುಗಳ ಮೇಲೆ ವಿಧಿಸಿರುವ ಕರ್ತವ್ಯಗಳು ಮತ್ತು ಬಾಧ್ಯತೆಗಳ ಬಗ್ಗೆ ಅಜ್ಞಾನವನ್ನು ಪ್ರದರ್ಶಿಸುತ್ತವೆ ಎಂದೂ ಹೇಳಿತು.

ದ್ವೇಷ ಭಾಷಣಗಳು ಸಲ್ಲದು ಎನ್ನುತ್ತ, ಇದರ ವಿರುದ್ಧ ಕಟ್ಟುನಿಟ್ಟಾಗಿ ವರ್ತಿಸಬೇಕು, ಯಾವುದೇ ಗುಂಪಿನ ಮೇಲೆ ಗುರಿಯಿಟ್ಟು ಅವರಲ್ಲಿ ಪರಕೀಯಭಾವ ಉಂಟುಮಾಡುವುದು ಅಥವ ಅವಮಾನಿಸುವುದು ಒಂದು ಶಿಕ್ಷಾರ್ಹ ಅಪರಾಧ ಎಂದೂ ನ್ಯಾಯಪೀಠ ಈ ಸಂದರ್ಭದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಸುಪ್ರಿಂ ಕೋರ್ಟ್ ಬಾರ್ ಅಸೋಸಿಯೇಷನ್ ಮತ್ತು ಇತರ ಹಲವು ವಕೀಲರು ಕೂಡ ದುಬೆಯವರ ವಿರುದ್ಧ ನ್ಯಾಯಾಂಗ ನಿಂದನೆಗೆ ಸಮ್ಮತಿ ನೀಡಬೇಕು ಎಂದು ಅಟಾರ್ನಿ ಜನರಲ್‌ಗೆ ಪತ್ರ ಬರೆದಿದ್ದಾರೆ. ಆದರೆ ಈ ವಿಷಯದಲ್ಲಿ ಇನ್ನೂ ಯಾವುದೇ ನಿರ್ಧಾರಕ್ಕೆ ಬಂದಿಲ್ಲ ಎಂದೂ ವರದಿಯಾಗಿದೆ. ಇದು ಈ ಸಂಸದ ಕೇಂದ್ರ ಸರಕಾರದ ಅತ್ಯುನ್ನತ ಸ್ಥಾನಗಳಲ್ಲಿ ಇರುವವರ ಆಯ್ದ ತುತ್ತೂರಿಗಳೇ ಎಂಬ ಸಂದೇಹಕ್ಕೆ ಎಡೆ ಮಾಡಿ ಕೊಟ್ಟಿದೆ.



ಅಮೆರಿಕವು ಭಾರತದ ವಿರುದ್ಧ ಸುಂಕಗಳನ್ನು ಹೆಚ್ಚಿಸದಿರುವುದಕ್ಕೆ ಪ್ರತಿಯಾಗಿ ಅಮೆರಿಕದ ಸರಕುಗಳಿಗೆ ಭಾರತವು ತನ್ನ ಸುಂಕಗಳನ್ನು ಕಡಿಮೆ ಮಾಡಲು ಒಪ್ಪಿಕೊಂಡಿರುವುದರಿಂದಾಗಿ, ಆಹಾರ ಧಾನ್ಯ ಉತ್ಪಾದಕರು ಇಲ್ಲಿಯವರೆಗೆ ಪಡೆಯುತ್ತಿದ್ದ ಪ್ರಮಾಣದ ಬೆಲೆ ರಕ್ಷಣೆಯು ಇನ್ನು ಮುಂದೆ ಅವರಿಗೆ ಸಿಗುವುದಿಲ್ಲ ಎಂಬದೇ ಇದರ ಅರ್ಥ. ಈ ಮಾತುಕತೆಗಳ ಫಲಿತಾಂಶವಾಗಿ ಅಮೆರಿಕದ ಸರಕುಗಳಿಗೆ ಭಾರತವು ವಿಧಿಸುವ ಸುಂಕ ದರಗಳನ್ನು ಕೆಳಗಿಳಿಸಲಾಗುತ್ತದೆ ಮತ್ತು ತನ್ನ ಆಹಾರ ಧಾನ್ಯಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗಳನ್ನು (ಅವು ನಿಜಕ್ಕೂ ಅಸ್ತಿತ್ವದಲ್ಲಿದ್ದರೆ) ಕಡಿಮೆ ಮಾಡಬೇಕಾಗುತ್ತದೆ ಮತ್ತು ಅಮೆರಿಕನ್ ಧಾನ್ಯಗಳು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಭಾರೀ ಸಬ್ಸಿಡಿ (ವರಮಾನ ವರ್ಗಾವಣೆಯ ಮೂಲಕ) ಹೊಂದಿರುವ ತನ್ನ ಧಾನ್ಯಗಳನ್ನು ಭಾರತಕ್ಕೆ ರಫ್ತು ಮಾಡುವ ಅಮೆರಿಕದ ಬಹುದಿನಗಳ ಕನಸು, ಹಸಿರು ಕ್ರಾಂತಿಯ ನಂತರ ಈಡೇರದ ಈ ಕನಸು, ಅಂತಿಮವಾಗಿ ನನಸಾಗುತ್ತದೆ. ಅಮೆರಿಕದ ಸರಕುಗಳಿಗೆ ವಿಧಿಸುವ ಸುಂಕಗಳನ್ನು ಕಡಿತಮಾಡುವ ಭಾರತದ ಕ್ರಮವು ರೈತರ ಹಿತಾಸಕ್ತಿಗೆ ಹಾನಿಕಾರಕವಾಗುತ್ತದೆ. ಆದ್ದರಿಂದ, ಭಾರತವು ಅಮೆರಿಕದ ಜೊತೆ ವ್ಯಾಪಾರ ಮಾತುಕತೆಗಳಿಗೆ ಒಪ್ಪುವ ಸಂಗತಿಯೇ ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ಅಮೆರಿಕದ ಸರಕುಗಳಿಗೆ ಸುಂಕ-ಕಡಿತ ರೈತರ ಹಿತಾಸಕ್ತಿಗೆ ಮಾರಕ





ಅರ್ಥಶಾಸ್ತ್ರದ ಪ್ರಾಥಮಿಕ ಪಠ್ಯಪುಸ್ತಕಗಳು ಸದಾ ಒಂದು ಪೂರ್ಣ ಅವಾಸ್ತವಿಕ ಪರಿಕಲ್ಪನೆಯೊಂದಿಗೇ ಆರಂಭವಾಗುತ್ತವೆ. ಅವುಗಳಲ್ಲಿ "ಪರಿಪೂರ್ಣ ಪೈಪೋಟಿ" ಎಂಬ ಪರಿಕಲ್ಪನೆಯೂ ಒಂದು. ಇದು ಅಗ್ರ ಪಂಕ್ತಿಯ ಅರ್ಥಶಾಸ್ತ್ರಜ್ಞರು ಮತ್ತು ಮಾರ್ಕ್ಸ್ ಬಳಸಿದ "ಮುಕ್ತ ಪೈಪೋಟಿ" ಎಂಬ ಪರಿಕಲ್ಪನೆಗಿಂತಲೂ ಭಿನ್ನವಾಗಿದೆ. ಪರಿಕಲ್ಪನೆಯಲ್ಲಿ ಎಲ್ಲ ವಲಯಗಳಲ್ಲೂ ವೇತನಗಳ ಸಮಾನತೆ (ಸಮಾನ ಕೌಶಲ್ಯಕ್ಕೆ) ಮತ್ತು ಲಾಭ-ದರಗಳ ಸಮಾನತೆ "ಮುಕ್ತ ಪೈಪೋಟಿ"ಯ ಲಕ್ಷಣ ಎಂದು ನಿರೂಪಿಸಲಾಗುತ್ತದೆ. "ಮುಕ್ತ ಪೈಪೋಟಿ"ಯು ವಾಸ್ತವಗೊಳ್ಳಲು ಶ್ರಮ ಶಕ್ತಿ ಮತ್ತು ಬಂಡವಾಳ ಇವು ಎಲ್ಲ ವಲಯಗಳಲ್ಲೂ ಮುಕ್ತವಾಗಿ ಹರಿದಾಡುವ ಅವಕಾಶವನ್ನು ಹೊಂದಿರಬೇಕಾಗುತ್ತದೆ. ಏಕಸ್ವಾಮ್ಯ-ಪೂರ್ವ ಯುಗದಲ್ಲಿ ಇದು ಸಂಭವಿಸಬಹುದಿತ್ತೇನೋ. "ಮುಕ್ತ ಪೈಪೋಟಿ"ಗೆ ತದ್ವಿರುದ್ಧವಾಗಿ "ಪರಿಪೂರ್ಣ ಪೈಪೋಟಿ"ಯಲ್ಲಿ ಶೂನ್ಯ ಲಾಭ ಎಂಬುದು ಒಂದು ಹೆಚ್ಚುವರಿ ಲಕ್ಷಣ. ಆದರೆ ಅದು ಕೇವಲ ಒಂದೇ ಒಂದು ಸನ್ನಿವೇಶದಲ್ಲಿ ಮಾತ್ರ ಸಂಭವಿಸಬಹುದು: ಯಾವುದೇ ಒಂದು ವಲಯದಲ್ಲಿ ಲಾಭಗಳು ಧನಾತ್ಮಕವಾಗಿದ್ದಾಗ ಎಷ್ಟೊಂದು ಬಂಡವಾಳಗಾರರು ಆ ವಲಯಕ್ಕೆ ನುಗ್ಗುತ್ತಾರೆಂದರೆ, ಧನಾತ್ಮಕ ಲಾಭಗಳು ಕಣ್ಮರೆಯಾಗುತ್ತವೆ. ಅದಕ್ಕಾಗಿ ವಲಯಗಳಾದ್ಯಂತ ಶ್ರಮಶಕ್ತಿಯ ಮತ್ತು ಬಂಡವಾಳದ ಮುಕ್ತ ಹರಿದಾಟಕ್ಕೆ ಅವಕಾಶವಿರಬೇಕಾಗುತ್ತದೆ ಮಾತ್ರವಲ್ಲದೆ, ಬಂಡವಾಳಶಾಹಿಗಳ ಸಾಲಿಗೆ ಏರುವ ಅವಕಾಶವೂ ಮುಕ್ತವಾಗಿರಬೇಕಾಗುತ್ತದೆ. ಅಂದರೆ, ಲಾಭಗಳು ಧನಾತ್ಮಕವಾಗಿದ್ದ ಸನ್ನಿವೇಶದಲ್ಲಿ ಕಾರ್ಮಿಕರೂ ಸಹ ಬಂಡವಾಳಗಾರರಾಗಿ ಮಾರ್ಪಡಬಹುದು. ಆದ್ದರಿಂದ, ಒಂದು "ಪರಿಪೂರ್ಣ ಪೈಪೋಟಿ"ಯ ಪರಿಸ್ಥಿತಿಯು ಶ್ರಮಶಕ್ತಿಯ ಮತ್ತು ಬಂಡವಾಳದ ಮುಕ್ತ ಹರಿದಾಟವು ಪರಿಪೂರ್ಣವಾಗಿದೆ, ಅಂದರೆ, ಸಮಾಜವು ವರ್ಗರಹಿತವಾಗಿದೆ ಎಂಬ ಊಹನೆಯ ಮೇಲೆ ನಿಂತಿದೆ. ಒಂದು ಬಂಡವಾಳಶಾಹಿ ಸಮಾಜದಲ್ಲಿ ಇಂಥಹ ಒಂದು ಪರಿಸ್ಥಿತಿಯನ್ನು ಊಹಿಸಿಕೊಳ್ಳುವುದು ಅಸಂಬದ್ಧವಾಗುತ್ತದೆ. ಆದ್ದರಿಂದ, ಪ್ರಸ್ತುತ ಸಂದರ್ಭದಲ್ಲಿ ಇದೊಂದು ಸಂಪೂರ್ಣ ಅವಾಸ್ತವಿಕ ಪರಿಕಲ್ಪನೆಯಾಗುತ್ತದೆ. ಆದಾಗ್ಯೂ, ಈ "ಪರಿಪೂರ್ಣ ಸ್ಪರ್ಧೆ"ಯ ಅಡಿಯಲ್ಲಿ ಚಾಲ್ತಿಯಲ್ಲಿರುವ ಬೆಲೆಗಳು ಸಮತೋಲನದಲ್ಲಿರಲು ಕೆಲವು ಗರಿಷ್ಠ ಪ್ರಮಾಣದ ಗುಣಗಳನ್ನು ಹೊಂದಿರಬೇಕಾಗುತ್ತದೆ. ಅವು ಚಾಲ್ತಿಯಲ್ಲಿದ್ದರೆ, ಅದಕ್ಕೆ ಯಾವುದೇ ಚ್ಯುತಿ ಬರುವುದು ಸೂಕ್ತವಲ್ಲ.

ಆದಾಗ್ಯೂ, ಅಂತಾರಾಷ್ಟ್ರೀಯ ವ್ಯಾಪಾರ ನಿಯಮಗಳನ್ನು ಹೊಸದಾಗಿ ವಿನ್ಯಾಸಗೊಳಿಸುವಾಗ, ವಿಶ್ವ ವ್ಯಾಪಾರ ಸಂಘಟನೆಯು ವಾಸ್ತವಿಕವಾಗಿ ಜಗತ್ತಿನಲ್ಲಿ ನಿಜಕ್ಕೂ ಇಂತಹ "ಪರಿಪೂರ್ಣ ಪೈಪೋಟಿ"ಯ ಸ್ಥಿತಿಯೇ ಚಾಲ್ತಿಯಲ್ಲಿದೆ, ಆದ್ದರಿಂದ ವಾಸ್ತವಿಕವಾಗಿ ಇರುವಂತಹ ಬೆಲೆಗಳಲ್ಲಿ ಯಾವುದೇ ಚ್ಯುತಿ ಬರದಂತೆ ತಪ್ಪಿಸಬೇಕು ಎಂಬ ಸಂಪೂರ್ಣವಾಗಿ ಅಕ್ರಮವಾದ ಊಹನೆಯನ್ನು ಆಧರಿಸಿದೆ. ಈ ಪ್ರಕಾರವಾಗಿ, ಬೆಲೆ ಬೆಂಬಲದ ಮೂಲಕ ಯಾವುದೇ ವಲಯದ ಉತ್ಪಾದಕರಿಗೆ ನೀಡಲಾಗುವ ಯಾವುದೇ ಸಬ್ಸಿಡಿಗಳನ್ನು ಅವು "ವ್ಯಾಪಾರವನ್ನು-ವಿರೂಪಗೊಳಿಸುವ" ಪರಿಣಾಮ ಹೊಂದಿವೆ ಎಂಬ ನೆಲೆಯಲ್ಲಿ ತಪ್ಪಿಸಬೇಕು ಎಂಬ ಒಂದು ಷರತ್ತನ್ನು ಅದು ವಿಧಿಸಿತು. ಆದರೆ, ಅದೇ ಉತ್ಪಾದಕರಿಗೆ ಆದಾಯ ವರ್ಗಾವಣೆಯ ರೂಪದಲ್ಲಿ ನೀಡಲಾಗುವ ಸಬ್ಸಿಡಿಗಳಿಗೆ ಸಂಪೂರ್ಣ ಅನುಮತಿ ಕೊಡಲಾಗಿದೆ.

ಅಸಂಬದ್ಧ ಷರತ್ತು

ಇಂದಿನ ವಾಸ್ತವ ಜಗತ್ತಿನಲ್ಲಿ ಏಕಸ್ವಾಮ್ಯವಾದಿಗಳ ಲಾಭಾಂಶಗಳನ್ನು ನಿಯಂತ್ರಿಸುವ ಯಾವುದೇ ಪ್ರಯತ್ನವನ್ನು ಅದು ಬೆಲೆಗಳನ್ನು ವಿಕೃತಗೊಳಿಸುತ್ತದೆ ಮತ್ತು ವ್ಯಾಪಾರವನ್ನು ವಿಕೃತಗೊಳಿಸುತ್ತದೆ ಎಂಬ ನೆಲೆಯಲ್ಲಿ ಹತ್ತಿಕ್ಕಲಾಗುತ್ತದೆ ಎಂಬ ಅಂಶವು ಬೆಲೆ ಬೆಂಬಲದ ಸಬ್ಸಿಡಿಗಳನ್ನು ತಪ್ಪಿಸುವ ಈ ಷರತ್ತು ಅದೆಷ್ಟು ಅಸಂಬದ್ಧವಾಗಿದೆ ಎಂಬುದನ್ನು ತೋರಿಸುತ್ತದೆ. ಆದರೆ, ವಾಸ್ತವ ಜಗತ್ತಿನಲ್ಲಿ "ಪರಿಪೂರ್ಣ ಪೈಪೋಟಿ" ಇದೆ ಎಂಬ ನೆಪವನ್ನು ಮತ್ತು ಇಂದಿನ ಜಗತ್ತಿನಲ್ಲಿ ಈಗಿರುವ ಬೆಲೆಗಳು ಒಂದು ನಿರ್ದಿಷ್ಟ ಅರ್ಥದಲ್ಲಿ ಸೂಕ್ತವಾಗಿರುವುದರಿಂದ ಅವುಗಳಲ್ಲಿ ಯಾವುದೇ ಹಸ್ತಕ್ಷೇಪವಿರಬಾರದು ಎಂಬುದನ್ನು ಆಧರಿಸಿದ ಇಂತಹ ಒಂದು ಅಸಂಬದ್ಧ ಷರತ್ತನ್ನು ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದವನ್ನು ತಲುಪುವ ಸಂದರ್ಭದಲ್ಲಿ ಜಾಗತಿಕ ದಕ್ಷಿಣದ ದೇಶಗಳ ಗಂಟಲಿನಲ್ಲಿ ತುರುಕಿಸಲಾಯಿತು ಎಂಬುದು ಆಶ್ಚರ್ಯಕರವಾಗಿ ತೋರುತ್ತದೆ. ಈ ಮರ್ಮವನ್ನು ಈ ದೇಶಗಳು ಅರ್ಥಮಾಡಿಕೊಳ್ಳಬೇಕಿತ್ತು. ಆದರೆ, ಈ ದೇಶಗಳನ್ನು ದಬಾಯಿಸಲಾಯಿತು. ಸಹಜವಾಗಿಯೇ ಅದರ ಫಲಿತಾಂಶವಾಗಿ ಭಾರತದ ರೈತ ಕೃಷಿಯ ಮೇಲೆ ದಾಳಿ.

ಮುಂದುವರಿದ ಬಂಡವಾಳಶಾಹಿ ದೇಶಗಳು ತಮ್ಮ ಕೃಷಿಕರಿಗೆ ಅಗಾಧ ಪ್ರಮಾಣದ ಸಬ್ಸಿಡಿಗಳನ್ನು ನೀಡುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಆದರೆ, ಈ ಸಬ್ಸಿಡಿಗಳು ಅವರು ಮಾರಾಟ ಮಾಡುವ ಸರಕುಗಳ ಬೆಲೆಗಳ ಮೂಲಕವಲ್ಲ, ಬದಲಾಗಿ ನೇರ ವರಮಾನ ವರ್ಗಾವಣೆಯ ರೂಪದಲ್ಲಿವೆ. ಅಮೆರಿಕದಲ್ಲಿ ಮತ್ತು ಯುರೋಪಿನ ಒಕ್ಕೂಟದಲ್ಲಿ ಇಂತಹ ಸಬ್ಸಿಡಿಗಳು ಕೃಷಿ ಉತ್ಪನ್ನಗಳ ಒಟ್ಟು ಮೌಲ್ಯದ ಸುಮಾರು ಅರ್ಧದಷ್ಟಿರುತ್ತವೆ. ಜಪಾನ್‌ನಲ್ಲಿ ಅವು ಉತ್ಪನ್ನಗಳ ಮೌಲ್ಯಕ್ಕೆ ಬಹುತೇಕ ಸಮಾನವಾಗಿವೆ. ಅವುಗಳ ಅಗಾಧತೆಯ ಹೊರತಾಗಿಯೂ, ವಿಶ್ವ ವ್ಯಾಪಾರ ಸಂಘಟನೆಯು ಈ ಸಬ್ಸಿಡಿಗಳ ಬಗ್ಗೆ ಚಕಾರ ಎತ್ತುವುದಿಲ್ಲ. ಏಕೆಂದರೆ ಅವುಗಳನ್ನು "ಬೆಲೆ-ವಿಕೃತಗೊಳಿಸದವು" ಎಂದು ಅದು ಪರಿಗಣಿಸುತ್ತದೆ ಮತ್ತು ಈ ಜಗತ್ತಿನಲ್ಲಿ ಒಂದು ಪರಿಪೂರ್ಣ ಪೈಪೋಟಿ ಇರುವುದರಿಂದ ಅದನ್ನೊಂದು ಸದ್ಗುಣ ಎಂದು ಭಾವಿಸಲಾಗಿದೆ. (ಇದು ಸೈದ್ಧಾಂತಿಕವಾಗಿಯೂ ಸಹ ತಪ್ಪೇ. ಏಕೆಂದರೆ "ಪರಿಪೂರ್ಣ ಪೈಪೋಟಿ" ಇರುವ ಒಂದು ಅರ್ಥವ್ಯವಸ್ಥೆಯಲ್ಲಿ, ನೇರ ವರಮಾನ ವರ್ಗಾವಣೆಗಳು, ಕೆಲಸ ಮತ್ತು ವಿರಾಮದ ನಡುವಿನ ಸಾಪೇಕ್ಷ ಬೆಲೆಯನ್ನು ವಿಕೃತಗೊಳಿಸುತ್ತವೆ. ಆದ್ದರಿಂದ ಕಟ್ಟುನಿಟ್ಟಾಗಿ "ಬೆಲೆ-ವಿಕೃತಗೊಳಿಸದವು" ಅಲ್ಲ. ಇಲ್ಲಿ ನಾವು ಅದನ್ನು ನಿರ್ಲಕ್ಷಿಸೋಣ). ಆದರೆ, ಭಾರತದಂತಹ ಒಂದು ದೇಶದಲ್ಲಿ ಸರ್ಕಾರವು ರೈತರಿಗೆ ಬೆಲೆ-ಬೆಂಬಲವನ್ನು ಒದಗಿಸುತ್ತದೆ. ಅಂದರೆ, ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ರೈತರಿಗೆ ಸಬ್ಸಿಡಿ ನೀಡುತ್ತದೆ (ಕನಿಷ್ಠ ಬೆಂಬಲ ಬೆಲೆಯ ಮೂಲಕ ಅಥವಾ ಖರೀದಿ ಬೆಲೆಯ ಮೂಲಕ). ಇಂಥಹ ಒಂದು ಕ್ರಮವನ್ನು ಮುಂದುವರಿದ ಬಂಡವಾಳಶಾಹಿ ದೇಶಗಳು ಆಕ್ಷೇಪಿಸುತ್ತವೆ ಮತ್ತು ಈ ಸಬ್ಸಿಡಿಗಳು ಬೆಲೆಗಳನ್ನು ವಿಕೃತಗೊಳಿಸುತ್ತವೆ, ಆ ಮೂಲಕ ವ್ಯಾಪಾರವನ್ನು ವಿಕೃತಗೊಳಿಸುತ್ತವೆ, ಆದ್ದರಿಂದ ಈ ಕ್ರಮ ತಪ್ಪು ಎನ್ನುತ್ತವೆ. ಮುಂದುವರಿದ ಬಂಡವಾಳಶಾಹಿ ದೇಶಗಳ ಸಬ್ಸಿಡಿಗಳನ್ನು ಅನುಮೋದಿಸುವ ವಿಶ್ವ ವ್ಯಾಪಾರ ಸಂಘಟನೆ ಭಾರತದಂತಹ ದೇಶಗಳ ಈ ಕ್ರಮವನ್ನು ಆಕ್ಷೇಪಿಸುತ್ತದೆ ಮತ್ತು ತಪ್ಪು ಎನ್ನುತ್ತದೆ.

"ಬೆಲೆ-ವಿಕೃತಗೊಳಿಸದ" ಸಬ್ಸಿಡಿ ಎಂಬ ನೆಪ

"ಬೆಲೆ-ವಿಕೃತಗೊಳಿಸದ" ಸಬ್ಸಿಡಿಗಳ ಮೇಲಿನ ಈ ಒತ್ತಾಯ ಸೈದ್ಧಾಂತಿಕವಾಗಿ ಆಧಾರರಹಿತವಾದುದು ಮತ್ತು ಅದು ಕಾರ್ಯಸಾಧ್ಯವಾದುದೂ ಅಲ್ಲ. ಏಕೆಂದರೆ ಈ ಜಗತ್ತು ಒಂದು "ಪರಿಪೂರ್ಣ ಪೈಪೋಟಿಯ ಅರ್ಥವ್ಯವಸ್ಥೆ"ಗೆ ಅನುಗುಣವಾಗಿಲ್ಲ. ಅಮೆರಿಕದಲ್ಲಿ ರೈತರ ಸಂಖ್ಯೆಯು ಕೆಲವೇ ಕೆಲವು ಸಾವಿರ ಇರುವುದರಿಂದ ಅಲ್ಲಿಯ ಸರ್ಕಾರವು ಅವರಿಗೆ ವರಮಾನ ಬೆಂಬಲವನ್ನು ಒದಗಿಸಬಹುದು. ಆದರೆ ಹತ್ತು ಕೋಟಿಗಿಂತಲೂ ಹೆಚ್ಚು ಸಂಖ್ಯೆಯ ರೈತ ಕುಟುಂಬಗಳನ್ನು ಹೊಂದಿರುವ ಭಾರತದಂತಹ ಒಂದು ಅರ್ಥವ್ಯವಸ್ಥೆಯಲ್ಲಿ, ಪ್ರತಿ ಕುಟುಂಬಕ್ಕೂ ವರಮಾನ ಬೆಂಬಲವನ್ನು ಒದಗಿಸುವುದು ಕಾರ್ಯಸಾಧ್ಯವಲ್ಲ. ಅಷ್ಟೊಂದು ಸಂಖ್ಯೆಯ ರೈತರಿಗೆ ಬೆಂಬಲ ನೀಡುವ ಏಕೈಕ ಮಾರ್ಗವೆಂದರೆ ಅದು ಎಲ್ಲರಿಗೂ ಅನ್ವಯವಾಗುವ ಒಂದು ಸೂಕ್ತ ಲಾಭದಾಯಕ ಬೆಲೆ ಕಾರ್ಯವಿಧಾನದ ಮೂಲಕವೇ. ಬೆಲೆಗಳ ಬದಲು ವರಮಾನ ಮೂಲಕ ಮಾತ್ರವೇ ಬೆಂಬಲ ಒದಗಿಸಬೇಕೆಂದು ಪಟ್ಟುಹಿಡಿಯುವುದು, ವಾಸ್ತವವಾಗಿ, ಭಾರತದಂತಹ ದೇಶಗಳಲ್ಲಿ ರೈತರಿಗೆ ನೀಡುವ ಎಲ್ಲ ಬೆಂಬಲವನ್ನೂ ರದ್ದುಗೊಳಿಸಬೇಕೆಂಬ ಒಂದು ಒತ್ತಾಯವಾಗುತ್ತದೆ.

ಭಾರತದಲ್ಲಿ ವಾಣಿಜ್ಯ ಬೆಳೆ ಬೆಳೆಗಾರರಿಗೆ ಸಂಬಂಧಿಸಿದಂತೆ ಇದು ನಿಜಕ್ಕೂ ಸಂಭವಿಸಿದೆ: ಅವರಿಗೆ ಮೊದಲು ಲಭ್ಯವಿದ್ದ ಬೆಲೆ ಬೆಂಬಲವು ಈಗ ಲಭ್ಯವಿಲ್ಲ. ನವ ಉದಾರವಾದಿ ಆಳ್ವಿಕೆಯನ್ನು ಜಾರಿಗೆ ತರುವ ಮೊದಲು, ಜಾಗತಿಕ ಬೆಲೆ ಕುಸಿತದ ವರ್ಷಗಳಲ್ಲಿ, ಚಹಾ ಮಂಡಳಿ, ಕಾಫಿ ಮಂಡಳಿ, ನಾರು ಮಂಡಳಿ ಮುಂತಾದ ವಿವಿಧ ಸರ್ಕಾರಿ ಸಂಸ್ಥೆಗಳು ರೈತರ ಬೆಳೆಗಳನ್ನು ಜಾಗತಿಕ ಬೆಲೆಗಳಲ್ಲಿ ಖರೀದಿಸುವ ಮೂಲಕ ದೇಶೀಯ ಬೆಲೆಗಳನ್ನು ಬೆಂಬಲಿಸುತ್ತಿದ್ದವು ಮತ್ತು ಇದನ್ನು ಸಾಧ್ಯವಾಗಿಸಲು ಪುಟ 15 ಕ್ಕೆ

ಕಾಮ್ರೇಡ್ ಕೆ.ಎಲ್. ಭಟ್ ನಿಧನ: ವೈದ್ಯಕೀಯ ಸಂಶೋಧನೆಗೆ ದೇಹ ದಾನ ಕಮ್ಯೂನಿಸ್ಟ್ ಕಾರ್ಯಕರ್ತರಿಗೊಂದು ಮಾದರಿಯ ವ್ಯಕ್ತಿತ್ವ

ದಾವಣಗೆರೆಯಲ್ಲಿ ಮೇ 7 ರ ರಾತ್ರಿ ನಿಧನರಾದ ಕಾಮ್ರೇಡ್ ಕೆ.ಲಕ್ಷ್ಮೀನಾರಾಯಣ ಭಟ್ (ಕೆ.ಎಲ್.ಭಟ್) ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರಿಗೆ, ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ಹಲವು ವಿಧದಲ್ಲಿ ಮಾದರಿ ಹಾಕಿಕೊಟ್ಟ ಅಪರೂಪದ ಸಂಗಾತಿ..

ಕಾಮ್ರೇಡ್ ಕೆ.ಎಲ್ ಭಟ್ ಅವರು ತಮ್ಮ ಬದುಕಿನುದ್ದಕ್ಕೂ ಸ್ವತ: ವೈಜ್ಞಾನಿಕ ಮನೋಭಾವವನ್ನು ಅಳವಡಿಸಿಕೊಂಡಿದ್ದರು ಮಾತ್ರವಲ್ಲ ಸಮಾಜದಲ್ಲಿ ವೈಜ್ಞಾನಿಕ ವೈಚಾರಿಕಾ ಜಾಗೃತಿಯನ್ನು ಮೂಡಿಸಲು ಶ್ರಮಿಸಿದರು. ಜೀವ ವಿಕಾಸದ ಹಾದಿಯಲ್ಲಿ ಮನುಷ್ಯ ಜೀವ ಒಂದು ಅಪರೂಪದ ರೂಪಾಂತರ ಹೀಗಾಗಿ ನನ್ನ ಜೀವ ಹೋದ ಬಳಿ ನಮ್ಮ ದೇಹವನ್ನು ಮಣ್ಣಿನೊಳಗೆ ಮಣ್ಣಾಗಿಸುವ ಬದಲು ಭವಿಷ್ಯದ ಪೀಳಿಗೆಯ ಜನರಿಗೆ ನೆರವಾಗಬೇಕು ಆ ಮೂಲಕ ಮನುಷ್ಯ ಸಮಾಜದ ಬೆಳವಣಿಗೆಗೆ ಸಹಾಯವಾಗಬೇಕೆಂದು ಬಯಸಿ ವೈದ್ಯಕೀಯ ಸಂಶೋಧನೆಗಾಗಿ ತಮ್ಮ ದೇಹವನ್ನು ಮೀಸಲಿಟ್ಟಿದ್ದರು. ಮತ್ತು ತಮ್ಮ ಮರಣದ ಬಳಿಕ ಯಾವುದೇ ಧಾರ್ಮಿಕ ವಿಧಿವಿಧಾನಗಳನ್ನು ಅನುಸರಿಸಬಾರದೆಂದು ಸ್ವತಃ ಉಯಿಲು ಬರೆದಿದ್ದರು. ತಂದೆ ಆಶಯವನ್ನು ಗೌರವಿಸಿದ ಅವರ ಮಕ್ಕಳು ಮತ್ತು ಬಂಧು ಬಳಗವು ಕಾಮ್ರೇಡ್ ಕೆ.ಎಲ್ ಭಟ್ ಅವರ ಮೃತ ದೇಹವನ್ನು ದಾವಣಗೆರೆ ವೈದ್ಯಕೀಯ ಕಾಲೇಜಿಗೆ ನೀಡಿ ಅವರ ಆದರ್ಶವನ್ನು ಎತ್ತಿಹಿಡಿದರು.

ಅರವತ್ತರ ದಶಕದಲ್ಲಿ ಭಾರತೀಯ ಜೀವ ವಿಮಾ ನಿಗಮದಲ್ಲಿ ಓರ್ವ ಗುಮಾಸ್ತರಾಗಿ ದಾವಣಗೆರೆಯ ಶಾಖೆಯಲ್ಲಿ ಕೆಲಸಕ್ಕೆ ಸೇರಿ ನಿಗಮದಲ್ಲಿ ಒಬ್ಬ ಅಧಿಕಾರಿಯಾಗಿ ಬಡ್ತಿಹೊಂದಿ ನಿವೃತ್ತಿಯಾಗಬಹುದಾದ ಅವಕಾಶಗಳಿದ್ದಾಗಲೂ, ವರ್ಗಾವಣೆಗಳನ್ನು ತಿರಸ್ಕರಿಸಿ ಜನ ಚಳವಳಿ ಉದ್ದೇಶಗಳಿಗಾಗಿಯೇ ತಮ್ಮನ್ನು ಸಮರ್ಪಿಸಿಕೊಂಡವರು ಕಾಮ್ರೇಡ್ ಕೆ.ಎಲ್.ಭಟ್ ಅವರು. ವಿಮಾ ನೌಕರರ ಸಂಘದ ಮುಖಂಡರಾಗಿ ವಿಮಾ ರಂಗದಲ್ಲಿ 70 ದಶಕದಲ್ಲಿ ಜಾರಿಗೊಂಡ ಉದ್ಯೋಗ ಕಸಿಯುವ ಕಂಪೂಟರೀಕರಣ, ನೌಕರರ ಮೇಲೆ ನಡೆಯುತ್ತಿದ್ದ ಅನ್ಯಾಯಗಳ ವಿರುದ್ಧ ಹಾಗೂ ವಿಮಾ ಕಂಪನಿಗಳ ರಾಷ್ಟ್ರೀಕರಣಕ್ಕಾಗಿ ನಡೆಸಿದ ಚಳವಳಿಗಳನ್ನು ಯಶಸ್ವಿಗೊಳಿಸುವಲ್ಲಿ ಅಂದಿನ ಉಡುಪಿ ವಿಭಾಗದಲ್ಲಿ ಬಿ.ಮಾಧವ, ವಿಶ್ವನಾಥ್ ರೈ, ವಿ.ಎಸ್. ಆಚಾರ್ಯ, ಎ.ಎಸ್. ಮೂರ್ತಿ, ಡಿ.ಯಾಕೂಬ್ ಮೊದಲಾದವರ ಜತೆಗೂಡಿ ಪ್ರಮುಖ ಪಾತ್ರವನ್ನು ವಹಿಸಿದ್ದರು.

75 ರ ತುರ್ತು ಪರಿಸ್ಥಿತಿ ಬಳಿಕ ರಾಜ್ಯದಲ್ಲಿ ರೈತ ಕಾರ್ಮಿಕ ದಲಿತ ಮತ್ತಿತರೆ ಎಲ್ಲ ಜನಪರ ಚಳವಳಿಗಳ ಧ್ವನಿಯಾಗಿ ಒಡ ಮೂಡಿದ ಸಮುದಾಯ ಸಾಂಸ್ಕೃತಿಕ ಚಳವಳಿ ಅದು ಸಂಘಟಿದ್ದ ರಾಜ್ಯವ್ಯಾಪಿ ನಡೆಸಿದ ಬರ ವಿರುದ್ಧ, ಬೆಲ್ಚಿ ದಲಿತರ ಹತ್ಯಾಕಾಂಡ, ಚಂದ್ರಗುತ್ತಿಗೆ ಬೆತ್ತಲೆ ಪ್ರಕರಣ, ಕುದುರೆ ಮೋತಿ ಸ್ವಾಮಿ ಪ್ರಕರಣ ಮತ್ತು ಅಣು ಸಮರಕ್ಕೆ ತಡೆಯೊಡ್ಡುವ, ಯುದ್ಧ ವಿರೋಧಿ ಹಾಗೂ ವಿಶ್ವಶಾಂತಿಗಾಗಿ ನಡೆಸಲಾದ ಸಾಂಸ್ಕೃತಿಕ ಜಾತಾಗಳನ್ನು ಅವಿಭಜಿತ ಚಿತ್ರದುರ್ಗ, ದಾವಣಗೆರೆಯಲ್ಲಿ ಯಶಸ್ವಿಗೊಳಿಸುವಲ್ಲಿ ಅವರು ಶ್ರಮಿಸಿದ್ದರು. ಮಾನವ ವಿಕಾಸ ಹಾದಿಯನ್ನು ಆದಿ ಕಾಲದಿಂದ ಆಧುನಿಕ ಕೈಗಾರಿಕಾ ಕಾಲದವರೆಗೂ ನಂತರ ಅಣು ಸಮರದ ಬೆದರಿಕೆಯನ್ನು ತೆರೆದಿಡುವ ನೂರು ಅಡಿಗಳ ಬಣ್ಣದ ನಡೆ ಎನ್ನುವ ವಿಶಿಷ್ಟ ಕಲಾಕೃತಿಯೊಂದು ಸ್ವತ: ದಾವಣಗೆರೆಯ ಕಲಾವಿದರಾದ ಶ್ರೀ ಸೊಲಬಕ್ಕನವರ್ ಹಾಗೂ ಶ್ರೀ ಕರಿರಾಜು ಅವರ ನೇತೃತ್ವದಲ್ಲಿ ತಿಂಗಳಿಡಿ ರೂಪುಗೊಳ್ಳುವಲ್ಲಿ ಸಮುದಾಯ ಸಂಘಟನೆಯ ಕಾರ್ಯದರ್ಶಿ ಹಾಗೂ ಓರ್ವ ಕಾರ್ಯಕರ್ತನಾಗಿ ಕಾಮ್ರೇಡ್ ಕೆ.ಎಲ್ ಭಟ್ ಅವಿರತವಾಗಿ ಶ್ರಮಿಸಿದ್ದು ಈಗಲೂ ಅವರ ಒಡನಾಡಿಗಳ ಸ್ಮೃತಿಪಟದಿಂದ ಮಾಸಿಲ್ಲ.


80 ದಶಕದಲ್ಲಿ ನರಗುಂದದಿಂದ ಆರಂಭಗೊಂಡ ಐತಿಹಾಸಿಕ ರೈತ ಬಂಡಾಯ ಜಾತಾ, ವಿಜಯನಗರ ಉಕ್ಕು ಕರ್ನಾಟಕ ಹಕ್ಕಿಗಾಗಿ ಯುವಜನರು ನಡೆಸಿದ ಸೈಕಲ್ ಜಾತಾ, ಶೈಕ್ಷಣಿಕ ಸಮಸ್ಯೆಗಳಿಗಾಗಿ ವಿದ್ಯಾರ್ಥಿಗಳು ನಡೆಸಿದ ಹಲವು ಹೋರಾಟಗಳು, ಬ್ಯಾಂಕ್, ಅಂಚೆ ಹಾಗೂ ರೈಲ್ವೆ ನೌಕರರು ನಡೆಸಿದ ಹಲವು ಐತಿಹಾಸಿಕ ಹೋರಾಟಗಳನ್ನು ಯಶಸ್ವಿಗೊಳಿಸಲು ಹಾಗೂ ಸೌಹಾರ್ದ ಪ್ರದರ್ಶನಗಳನ್ನು ಸಂಘಟಿಸುವಲ್ಲಿ ಮಾತ್ರವಲ್ಲ ಅಗತ್ಯವಿರುವ ಹಣಕಾಸಿನ ನೆರವನ್ನು ಸಂಗ್ರಹಿಸುವಲ್ಲಿ ಅವರು ಸದಾ ಮುಂಚೂಣಿ ಪಾತ್ರ ವಹಿಸುತ್ತಿದ್ದರು.

ಒಬ್ಬ ಮಾದರಿ ಕಮ್ಯೂನಿಸ್ಟ್ ಕಾರ್ಯಕರ್ತ

ಕಾಮ್ರೇಡ್ ಕೆ.ಎಲ್. ಭಟ್ ಸ್ವತ: 80ರ ದಶಕದಿಂದಲೂ ಸಿಪಿಐ(ಎಂ) ಸದಸ್ಯರಾಗಿ, ಅವಿಭಜಿತ ಚಿತ್ರದುರ್ಗ–ದಾವಣಗೆರೆ ಜಿಲ್ಲಾ ಸಮಿತಿ ಸದಸ್ಯರಾಗಿ ಸಕ್ರಿಯವಾಗಿ ದುಡಿದರೂ ಎಂದೂ ಪಕ್ಷ ಹಾಗೂ ಅವರು ದುಡಿದ ಯಾವ ಸಂಘಟನೆಗಳಲ್ಲೂ ಅಧಿಕಾರಸ್ಥ ಸ್ಥಾನ ಮಾನಕ್ಕಾಗಿ ಹಾತೊರೆಯದೇ ಎಲೆಮರೆಯ ಕಾಯಿಯಾಗಿದ್ದುಕೊಂಡೇ ಎಲ್ಲ ಕಾರ್ಯಕ್ರಮಗಳನ್ನು, ಹೋರಾಟಗಳನ್ನು ಯಶಸ್ವಿಗೊಳಿಸಲು ಅತ್ಯಂತ ಬದ್ಧತೆಯಿಂದ ಶ್ರಮಿಸುತ್ತಿದ್ದರು. ಪಕ್ಷದ ಸದಸ್ಯನಾಗಿ ಪಕ್ಷದ ಕರ್ತವ್ಯಗಳನ್ನು ಜಾರಿಗೊಳಿಸಲು ಹಾಗೂ ಪಕ್ಷದ ನಾಯಕತ್ವ ನೀಡಿದ ಹೊಣೆಗಾರಿಕೆಗಳನ್ನು ನಿಭಾಯಿಸಲು ಹಗಲು ರಾತ್ರಿಗಳೆನ್ನದೇ ಶ್ರಮಿಸುತ್ತಾ ಓರ್ವ ಕಮ್ಯೂನಿಸ್ಟ್ ಪಕ್ಷದ ಪ್ರಾಮಾಣಿಕ ಸೈನಿಕನಂತಿದ್ದರು.

ನನಗೆ ತಿಳಿದಿರುವಂತೆ ಈಗಲೂ ಪಕ್ಷದ ಎಷ್ಟೋ ಸದಸ್ಯರು ತಮ್ಮ ಮಾಸಿಕ ಸಂಬಳವನ್ನು,ಆದಾಯವನ್ನು ನಿಖರವಾಗಿ ಘೋಷಿಸಿಕೊಳ್ಳವಲ್ಲಿ ಹಿಂದೇಟು ಹಾಕುವ ಪರಿಪಾಠವಿದೆ. ಆದರೆ ಕೆ.ಎಲ್. ಭಟ್ ಅವರು ಪಕ್ಷದ ಸದಸ್ಯರಾದ ತಿಂಗಳಿಂದಲೂ ಅವರ ಜೀವಿತವದಿವರೆಗೂ ಎಂದೂ ಪಕ್ಷಕ್ಕೆ ನೀಡಬೇಕಾದ ಮಾಸಿಕ ಲೆವಿ ನೀಡುವ ಪರಿಪಾಠದಿಂದ ಹಿಂದೆ ಸರಿಯಲಿಲ್ಲ ಮಾತ್ರವಲ್ಲ ವಾರ್ಷಿಕವಾಗಿ ಅಥವಾ ವೇತನ ಒಪ್ಪಂದದ ಬಳಿಕ ಏರಿಕೆಯಾಗುವ ವೇತನ ಬಳಿಕ ಪಿಂಚಣಿಗೆ ಅನುಗುಣವಾಗಿಯೇ ಪಕ್ಷಕ್ಕೆ ನೀಡಬೇಕಾದ ಮಾಸಿಕ ಲೆವಿ, ಚುನಾವಣೆ ನಿಧಿ ಸೇರಿ ಇತರೆ ಶುಲ್ಕಗಳನ್ನು ಅತ್ಯಂತ ನಿಖರವಾಗಿ ಲೆಕ್ಕ ಹಾಕಿ ಪಾವತಿಸುತ್ತಿದ್ದರು.

ಪಕ್ಷದ ಕೆಲಸಗಳಿಗೆ, ಪೂರ್ಣಾವಧಿ ಕಾರ್ಯಕರ್ತರ ವೇತನ ಭತ್ಯೆಗಳಿಗೆ ಸಾಮೂಹಿಕ ಸಂಘಟನೆಗಳನ್ನು ಬೆಳೆಸಲು ಅವಶ್ಯಕವಿದ್ದ ಹಣಕಾಸು ದೇಣಿಗೆಯನ್ನು ಸ್ವತ: ತಮ್ಮಿಂದ ಹಾಗೂ ತಮ್ಮ ಕುಟುಂಬದ ಸದಸ್ಯರಿಂದಲೇ ಆರಂಭಿಸಿದ್ದರು ಮತ್ತು ಸಾರ್ವಜನಿವಾಗಿ ಹಾಗೂ ಚಳವಳಿ ಹಿತೈಷಿಗಳಿಂದಲೂ ನಿರಂತವಾಗಿ ಸಂಗ್ರಹಿಸುವ ಕೆಲಸವನ್ನು ತಪ್ಪದೇ ಮಾಡುತ್ತಿದ್ದರು. ಒಂದೂವರೆ ದಶಕದ ಹಿಂದೆ ಅಮೇರಿಕಾದಲ್ಲಿರುವ ಅವರ ಮಗ ಅಲ್ಲಿಗೆ ಆಹ್ವಾನ ನೀಡಿದಾಗ ಅವರಿಂದಲೂ ➚



ಗೌರವಪೂರ್ವಕ ವಿದಾಯ

ಮೇ 7 ರಂದು ಅಗಲಿದ ಸಂಗಾತಿ ಕೆ.ಎಲ್ ಭಟ್ ಅವರ ದಾವಣಗೆರೆಯ ಮನೆಯಲ್ಲಿ ಭಟ್ ಅವರ ಪಾರ್ಥಿವ ಶರೀರಕ್ಕೆ ಸಿಪಿಎಂ ಪಕ್ಷದ ಧ್ವಜವನ್ನು ಹೊದಿಸಿ ಗೌರವಿಸಲಾಯ್ತು. ನಂತರ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಕೆ ಮಹಾಂತೇಶ ಕಾಂ. ಸೈಯದ್ ಮುಜೀಬ್, ಸಿಪಿಐ ಪಕ್ಷದ ಆವರಗೆರೆ ಉಮೇಶ, ಆವರಗೆರೆ ಚಂದ್ರು, ಎಸ್. ಯುಸಿಐ(ಸಿ) ಪಕ್ಷದ ಕೈದಾಳೆ ಮಂಜು, ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಕಾರ್ಯದರ್ಶಿ ಕಾಂ. ಟಿ. ಯಶವಂತ್, ದೇವದಾಸಿ ವಿಮೋಚನಾ ಸಂಘಟನೆಯ ಕಾಂ. ಟಿ.ವಿ ರೇಣುಕಮ್ಮ, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಉಡುಪಿ ಎಲ್.ಐ.ಸಿ ಯೂನಿಯನ್ ವಿಶ್ವನಾಥ ವಕೀಲರಾದ ಶ್ರೀನಿವಾಸ ಹಾಗೂ ಭಟ್ ಅವರ ಪುತ್ರ ಕೃಷ್ಣಮೂರ್ತಿ, ಆನಂದರಾಜು ಸೇರಿದಂತೆ ಹಲವರು ಗೌರವ ನುಡಿನಮನಗಳನ್ನು ಸಲ್ಲಿಸಿದರು.

ವಕೀಲರಾದ ಆರ್. ಓಬಳೇಶ್, ಪತ್ರಕರ್ತ ಮಂಜುನಾಥ್ ಕಾಡಜ್ಜಿ,ಗೌಸ್ ಪೀರ್,ಅನಂತರಾಜು ಶ್ರೀನಿವಾಸ್, ಮಲಿಯಪ್ಪ, ಉಮೇಶ, ಬಸವರಾಜ, ನಿಂಗಮ್ಮ, ಜಯಲಕ್ಷ್ಮಿ ಸೇರಿದಂತೆ ವಿಮಾ ನೌಕರರ ಸಂಘ, ಸಿಐಟಿಯು ಗ್ರಾಮ ಪಂಚಾಯತಿ ನೌಕರ ಸಂಘಟನೆ, ಆಟೋ ಚಾಲಕರ ಸಂಘಟನೆ, ಕೆ.ಪಿ.ಆರ್.ಎಸ್, ಎಸ್ಎಫ್ಐ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು. ಇದಾದ ಬಳಿಕ ಕಾಮ್ರೇಡ್ ಭಟ್ ಅವರ ಇಚ್ಛೆಯಂತೆ ಅವರ ದೇಹವನ್ನು ವೈದ್ಯಕೀಯ ಸಂಶೋಧನೆಗಾಗಿ ಮೆಡಿಕಲ್ ಕಾಲೇಜ್ ಗೆ ದಾನ ಮಾಡಲಾಯ್ತು.

ಹೊಸಪೇಟೆಯಲ್ಲಿ ಹಾಲಿ ವಕೀಲರಾಗಿರುವ ಹಾಗೂ ದಾವಣಗೆರೆಯಲ್ಲಿ ವಿದ್ಯಾರ್ಥಿ ಮುಖಂಡರಾಗಿದ್ದ ಕಾಮ್ರೇಡ್ ಎ. ಕರುಣಾ ನಿಧಿ ಅವರ ನೇತೃತ್ವದಲ್ಲಿ ಹಾಗೂ ಹರಪನಹಳ್ಳಿಯಲ್ಲಿ ಸಿಪಿಎಂ ತಾಲೂಕು ಸಮಿತಿ ನೇತೃತ್ವದಲ್ಲಿ ಕಾಮ್ರೇಡ್ ಕೆ.ಎಲ್.ಭಟ್ ನಿಧನಕ್ಕೆ ಶ್ರದ್ಧಾಂಜಲಿ ಸಭೆಗಳು ನಡೆದಿವೆ. ಇದಲ್ಲದೆ ನಾಡಿದ ಹಲವು ಹಿರಿ ಕಿರಿಯ ವಿವಿಧ ಸಂಘಟನೆಗಳ ನಾಯಕರು ಸಾಮಾಜಿಕ ಜಾಲತಾಣದಲ್ಲಿ ಅವರ ನಿಧನಕ್ಕೆ ಭಾವಪೂರ್ಣ ನುಡಿ ನಮನ ಸಲ್ಲಿಸಿದ್ದಾರೆ. ❑





ಅಮೆರಿಕದ ಸರಕುಗಳಿಗೆ ಸುಂಕ–ಕಡಿತ...

ಪುಟ 13 ರಿಂದ

ಅನುವಾಗುವಂತೆ ಸುಂಕದ ದರಗಳನ್ನು ಸೂಕ್ತವಾಗಿ ಹೊಂದಿಸಲಾಗಿತ್ತು. ಆದರೆ, ನವ ಉದಾರವಾದಿ ನೀತಿಗಳು ಜಾರಿಗೆ ಬಂದ ನಂತರ ವಿಶ್ವ ವ್ಯಾಪಾರ ಸಂಘಟನೆಯ ಷರತ್ತುಗಳಿಗೆ ಅನುಗುಣವಾಗಿ ವಾಣಿಜ್ಯ ಬೆಳೆಗಳಿಗೆ ಬೆಲೆ ಬೆಂಬಲವನ್ನು ಹಿಂತೆಗೆದುಕೊಂಡ ಪರಿಣಾಮವಾಗಿ ಕಳೆದ ಹಲವಾರು ದಶಕಗಳಲ್ಲಿ ದೇಶದಲ್ಲಿ ಒಂದು ಬಹು ದೊಡ್ಡ ಸಂಖ್ಯೆಯ ರೈತರ ಆತ್ಮಹತ್ಯೆಗಳು ಸಂಭವಿಸಿವೆ. ಸ್ವಾತಂತ್ರ್ಯಾನಂತರದ "ಉದಾರೀಕರಣ" ಪೂರ್ವದ ವರ್ಷಗಳಲ್ಲಿ ಭಾರತದಲ್ಲಿ ಇಂಥಹ ಆತ್ಮಹತ್ಯೆಗಳು ಸಂಭವಿಸಿರಲಿಲ್ಲ. ಆಹಾರ ಧಾನ್ಯಗಳಿಗೆ ಒದಗಿಸುತ್ತಿದ್ದ ಬೆಲೆ ಬೆಂಬಲವನ್ನೂ ಸಹ ಹಿಂತೆಗೆದುಕೊಳ್ಳಲು ಸರ್ಕಾರ ಬಯಸಿತ್ತು. ಆದರೆ ಈ ಮೊದಲು ಅದನ್ನು ಕಾರ್ಯಗತಗೊಳಿಸುವ ಧೈರ್ಯ ಮಾಡಲಿಲ್ಲ. ನಂತರ ಮೂರು ಕುಖ್ಯಾತ ಕೃಷಿ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅದನ್ನು ಮಾಡಲು ಮುಂದಾಯಿತು. ಆದರೆ ಇಡೀ ಒಂದು ವರ್ಷದ ಕಾಲ ಜರುಗಿದ ರೈತ ಆಂದೋಲನವು ಈ ಕ್ರಮವನ್ನು ತಾತ್ಕಾಲಿಕವಾಗಿ ಹಿಂದೆ ಸರಿಯುವಂತೆ ಮಾಡಿತು. ಆದರೂ, ಬೆಲೆ ಬೆಂಬಲವನ್ನು ಹಿಂತೆಗೆದುಕೊಳ್ಳುವ ತನ್ನ ಯೋಜನೆಯನ್ನು ಸರ್ಕಾರ ಇನ್ನೂ ಕೈಬಿಟ್ಟಿಲ್ಲ.

ಈ ವಿಷಯವನ್ನು ಟ್ರಂಪ್ ಸುಂಕ ನೀತಿಯು ಈಗ ಮತ್ತೆ ತಕ್ಷಣದ ಕಾರ್ಯಸೂಚಿಗೆ ತಂದಿದೆ. ಟ್ರಂಪ್ ಅವರ ಸುಂಕ ಏರಿಕೆಯ ವಿರುದ್ಧ ಭಾರತವು ಪ್ರತಿ–ಸುಂಕಗಳನ್ನು ವಿಧಿಸಿದ್ದರೆ ಮತ್ತು ವಿಷಯವನ್ನು ಅಲ್ಲಿಗೆ ಬಿಟ್ಟಿದ್ದರೆ, ಆಗ ರೈತರಿಗೆ ಯಾವುದೇ ಬೆದರಿಕೆ ಇರುತ್ತಿರಲಿಲ್ಲ. ಮೂಲತಃ, ಅಮೆರಿಕವು ಭಾರತದ ವಿರುದ್ಧ ಸುಂಕಗಳನ್ನು ಹೆಚ್ಚಿಸದಿರುವುದಕ್ಕೆ ಪ್ರತಿಯಾಗಿ ಅಮೆರಿಕದ ಸರಕುಗಳಿಗೆ ಭಾರತವು ತನ್ನ ಸುಂಕಗಳನ್ನು ಕಡಿಮೆ ಮಾಡಲು ಒಪ್ಪಿಕೊಂಡಿರುವುದರಿಂದಾಗಿ, ಆಹಾರ ಧಾನ್ಯ ಉತ್ಪಾದಕರು ಇಲ್ಲಿಯವರೆಗೆ ಪಡೆಯುತ್ತಿದ್ದ ಪ್ರಮಾಣದ ಬೆಲೆ ರಕ್ಷಣೆಯು ಇನ್ನು ಮುಂದೆ ಅವರಿಗೆ ಸಿಗುವುದಿಲ್ಲ ಎಂಬದೇ ಇದರ ಅರ್ಥ. ಈ ಮಾತುಕತೆಗಳ ಫಲಿತಾಂಶವಾಗಿ ಅಮೆರಿಕದ ಸರಕುಗಳಿಗೆ ಭಾರತವು ವಿಧಿಸುವ ಸುಂಕ ದರಗಳನ್ನು ಕೆಳಗಿಳಿಸಲಾಗುತ್ತದೆ ಮತ್ತು ತನ್ನ ಆಹಾರ ಧಾನ್ಯಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗಳನ್ನು (ಅವು ನಿಜಕ್ಕೂ ಅಸ್ತಿತ್ವದಲ್ಲಿದ್ದರೆ) ಕಡಿಮೆ ಮಾಡಬೇಕಾಗುತ್ತದೆ ಮತ್ತು ಅಮೆರಿಕನ್ ಧಾನ್ಯಗಳು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸುತ್ತವೆ. ಭಾರೀ ಸಬ್ಸಿಡಿ (ವರಮಾನ ವರ್ಗಾವಣೆಯ ಮೂಲಕ) ಹೊಂದಿರುವ ತನ್ನ ಧಾನ್ಯಗಳನ್ನು ಭಾರತಕ್ಕೆ ರಫ್ತು ಮಾಡುವ ಅಮೆರಿಕದ ಬಹುದಿನಗಳ ಕನಸು, ಹಸಿರು ಕ್ರಾಂತಿಯ ನಂತರ ಈಡೇರದ ಈ ಕನಸು, ಅಂತಿಮವಾಗಿ ನನಸಾಗುತ್ತದೆ.

ಇದೊಂದು ವಿಪತ್ತು

ಭಾರತದ ದೃಷ್ಟಿಕೋನದಿಂದ ಇದೊಂದು ವಿಪತ್ತು, ಹೌದು. ಇದು ರೈತರಿಗೆ ಹೆಚ್ಚು ಹೆಚ್ಚು ಸಂಕಷ್ಟಗಳನ್ನು ಉಂಟುಮಾಡುವುದು ಮಾತ್ರವಲ್ಲದೆ, ರೈತರ ಆತ್ಮಹತ್ಯೆಯ ಪ್ರಕರಣಗಳನ್ನು (ಧಾನ್ಯ ಬೆಳೆಯುವ ರೈತರ ಆತ್ಮಹತ್ಯೆಯ ಪ್ರಕರಣಗಳು ಇದುವರೆಗೆ ಕಡಿಮೆ ಇದ್ದವು) ಹೆಚ್ಚಿಸುತ್ತದೆ. ಆಹಾರ ಭದ್ರತೆಯ ವಿಷಯದಲ್ಲಿ ದೇಶಕ್ಕೆ ಒಂದು ಅಪಾಯವನ್ನು ಉಂಟುಮಾಡುತ್ತದೆ. ದೇಶವು ಅಮೆರಿಕದಿಂದ ಬರುವ ಆಹಾರ ಆಮದಿನ ಮೇಲೆ ಅವಲಂಬಿತವಾಗುವುದು ಮಾತ್ರವಲ್ಲದೆ, ಅಮೆರಿಕನ್ನರಿಗೆ ಭಾರತದ ನೀತಿ ನಿರೂಪಣೆಯ ವಿಷಯದಲ್ಲಿ ಹೆಚ್ಚಿನ ಹತೋಟಿಯನ್ನು ನೀಡುತ್ತದೆ ಮತ್ತು ತೀವ್ರ ಕ್ಷಾಮದ ಸಂಭವವೂ ಹೆಚ್ಚುತ್ತದೆ. ರೈತರು ಆಹಾರ ಧಾನ್ಯಗಳನ್ನು ಉತ್ಪಾದಿಸುವುದರಿಂದ ದೂರ ಸರಿದು ಆ ಸಮಯದಲ್ಲಿ ಲಾಭದಾಯಕವಾಗಬಹುದಾದ ಇತರ ಬೆಳೆಗಳತ್ತ ತಿರುಗಿದಾಗ ಮತ್ತು ಅಂತಹ ಬೆಳೆಗಳ ಬೆಲೆಗಳು ವಿಶ್ವ ಮಾರುಕಟ್ಟೆಯಲ್ಲಿ ಕುಸಿದಾಗ (ವಿಶ್ವ ಮಾರುಕಟ್ಟೆಯಲ್ಲಿ ಇದೊಂದು ಅನಿವಾರ್ಯ ಸಂಗತಿಯೂ ಹೌದು) ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಹಾರ ಧಾನ್ಯಗಳನ್ನು ಖರೀದಿಸಲು ದೇಶವು ವಿದೇಶಿ ವಿನಿಮಯದ ಕೊರತೆಯನ್ನು ಅನುಭವಿಸುತ್ತದೆ. ಅದಕ್ಕಿಂತಲೂ ಮಿಗಿಲಾಗಿ, ಈ ವಿದ್ಯಮಾನವು ಒಂದು ವೇಳೆ ಸಂಭವಿಸದೇ ಇದ್ದರೂ, ಅಥವಾ ಅಮೆರಿಕದಿಂದ "ಆಹಾರ ನೆರವು" (ಇದಕ್ಕೆ ಪ್ರತಿಯಾಗಿ ಅದು ಒಂದಲ್ಲಾ ಒಂದು ರೂಪದ ಬೆಲೆಯನ್ನು ಕಿತ್ತುಕೊಳ್ಳುತ್ತದೆ) ಬರುತ್ತಿದ್ದರೂ ಸಹ, ಆಮದು ಮಾಡಿಕೊಂಡ ಆಹಾರ ಧಾನ್ಯಗಳನ್ನು ಖರೀದಿಸಲು ಬೇಕಾದ ಕೊಳ್ಳುವ ಶಕ್ತಿಯನ್ನು ರೈತರು ಹೊಂದಿರುವುದಿಲ್ಲ. ಎರಡೂ ರೀತಿಯಲ್ಲೂ, ದೇಶವು ಕ್ಷಾಮದ ಪರಿಸ್ಥಿತಿಗೆ ತಳ್ಳಲ್ಪಡುತ್ತದೆ.

ನಿಖರವಾಗಿ ಇದೇ ವಿದ್ಯಮಾನವು ಆಫ್ರಿಕಾದಲ್ಲಿ ಸಂಭವಿಸಿದೆ. ತಮ್ಮ "ತುಲನಾತ್ಮಕ ಪ್ರಯೋಜನ"ವನ್ನು ಬಳಸಿಕೊಳ್ಳುವ ಹೆಸರಿನಲ್ಲಿ ಆಹಾರ ಧಾನ್ಯ ಉತ್ಪಾದನೆಯನ್ನು ತ್ಯಜಿಸಿ ಆಮದುದಾರರಾಗುವಂತೆ ಆಫ್ರಿಕದ ಹಲವಾರು ದೇಶಗಳನ್ನು ಪ್ರೇರೇಪಿಸಲಾಯಿತು. ಆದರೆ, ಅವರು ರಫ್ತು ಮಾಡುವ ಬೆಳೆಗಳ ಬೆಲೆಗಳು ಕುಸಿದಾಗಲೆಲ್ಲಾ ಅವು ಕ್ಷಾಮಗಳಿಂದ ಬಳಲಿದವು. ಈ ಕ್ಷಾಮಗಳನ್ನು ಅರ್ಥಶಾಸ್ತ್ರಜ್ಞ ಅಮಿಯಾ ಬಾಗ್ಚಿ ಅವರು "ಜಾಗತೀಕರಣ ಕ್ಷಾಮಗಳು" ಎಂದು ಕರೆಯುತ್ತಾರೆ. ಅಂದರೆ, ದೇಶಗಳು ಜಾಗತೀಕರಣದಿಂದ ಪ್ರೇರೇಪಿಸಲ್ಪಟ್ಟು ಆಹಾರ ಧಾನ್ಯದ ಸ್ವಾವಲಂಬನೆಯನ್ನು ತ್ಯಜಿಸುವುದರಿಂದ ಉದ್ಭವವಾಗುವ ಕ್ಷಾಮಗಳು. ಇಲ್ಲಿಯವರೆಗೂ, ಆಫ್ರಿಕಾವು "ಜಾಗತೀಕರಣ ಕ್ಷಾಮ"ದ ಬಲಿಪಶುವಾಗಿತ್ತು. ಭಾರತವೂ ಈಗ ಬಲಿಪಶುವಾಗಲಿದೆ, ವಿಪರ್ಯಾಸವೆಂದರೆ, ಜಾಗತೀಕರಣದಿಂದ ದೂರ ಸರಿಯುವಂತೆ ಟ್ರಂಪ್ ಒಡ್ಡಿದ ಬೆದರಿಕೆಯ ಪರಿಣಾಮವಾಗಿ.

ಅಮೆರಿಕ ಜೊತೆಗಿನ ವ್ಯಾಪಾರ ಮಾತುಕತೆಗಳಲ್ಲಿ ರೈತರ ಹಿತಾಸಕ್ತಿಗಳನ್ನು ಬಲಿ ಕೊಡುವುದಿಲ್ಲ ಎಂದು ಸರ್ಕಾರ ಹೇಳುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅಮೆರಿಕದ ಸರಕುಗಳಿಗೆ ವಿಧಿಸುವ ಸುಂಕಗಳನ್ನು ಕಡಿತ ಮಾಡುವ ಕ್ರಮವು ರೈತರ ಹಿತಾಸಕ್ತಿಗೆ ಹಾನಿಕಾರಕವಾಗುತ್ತದೆ. ಆದ್ದರಿಂದ, ಭಾರತವು ಅಮೆರಿಕದ ಜೊತೆ ವ್ಯಾಪಾರ ಮಾತುಕತೆಗಳಿಗೆ ಒಪ್ಪುವ ಸಂಗತಿಯೇ ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ. ಭಾರತವು ಅಮೆರಿಕದ ಸರಕುಗಳಿಗೆ ಸುಂಕಗಳನ್ನು ಇಳಿಕೆ ಮಾಡಿದ್ದಕ್ಕೆ ಪ್ರತಿಯಾಗಿ ಭಾರತದ ಸರಕುಗಳಿಗೆ ಸುಂಕಗಳನ್ನು ಟ್ರಂಪ್ ಏರಿಕೆ ಮಾಡದಿರುವುದು ನಮ್ಮ ಆಹಾರ ಬೆಳೆಯುವ ರೈತರಿಗೆ ಯಾವುದೇ ಪ್ರಯೋಜನವನ್ನು ತರುವುದಿಲ್ಲ. ಏಕೆಂದರೆ ಭಾರತದ ರೈತರು ಆಹಾರ ಧಾನ್ಯಗಳ ರಫ್ತುದಾರರಲ್ಲ. ಉತ್ಪಾದನೆಯಲ್ಲಿ ತೊಡಗಿರುವ ಭಾರತದ ಏಕಸ್ವಾಮ್ಯ ಬಂಡವಾಳಗಾರರಿಗೆ ರಫ್ತುಗಳು ಸ್ವಲ್ಪ ಲಾಭವನ್ನು ತರಬಹುದು. ಆದರೆ ಅದು ರೈತರ ಭವಿಷ್ಯದ ಕರಾಳತೆಯಲ್ಲಿ ಸ್ವಲ್ಪವೂ ವ್ಯತ್ಯಾಸವನ್ನು ಉಂಟುಮಾಡುವುದಿಲ್ಲ.

➘ಪಕ್ಷಕ್ಕೆ ಸುಮಾರು 50 ಸಾವಿರದಷ್ಟು ನಿಧಿ ಪಡೆದ ಬಳಿಕಾವೇ ಅಮೇರಿಕಾ ಪ್ರಯಾಣ ಆರಂಭಿಸಿದ್ದರು. ಕರೋನಾ ಬಳಿಕ ಅವರು ಕ್ಯಾನ್ಸರ್ ಎನ್ನುವ ಮಾರಾಣಾಂತಿಕ ಕಾಯಿಲೆಗೆ ತುತ್ತಾದ ಮೇಲೂ ಬೆಂಗಳೂರಿನ ಅವರ ಹಿರಿ ಮಗನ ಮನೆಯಲ್ಲಿ ಇದ್ದಾಗ 2023 ಜನವರಿಯಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಸಮ್ಮೇಳನ ಬಹಿರಂಗ ಸಭೆಗೆ ಹಾಗೂ ಫ್ರೀಡಂ ಪಾರ್ಕನಲ್ಲಿ ನಡೆದ ಒಂದೆರಡು ಬಹಿರಂಗ ಸಭೆಯಲ್ಲೂ ಸ್ವತಃ ಹಾಜರಿದ್ದರು. ಮತ್ತು ದೇಣಿಗೆ ಕೊಡುವ ತಮ್ಮ ಬದ್ದತೆಯನ್ನು ಮುಂದುವರೆಸಿದ್ದರು ಮಾತ್ರವಲ್ಲ ತಮಗಿಂತಲೂ ನೋವಿನಲ್ಲಿರುವ, ಕಷ್ಟದಲ್ಲಿರುವ, ಖಾಯಿಲೆಗಳಿಂದ ಬಳಲುತ್ತಿರುವ ಹಿರಿ ಕಿರಿ ಸಂಗಾತಿಗಳ ಯೋಗಕ್ಷೇಮ ವಿಚಾರಿಸುತ್ತಾ ಆರ್ಥಿಕ ನೆರವನ್ನು ಕಳಿಸುತ್ತಿದ್ದರು. ಸ್ವತಃ ಕಳೆದ ತಿಂಗಳಷ್ಟೇ ತಮ್ಮ ನಿವೃತ್ತಿ ಉಳಿತಾಯ ಹಣದಿಂದ ರೂ.1 ಲಕ್ಷ ಹಣವನ್ನು ಪಕ್ಷದ ರಾಜ್ಯ ಸಮಿತಿಗೆ ನಿಧಿಯಾಗಿ ನೀಡಿ ಒಬ್ಬ ಆದರ್ಶ ಕಮ್ಯೂನಿಸ್ಟ್ ತನವನ್ನು ಮೆರೆದರು.

ಪಕ್ಷದ ಎಲ್ಲ ಪ್ರಕಟಣೆಗಳನ್ನು, ಸಾಹಿತ್ಯವನ್ನು ತಪ್ಪದೇ ಕೊಂಡುಕೊಂಡು ಓದಿ ಅದರಲ್ಲಿರುವ ಅಂಶಗಳನ್ನು ಪಕ್ಷದ ಕಾರ್ಯಕರ್ತರು, ಸಂಗಾತಿಗಳು, ಹಿತೈಷಿಗಳು ಹಾಗೂ ಸಾರ್ವಜನಿಕರೊಂದಿಗೆ ಚರ್ಚಿಸುತ್ತಾ ಸರ್ಕಾರಗಳ ನೀತಿಗಳನ್ನು ಹಾಗೂ ಅದರ ಹಿಂದಿರುವ ಆಳುವವರ್ಗದ ರಾಜಕೀಯ ಮತ್ತು ದುಡಿಯುವ ಜನರ ಮೇಲಾಗುವ ಪರಿಣಾಮಗಳನ್ನು ಮನವರಿಕೆಯಾಗುವಂತೆ ವಿವರಿಸುತ್ತಿದ್ದರು.

ವೃತ್ತಿಯಿಂದ ನಿವೃತ್ತಿ ಆದರೆ ಚಳವಳಿಯ ಪೂರ್ಣಾವಧಿ ಕೆಲಸ:

ಎಲ್.ಐ.ಸಿ ಯಿಂದ ನಿವೃತ್ತಿ ಬಳಿಕಾವೂ ದಾವಣಗೆರೆ ಜಿಲ್ಲೆಯಲ್ಲಿ ಗ್ರಾಮಪಂಚಾಯತ್ ನೌಕರರು ಸೇರಿ ವಿವಿಧ ಅಸಂಘಟಿತ ವಲಯದ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಲೇ ಸಿಐಟಿಯು ಜಿಲ್ಲಾಸಂಚಾಲಕರಾಗಿ ಕೆಲಸ ಮಾಡಿದರು. ಬಳಿಕ ಸಿಪಿಎಂ ಜಿಲ್ಲಾ ಕಾರ್ಯದರ್ಶಿಯಾಗಿ, ದೇವದಾಸಿ ವಿಮೋಚನಾ ಸಂಘದ ಗೌರವಧ್ಯಕ್ಷರಾಗಿ ಕೆಲಸ ಮಾಡುತ್ತಾ ದುಡಿಯುವ ಜನರ ಮೇಲೆ ನಡೆಯುತ್ತಿರುವ ನಿರಂತರವಾದ ದಾಳಿಗಳ ವಿರುದ್ದ ಚಳವಳಿಗಳನ್ನು ಮುನ್ನಡೆಸಿದರು.

ಕೋಮು ಸಾಮರಸ್ಯಕ್ಕಾಗಿ ನಿರಂತರ ಕೆಲಸ:

ವಿಶೇಷವಾಗಿ ದಾವಣಗೆರೆಯಲ್ಲಿ 1989 ರಾಮ ಮಂದಿರ ಇಟ್ಟಿಗೆ ಮೆರವಣಿಗೆ ಸಂದರ್ಭದಲ್ಲಿ ನಡೆದ ಕೋಮು ಗಲಭೆ ಹಾಗೂ ಪೊಲೀಸ್ ಗೋಲಿಬಾರ್ ನಲ್ಲಿ 17 ಅಮಾಯಕರು ಅಸುನೀಗಿದರು ಅದಾದ ಬಳಿ 1992 ಬಾಬ್ರೀ ಮಸೀದಿ ಗಲಾಟೆ ಮತ್ತು 2002 ರ ಗೋದ್ರಾ ಹತ್ಯಾಕಾಂತದ ಬಳಿಕಾವೂ ಒಂದು ಕಾಲದ ದುಡಿಯುವ ಜನರೇ ತುಂಬಿದ್ದ ಕರ್ನಾಟಕದ ಮ್ಯಾಂಚೆಸ್ಟರ್ ಎನ್ನುವ ಹತ್ತಿಯ ನಗರ ಹಲವು ಬಾರಿ ಕೋಮುಸಂಘರ್ಷ ಮತ್ತು ಕೋಮು ಗಲಭೆಗಳಿಗೆ ಸಾಕ್ಷಿಯಾಗಿತ್ತು. ಈ ಸಂದರ್ಭಗಳಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿದ ಕುಟುಂಬಗಳ ಪರವಾಗಿ ಹಾಗೂ ಶಾಂತಿ ಮರು ಸ್ಥಾಪನೆಯಾಗಿ ಮತ್ತು ಜನರನ್ನು ವಿಭಜಿಸುವ ಹಿಂದುತ್ವವಾದಿಗಳ ವಿರುದ್ದ ಮತ್ತು ಸಮಾಜದಲ್ಲಿ ಶಾಂತಿಸಾಮರಸ್ಯಕ್ಕಾಗಿ ದಾವಣಗೆರೆ ವಿವಿಧ ಜನಪರ, ಜೀವಪರ ಸಂಘಟನೆಗಳು ಹಾಗೂ ವ್ಯಕ್ತಿಗಳನ್ನು ಒಳಗೊಂಡು ಸೌಹಾರ್ದ ವೇದಿಕೆಗಳು ರಚಿಸಿಕೊಂಡು ಅವಿತರವಾಗಿ ಶ್ರಮಿಸಿದ್ದರು.

ಅವರು ವಿಮಾ ನೌಕರರ ಚಳವಳಿ ಹಾಗೂ ಆ ಮೂಲಕ ಕಮ್ಯೂನಿಸ್ಟ್ ಚಳವಳಿ ಕಾರ್ಯಕರ್ತರಾಗಿ ರೂಪಗೊಂಡು ತಮ್ಮ ಜೀವನದೂದ್ದಕ್ಕೂ ಒಂದು ಆದರ್ಶಯುತ ಬದುಕನ್ನು ಸಾಗಿಸಿದರು. ಉಡುಪಿ ಜಿಲ್ಲೆಯ ಬಡತನದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದ ಅವರು ಯಾವತ್ತೂ ಒಂದು ಪಂಥ, ಒಂದು ಜಾತಿಯ ಪರವಾಗಿ ಕೆಲಸ ಮಾಡಲಿಲ್ಲ. ಕಾಮ್ರೇಡ್ ಕೆ.ಎಲ್ ಭಟ್ ಅವರು ಸ್ವತ: ಹಿಂದು, ಮುಸ್ಲಿಂ, ಕ್ರೈಸ್ತ ಸೇರಿ ಯಾವುದೇ ಧರ್ಮ, ಧಾರ್ಮಿಕ ಆಚರಣೆಗಳ ವಿರುದ್ದ ಇರಲಿಲ್ಲ ಬದಲಾಗಿ ಆ ಧರ್ಮದೊಳಗಿರುವ ಮೌಢ್ಯತೆ ಹಾಗೂ ಕಂದಾಚಾರಗಳ ವಿರುದ್ದ ಧೃಢವಾಗಿ ನಿಂತು ಟೀಕಿಸುತ್ತಿದ್ದರು. ಸ್ವತ: ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರೂ ಅಂತಹ ಕುಟುಂಬಗಳ ನಡುವೆ ಬದುಕಿದರೂ ಯಾವತ್ತೂ ಬ್ರಾಹ್ಮಣರನ್ನು ವೈಯಕ್ತಿಕ ನೆಲೆಟ್ಟಿನಲ್ಲಿ ವಿರೋಧಿಸಲಿಲ್ಲ ಬದಲಾಗಿ ಬ್ರಾಹ್ಮಣ್ಯಶಾಹಿ ಹಾಗೂ ಪುರೋಹಿಶಾಹಿ ವಿರುದ್ದ ತಮ್ಮ ಸೈದ್ದಾಂತಿಕ ಸಂಘರ್ಷವನ್ನು ತಮ್ಮ ಕೊನೆ ಉಸಿರಿರುವವರೆಗೂ ನಡೆಸಿದರು.

ಇಂತಹ ಕಾಮ್ರೇಡ್ ಕೆ.ಎಲ್ ಭಟ್ ಅವರ ಆಗಲುವಿಕೆಯು ಅವರ ಕುಟುಂಬದ ಸದಸ್ಯರಿಗೆ ಮಾತ್ರವಲ್ಲ ರಾಜ್ಯದ ಕಮ್ಯೂನಿಸ್ಟ್ ಚಳವಳಿಗೆ ವಿಶೇಷವಾಗಿ ದುಡಿಯುವ ವರ್ಗದ ಚಳವಳಿಗೆ ಅಪಾರ ನಷ್ಟ ಉಂಟುಮಾಡಿದೆ ಒಬ್ಬ ಆದರ್ಶ ಕಮ್ಯೂನಿಸ್ಟ್ ಕಾರ್ಯಕರ್ತರಾಗಿದ್ದ ಕಾಮ್ರೇಡ್ ಕೆ.ಎಲ್. ಭಟ್ ಜೀವನ ನಮ್ಮೆಲ್ಲರಿಗೂ ಒಂದು ಸ್ಪೂರ್ತಿಯಾಗಬೇಕಿದೆ.

–ಕೆ.ಮಹಾಂತೇಶ್

ಮಹಾನ್ ವಿಜಯಕ್ಕೆ 80 ವರ್ಷಗಳು.....

ಪುಟ 16 ರಿಂದ

ಸೋವಿಯೆತ್ ಒಕ್ಕೂಟದಲ್ಲಿ ಮೇ 9ನ್ನು 'ವಿಜಯ ದಿನ'ವಾಗಿ ಆಚರಿಸಲಾಗುತ್ತಿತ್ತು. ವಿಘಟನೆಯ ನಂತರವೂ ರಷ್ಯನ್ ಒಕ್ಕೂಟ ಮತ್ತು ಸೋವಿಯೆತ್ ಒಕ್ಕೂಟದ ಭಾಗವಾಗಿದ್ದ ಹಲವು ದೇಶಗಳಲ್ಲಿ ಈ ಆಚರಣೆ ಮುಂದುವರೆದಿದೆ. ಯುರೋಪಿನಲ್ಲಿ ಮೇ 8 ಅನ್ನು ವಿ.ಇ. ದಿನ (ಯುರೋಪಿನಲ್ಲಿ ವಿಜಯ) ಎಂದೂ ಮೇ 9 ಅನ್ನು 'ಯುರೋಪ್ ದಿನ' ಎಂದೂ ಆಚರಿಸಲಾಗುತ್ತಿದೆ.

ಎರಡನೇ ಮಹಾಯುದ್ಧದಲ್ಲಿ 2.03 ಕೋಟಿ ಸೈನಿಕರು ಮಡಿದರು. 3.5 ಕೋಟಿ ಸೈನಿಕರು ಗಾಯಗೊಂಡರು. ನಾಜಿಗಳ ಆಕ್ರಮಣಕ್ಕೆ ಒಳಗಾದ ಸೋವಿಯತ್ ಒಕ್ಕೂಟ ಅತ್ಯಂತ ಹೆಚ್ಚು ಜೀವಹಾನಿಯನ್ನು ಅನುಭವಿಸಿತು. 2.3 ಕೋಟಿ ಜನರು ಸತ್ತರು. ಪೋಲಂಡಿನ 60 ಲಕ್ಷ, ಯುಗೊಸ್ಲಾವಿಯಾದ 17 ಲಕ್ಷ ಮಂದಿ ಜೀವ ಕಳೆದುಕೊಂಡರು. ಫ್ರಾನ್ಸಿನಲ್ಲಿ 6 ಲಕ್ಷ, ಅಮೆರಿಕದಲ್ಲಿ 4.5 ಲಕ್ಷ ಮತ್ತು ಬ್ರಿಟನ್ನಿನಲ್ಲಿ 3.75 ಲಕ್ಷ ಸೈನಿಕರು ಹತರಾದರು. ಜರ್ಮನಿ 60 ಲಕ್ಷ ಜನರನ್ನು ಕಳೆದುಕೊಂಡಿತು. ಹಿಟ್ಲರನ ಯಾತನಾ ಶಿಬಿರಗಳಲ್ಲಿ 80 ಲಕ್ಷ ಮಂದಿ ಅಮಾನುಷ ಸಾವು ಕಂಡರು. ಇದು ಎರಡನೇ ಮಹಾಯುದ್ಧಕ್ಕೆ ಕಾರಣವಾದ ಫ್ಯಾಸಿಸಂನ ನಿಜ ಮುಖ. ಜಗತ್ತಿನಾದ್ಯಂತ ಪ್ರಜಾಪ್ರಭುತ್ವದ ಉಳಿವಿಗೆ ಜಗತ್ತು ತೆರಬೇಕಾಗಿ ಬಂದ ಬೆಲೆ. ಹಿಟ್ಲರ್ ಜರ್ಮನಿಯ ಸೋಲಿನಿಂದ ಅಂದು, ಮತ್ತು ನಂತರವೂ ಜಗತ್ತಿನಾದ್ಯಂತ ಹರ್ಷಾಚರಣೆ ನಡೆಯಲು ಇದೇ ಕಾರಣ.

NEW No. MAG(3)/NPP/205/2021-2022
JANASHAKTHI KANNADA VARA PATRIKE May 12-18, 2025 Price: Rs. 10/- Date of Publication: 09 May 2025 RNI No. KARKAN/2006/17926 Posted on 14-05-2025
Posted at BG PSO, BG - 560026 **Posted at Periodical Rate -** Rs. 2

ಫ್ಯಾಸಿಸಂನಿಂದ ಮಾನವ ಕುಲವನ್ನು ಉಳಿಸಿದ ಮಹಾನ್ ವಿಜಯಕ್ಕೆ 80 ವರ್ಷಗಳು

ವೇದರಾಜ್ ಎನ್.ಕೆ.

ಮೇ 9, 1945. ಜರ್ಮನಿಯ ರಾಜಧಾನಿ ಬರ್ಲಿನ್‌ನ ರೈಖ್‌ಸ್ಟಾಗ್(ಸಂಸತ್ ಭವನ) ಮೇಲೆ ಸೋವಿಯತ್ ಒಕ್ಕೂಟದ ಕೆಂಪು ಸೇನೆಯ ಇಬ್ಬರು ಸೈನಿಕರು ಹಾರಿಸಿದ ಕೆಂಬಾವುಟ ಹೆಮ್ಮೆಯಿಂದ ಹಾರಾಡಿದ ಐತಿಹಾಸಿಕ ದಿನ. ಈಗಲೂ ಭೂಮಿಯ ಮೇಲಿನ ಅತ್ಯಂತ ಹೇಯ ಮತ್ತು ಕ್ರೂರ ವ್ಯವಸ್ಥೆಯನ್ನು ಪ್ರತಿನಿಧಿಸಿದ್ದ ಹಿಟ್ಲರನ 'ಮೂರನೇ ರೈಖ್'ನ ಆಡಳಿತದ ಅಂತ್ಯಕ್ಕೆ ಸಾಕ್ಷಿಯಾಗಿ ಅಜರಾಮರವಾಗಿರುವ ಚಿತ್ರವಿದು. ಎರಡನೇ ಮಹಾಯುದ್ದದಲ್ಲಿ ಬರ್ಲಿನ್‌ನತ್ತ ಮುನ್ನಡೆದ ಸೈನಿಕರ ನೇತೃತ್ವ ವಹಿಸಿದ್ದ ಸೋವಿಯತ್ ಕೆಂಪು ಸೇನೆಯ ವಿಭಾಗದೊಂದಿಗೆ ಅಂದು ಇಡೀ ಜಗತ್ತು ಸೇರಿಕೊಂಡು ಹಿಟ್ಲರ್ ಮೇಲೆ ಸಾಧಿಸಿದ ಚಾರಿತ್ರಿಕ ವಿಜಯವನ್ನು ಒಂದು ಉತ್ಸವವಾಗಿ ಆಚರಿಸಿತು.

ಹಿಟ್ಲರನ ಪ್ರಬಲ 'ವೆಹ್ರ್ ಮಾಕ್ಟ್', ಅಂದರೆ 'ಯುದ್ಧಯಂತ್ರ'ದ ಆ ವೇಳೆಗೆ ಅಳಿದುಳಿದ ಭಾಗ ಎರಡನೇ ಮಹಾಯುದ್ಧದ 'ಮಿತ್ರಕೂಟ'(ಅಲೈಡ್ ಪವರ್ಸ್)ನ ಜಂಟಿ ಸೇನಾಧಿಪತ್ಯದ ಹಾಗೂ ಸೋವಿಯತ್ ಸೇನಾಧಿಕಾರಿಗಳ ಎದುರು ಶರಣಾಗತಿಯ ದಸ್ತಾವೇಜಿಗೆ ಸಹಿ ಹಾಕಿತು. ಎರಡನೇ ಮಹಾಯುದ್ಧ ಕೊನೆಗೊಂಡಿತು.

ಕೆಂಪುಸೇನೆ, ಕೆಲವು ದಿನಗಳ ಹಿಂದೆಯೇ ಬರ್ಲಿನ್ ನಗರ ಪ್ರವೇಶಿಸಿತ್ತು. ಸುಮಾರು ಮೂರು ವರ್ಷಗಳ ಹಿಂದೆ ಆಗ ಸೋವಿಯತ್ ಒಕ್ಕೂಟದ ಪ್ರಮುಖ ಕೈಗಾರಿಕಾ ನಗರವಾಗಿದ್ದ ಸ್ಟಾಲಿನ್‌ಗ್ರಾಡ್ (ಈಗ ವೋಲಾಗ್ರಾಡ್)ನಲ್ಲಿ ಆರು ತಿಂಗಳ ಕಾಲ (ಜುಲೈ 1942–ಫೆಬ್ರವರಿ 1943) ಕೆಂಪು ಸೇನೆ ಮತ್ತು ಹಿಟ್ಲರನ 6ನೇ ಸೇನೆ ನಡುವೆ ನಡೆದ ಭೀಕಣ ಕಾಳಗ, ನಂತರ ಎರಡನೇ ಮಹಾಯುದ್ಧದ ದಿಕ್ಕನ್ನೇ ಬದಲಿಸಿತು. ಹಿಟ್ಲರನಿಗೆ ಸ್ಟಾಲಿನ್‌ಗ್ರಾಡ್ ಬಾಕುವಿನ ತೈಲನಿಕ್ಷೇಪಗಳಿಗೆ, ಅಲ್ಲಿಂದ ಏಷ್ಯಾಕ್ಕೆ, ಅಂತಿಮವಾಗಿ ಭಾರತಕ್ಕೆ ಪ್ರವೇಶದ್ವಾರವಾಗಿತ್ತು ಎನ್ನಲಾಗಿದೆ.

"ವೋಲ್ಗಾ (ನದಿ) ಆಚೆ ನೆಲೆ ಇಲ್ಲ" ಎಂದು ಸ್ಟಾಲಿನ್ ನೀಡಿದ ಕರೆಗೆ ಓಗೊಟ್ಟ ಆ ನಗರವಾಸಿಗಳು ಪ್ರತಿಯೊಬ್ಬರೂ ಕೈಗೆ ಸಿಕ್ಕ ಹಾರೆ, ಪಿಕಾಸಿ, ಆಯುಧವಾಗಬಲ್ಲ ಮನೆಬಳಕೆಯ ವಸ್ತುಗಳನ್ನೇ ಹಿಡಿದುಕೊಂಡು ಹಿಟ್ಲರ್ ಸೇನೆಯೊಂದಿಗೆ ಬೀದಿ ಕಾಳಗಕ್ಕೆ ಇಳಿದರು. 6ನೇ ಜರ್ಮನ್ ಪಡೆ ಸಂಪೂರ್ಣ ನಾಶವಾಯಿತು. ಅದುವರೆಗೆ ಪ್ಯಾರಿಸ್ ಸೇರಿದಂತೆ ಯುರೋಪಿನಲ್ಲಿ ಜಯದ ಮೇಲೆ ಜಯಗಳಿಸುತ್ತ ಬಂದಿದ್ದ ಹಿಟ್ಲರ್ ಪಡೆ ಅವಾಕ್ಕಾಯಿತು. ಹಿಟ್ಲರ್ ಬೇರೆಡೆಗಳಿಂದ ತನ್ನ ಪಡೆಗಳನ್ನು ಅಲ್ಲಿಗೆ ಕಳಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಹಿಂದೆ ಸರಿಯಲೇ ಬೇಕಾಯಿತು. ಇದು ಜಗತ್ತಿನ ಮಿಲಿಟರಿ ಇತಿಹಾಸದಲ್ಲೇ ಅತ್ಯಂತ ದೊಡ್ಡ 'ನಗರ ಕಾಳಗ' ಎಂದು ದಾಖಲಾಗಿದೆಯಂತೆ.

ಮೇ 9, 1945–ಮಾಸ್ಕೋದಲ್ಲಿ ವಿಜಯೋತ್ಸವ



ಅತ್ತ ಮಾಸ್ಕೋದಿಂದಲೂ ಹಿಂದೆ ಸರಿಯಲಾರಂಭಿಸಿದ ಹಿಟ್ಲರನ ಸೈನಿಕರು ಹೋಗುತ್ತ ಗೋಡೆಗಳ ಮೇಲೆ "ಮಾಸ್ಕೋಗೆ ವಿದಾಯ, ನಾವು ಬರ್ಲಿನ್‌ಗೆ ಹಿಂದಿರುಗುತ್ತಿದ್ದೇವೆ" ಎಂದು ಬರೆಯುತ್ತ ಹೋದರಂತೆ. ಅದರ ಕೆಳಗೇ ಕೆಂಪು ಸೈನಿಕರು "ನಾವು ಬರ್ಲಿನ್ ವರೆಗೂ ಬರುತ್ತೇವೆ" ಎಂದು ಬರೆಯುತ್ತ ಅವರನ್ನು ಬೆನ್ನಟ್ಟಿ ನಿಜವಾಗಿಯೂ ಬರ್ಲಿನ್‌ವರೆಗೂ ಬಂದೇ ಬಿಟ್ಟಿದ್ದರು.

ಆ ವೇಳೆಗೆ ಹಿಟ್ಲರ್ ಮತ್ತು ಆತನ ಹೊಸ ಪ್ರೇಯಸಿ ಇವಾ ಬ್ರೌನ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಹಿಟ್ಲರನ ಹೆಣವನ್ನು "ಛಾನ್ಸಲರ್" (ಅಲ್ಲಿನ ರಾಷ್ಟ್ರಾಧ್ಯಕ್ಷ) ನಿವಾಸದ ಹೂದೋಟದಲ್ಲಿ ಸುಡಲಾಗಿತ್ತು. ಒತ್ತಡ ತಾಳಲಾರದೆ ಬರ್ಲಿನ್‌ನಲ್ಲಿ ಜರ್ಮನ್ ಸೇನೆ ಕೆಂಪು ಸೇನೆಗೆ ಬೇಷರತ್ತಾಗಿ ಶರಣಾಯಿತು. ಮೇ 7ರಂದು ರೈಮ್ಸ್ ನಗರದಲ್ಲಿ ಪ್ರಾಥಮಿಕ ದಸ್ತಾವೇಜಿಗೆ ಸಹಿ ಹಾಕಿತು. ಆದರೆ ಜರ್ಮನ್ ಸೇನಾಪಡೆಗಳು ಅಲೈಡ್ ಪವರ್ಸ್ ಮತ್ತು ಸೋವಿಯೆತ್ ಸೇನಾಧಿಪತ್ಯದ ಜಂಟಿ ಮುಖಂಡರೆದುರು ವಿಧ್ಯುಕ್ತವಾಗಿ ಶರಣಾಗಬೇಕು ಎಂದು ಕೆಂಪು ಸೇನೆ ಆಗ್ರಹಿಸಿತು. ಏಕೆಂದರೆ ಫ್ಯಾಸಿಸ್ಟ್ ಜರ್ಮನಿಯೊಂದಿಗೆ ಪ್ರತ್ಯೇಕ ಶಾಂತಿ ಸಂಧಿ ಮಾಡಿಕೊಳ್ಳಬಾರದು ಎಂದು ಸೋವಿಯೆತ್ ಒಕ್ಕೂಟ ಮತ್ತು ಆಂಗ್ಲೋ-ಅಮೆರಿಕನ್ ಶಕ್ತಿಗಳ ನಡುವೆ ಒಪ್ಪಂದವಾಗಿತ್ತು.



ಹಿಟ್ಲರ್ ಜರ್ಮನಿಯ ಸೋಲು ಸನ್ನಿಹಿತವಾಗುತ್ತಿದ್ದಂತೆ ಹಿಟ್ಲರ್‌ಶಾಹಿಯ ಕುಖ್ಯಾತ ಔಟ್‌ವಿಟ್ಸ್ ಯಾತಟ್ಟಣದಿಂದ ವಿಮೋಚನೆ ಪಡೆಯುತ್ತಿರುವವರೊಂದಿಗೆ ಸೋವಿಯತ್ ವೈದ್ಯರು ಮತ್ತು ರೆಡ್‌ಕ್ರಾಸ್ ಪ್ರತಿನಿಧಿಗಳು.

ಈ ಪ್ರಕಾರ ಮೇ 8, 1945ರ ಮಧ್ಯರಾತ್ರಿಗೆ ಶರಣಾಗತಿಯ ಪ್ರಕ್ರಿಯೆ ವಿಧ್ಯುಕ್ತವಾಗಿ ಆರಂಭವಾಯಿತು, ಜರ್ಮನ್ ಸೇನೆಯು ಶರಣಾಗತಿಯ ದಸ್ತಾವೇಜಿಗೆ ಸಹಿ ಬಿತ್ತು. ಜರ್ಮನ್ ಸೇನೆಯ ಪರವಾಗಿ ಫೀಲ್ಡ್ ಮಾರ್ಷಲ್ ವಿಲ್ಹೆಲ್ಮ್ ಕೈಟಲ್, ಸೋವಿಯೆತ್ ಕೆಂಪು ಸೇನೆಯ ಪರವಾಗಿ ಮಾರ್ಷಲ್ ಜಿಯೊರ್ಜಿ ಝುಕೊವ್ ಮತ್ತು ಮಿತ್ರಶಕ್ತಿಗಳು (ಅಲೈಡ್ ಪವರ್ಸ್) ಪರವಾಗಿ ಏರ್ ಚೀಫ್ ಮಾರ್ಷಲ್ ಅರ್ಥರ್ ಟೆಡ್ಡರ್ ಸಹಿಹಾಕಿದರು.

ಮೇ 9, 1945ರಂದು ಮಾಸ್ಕೋದಿಂದ ಸ್ಟಾಲಿನ್‌ರವರ 'ವಿಜಯ ಭಾಷಣ' ಪ್ರಸಾರವಾಯಿತು. ಸೋವಿಯೆತ್ ಒಕ್ಕೂಟದಲ್ಲಿ ಈ ಮಹಾಯುದ್ಧವನ್ನು "ಮಹಾನ್ ದೇಶಪ್ರೇಮಿ ಯುದ್ಧ" ಎಂದು ಕರೆಯಲಾಗುತ್ತಿತ್ತು. "ಸಂಗಾತಿಗಳೇ, ಮಹಾನ್ ದೇಶಪ್ರೇಮಿ ಯುದ್ಧ ನಮ್ಮ ಸಂಪೂರ್ಣ ವಿಜಯದೊಂದಿಗೆ ಕೊನೆಗೊಂಡಿದೆ. ಯುರೋಪಿನಲ್ಲಿ ಯುದ್ಧದ ಅವಧಿ ಕೊನೆಗೊಂಡಿದೆ. ಶಾಂತಿಯುತ ಅಭಿವೃದ್ಧಿಯ ಅವಧಿ ಆರಂಭವಾಗಿದೆ" ಎಂದು ಸ್ಟಾಲಿನ್ ತಮ್ಮ ವಿಜಯ ಭಾಷಣದಲ್ಲಿ ಸಾರಿದರು.

ಎರಡನೇ ಮಹಾಯುದ್ಧ ಕೊನೆಗೊಂಡಿತು. ಈಗ ವಿಶ್ವಾದ್ಯಂತ ಇದನ್ನು ಪ್ರತಿವರ್ಷ ನೆನಪಿಸಿಕೊಳ್ಳಲಾಗುತ್ತಿದೆ. ಹಿಂದೆ ಪುಟ 15 ಕ್ಕೆ



ಜನರ ಐಕ್ಯತೆಯ ಮೂಲಕ ಮಾತ್ರ ಫ್ಯಾಸಿಸಂ ಅನ್ನು ಎದುರಿಸಬಹುದು ಎಂದು ಇತಿಹಾಸವು ತೋರಿಸಿದೆ

ರಷ್ಯಾದ ಅಧ್ಯಕ್ಷ ಪುಟಿನ್ ಕಮ್ಯುನಿಸ್ಟ್ ಅಲ್ಲದಿದ್ದರೂ, ವಾಸ್ತವವಾಗಿ ಕಮ್ಯುನಿಸ್ಟ್-ವಿರೋಧಿಯೇ ಎನ್ನಬಹುದಾದರೂ, ಅಲ್ಲಿ ಫ್ಯಾಸಿಸಂ ಮೇಲೆ ವಿಜಯದ 80ನೇ ವಾರ್ಷಿಕೋತ್ಸವವನ್ನು ವ್ಯಾಪಕವಾಗಿ ಆಚರಿಸಲಾಗುತ್ತಿದೆ ಎಂದು ವರದಿಯಾಗಿದೆ.

ರಷ್ಯಾ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ (ಸಿಪಿಆರ್‌ಎಫ್) ಏಪ್ರಿಲ್ 21ರಿಂದ 25ರವರೆಗೆ ಅಂತರರಾಷ್ಟ್ರೀಯ 'ಫ್ಯಾಸಿಸ್ಟ್ ವಿರೋಧಿ ವೇದಿಕೆ'ಯನ್ನು ಆಯೋಜಿಸುವ ಮೂಲಕ ಫ್ಯಾಸಿಸಂ ವಿರುದ್ಧದ ವಿಜಯದ 80ನೇ ವಾರ್ಷಿಕೋತ್ಸವವನ್ನು ಆಚರಿಸಿದೆ. 91 ದೇಶಗಳ 164 ಪಕ್ಷಗಳು ಮತ್ತು ಸಂಘಟನೆಗಳ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ) ಅನ್ನು ಪ್ರತಿನಿಧಿಸಿ ಪೊಲಿಟ್‌ಬ್ಯುರೊ ಸದಸ್ಯ ಆರ್.ಅರುಣ್ ಕುಮಾರ್ ಭಾಗವಹಿಸಿದರು.

ಸಿಪಿಆರ್‌ಎಫ್ ಅಧ್ಯಕ್ಷ ಗೆನ್ನಡಿ ಜ್ಯುಗನೋವ್ ವೇದಿಕೆಯನ್ನು ಉದ್ಘಾಟಿಸಿದರು ಮತ್ತು ಕೆಂಪು ಸೈನ್ಯವು ವಹಿಸಿದ ಅದ್ಭುತ ಪಾತ್ರ ಮತ್ತು ಸೋವಿಯತ್ ಜನರ ಅಪಾರ ತ್ಯಾಗಗಳನ್ನು ಸ್ಮರಿಸಿದರು. ಚೀನಾ ಕಮ್ಯುನಿಸ್ಟ್ ಪಕ್ಷ ಮತ್ತು ಕ್ಯೂಬಾದ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳು ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

ಉದ್ಘಾಟನೆಯ ನಂತರ, ಇಂದು ಜಗತ್ತು ಎದುರಿಸುತ್ತಿರುವ ಫ್ಯಾಸಿಸ್ಟ್ ಬೆದರಿಕೆಯ ವಿವಿಧ ಅಂಶಗಳನ್ನು ಚರ್ಚಿಸಲು ಮೂರು ಪ್ಲಿನರಿ ಅಧಿವೇಶನಗಳನ್ನು ಏಕಕಾಲದಲ್ಲಿ ನಡೆಸಲಾಯಿತು. ಸುಮಾರು 60 ಪಕ್ಷಗಳು ಪ್ರಬಂಧಗಳನ್ನು ಮಂಡಿಸಿದವು ಮತ್ತು ಫ್ಯಾಸಿಸಂನ ಹೆಚ್ಚುತ್ತಿರುವ ಅಪಾಯಗಳು ಮತ್ತು ಹೆಚ್ಚಿದ ಸಾಮ್ರಾಜ್ಯಶಾಹಿ ಆಕ್ರಮಣದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡವು. ಭಾಗವಹಿಸಿದ ಎಲ್ಲರೂ ಗಾಜಾ ಮತ್ತು ಪ್ಯಾಲೆಸ್ಟೈನ್ ಮೇಲಿನ ಇಸ್ರೇಲಿ ಆಕ್ರಮಣವನ್ನು ಖಂಡಿಸಿದರು ಮತ್ತು ಇಸ್ರೇಲ್ ಅನ್ನು ಶಸ್ತ್ರಸಜ್ಜಿತಗೊಳಿಸುವಲ್ಲಿ ಮತ್ತು ಪ್ರದೇಶಗಳಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸುವಲ್ಲಿ ಅಮೆರಿಕದ ಪಾತ್ರವನ್ನು ಖಂಡಿಸಿದರು. 1967ರ ಪೂರ್ವದ ಗಡಿಗಳು ಮತ್ತು ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಹೊಂದಿರುವ ಸಾರ್ವಭೌಮ ಪ್ಯಾಲೆಸ್ಟೈನ್ ಪ್ರಭುತ್ವದ ಸ್ಥಾಪನೆಗೆ ತಮ್ಮ ಬದ್ಧತೆಯನ್ನು ಅವರು ಸರ್ವಾನುಮತದಿಂದ ಪುನರುಚ್ಚರಿಸಿದರು.

ವೇದಿಕೆಯು ನವ ಉದಾರವಾದದ ಅಪಾಯಗಳನ್ನು ಮತ್ತು ಪ್ರಪಂಚದಾದ್ಯಂತ ಫ್ಯಾಸಿಸ್ಟ್ ಶಕ್ತಿಗಳ ಉದಯಕ್ಕೆ ಅದು ಸೃಷ್ಟಿಸುವ ಅನುಕೂಲಕರ ಪರಿಸ್ಥಿತಿಗಳನ್ನು ಎತ್ತಿ ತೋರಿಸಿತು. ವೇದಿಕೆಯಲ್ಲಿ ಭಾಗವಹಿಸಿದ್ದ ಕಮ್ಯೂನಿಸ್ಟ್ ಪಕ್ಷಗಳು ಸಾಮ್ರಾಜ್ಯಶಾಹಿ, ನವ ಉದಾರವಾದದ ದಾಳಿಗಳು ಮತ್ತು ಆಯಾ ದೇಶಗಳಲ್ಲಿ ಆಳುವ ವರ್ಗಗಳು ಪ್ರಚಾರ ಮಾಡುವ ವಿಭಜಕ ರಾಜಕೀಯದ ವಿರುದ್ಧ ಹೋರಾಡುವ ತಮ್ಮ ಸಂಕಲ್ಪವನ್ನು ಪುನರುಚ್ಚರಿಸಿದವು.

ಜನರ ಏಕತೆಯ ಮೂಲಕ ಮಾತ್ರ ಫ್ಯಾಸಿಸಂ ಅನ್ನು ಎದುರಿಸಬಹುದು ಎಂದು ಇತಿಹಾಸವು ತೋರಿಸಿದೆ. ಫ್ಯಾಸಿಸ್ಟ್ ದಾಳಿಯನ್ನು ವಿರೋಧಿಸುವಲ್ಲಿ ಮತ್ತು ಅಂತಿಮವಾಗಿ ಸೋಲಿಸುವಲ್ಲಿ ವ್ಯಾಪಕವಾಗಿ ಎಲ್ಲ ಜನವಿಭಾಗಗಳನ್ನು ಸಜ್ಜುಗೊಳಿಸುವಲ್ಲಿ ಕಾರ್ಮಿಕ ವರ್ಗ ಮತ್ತು ಸಮಾಜದ ಇತರ ಶ್ರಮಜೀವಿ ವರ್ಗಗಳ ಐಕ್ಯತೆಯು ಅಡಿಪಾಯ ಹಾಕುತ್ತದೆ ಎಂಬುದನ್ನು ಎಂಟು ದಶಕಗಳ ಹಿಂದಿನ ವಿಜಯದ ಅನುಭವ ತಿಳಿಸುತ್ತದೆ ಎಂದು ಚರ್ಚೆಯಲ್ಲಿ ಭಾಗವಹಿಸಿದವರು ಹೇಳಿದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**